
ಕಲ್ಯಾಣ ಕಿರಣ


ಜೂನ್ ೨೦೦೭



ಬೆಲೆ ೬/-



ಪೂಜ್ಯ ಗಂಗಾ ಮಾತಾಜಿಯವರಿಂದ ಕಲ್ಯಾಣ ಪರ್ವ ಉದ್ಘಾಟನೆ



ಕಲ್ಯಾಣದ ಬಸವ ಮಹಾಮನೆ ಆವರಣದಲ್ಲಿ ನಿರ್ಮಾಣವಾಗುತ್ತಿರುವ
ಬಸವ ಮಂಟಪ-ಪ್ರಾರ್ಥನಾ ಮಂದಿರ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-37 ಬಸವ ಶಕೆ-874 ಆಜೀವ ಸದಸ್ಯತ್ವ 600 ರೂ.
ಸಂಚಿಕೆ-2 ಜೂನ್-2007 ವಾರ್ಷಿಕ ಚಂದಾ 60/- ರೂ.

ಗುರು ಸ್ಮರಣೆ



ಈ ಬಗೆಯ ನಿಲುವ ಇನ್ನಾವ ಜಂಗಮದೊಳು ಕಾಣೆ
ಬಸವ ಕರುಣೆಯ ಕಿರಣ ಗುರು ಲಿಂಗಾನಂದರಲಲ್ಲದೆ ॥ಪ॥
ಹರಿವ ಗಂಗೆಯ ತೆರದಿ ಜಗದ ಬಯಲಲಿ ಚರಿಸಿ
ವರ ಭಕ್ತಿ-ಜ್ಞಾನಗಳ ಬೆಳೆ ತೆಗೆದ ಗುರುವೆ।
ಬಸವ ಧರ್ಮದ ಪ್ರಭೆಯ ಪುನಃ ಬೆಳಗಿದ ಯೋಗಿ
ಬಸವ ಸಾಮ್ರಾಜ್ಯವನ್ನು ಕಟ್ಟಿದ ಮಹತ್ಯಾಗಿ ॥1॥
ಮನುಗೂಳಿಯಲಿ ಜನಿಸಿ ವಿಜಯಪುರದೊಳು ಓದಿ
ಬೆಳಗಾಂವಿಯ ನೆಲದಿ ಪದವಿಯಂ ಪಡೆದು।
ಧಾರವಾಡದಿ ಜ್ಞಾನ ಸಂಪದವ ಸಂಚಯಿಸಿ
ಚರಿಪ ಮಾರುತವಾಗಿ ಸುಳಿದ ಜ್ಞಾನದಾಸೋಹಿ ॥2॥



ಮಲ್ಲಪ್ಪ ಕಲ್ಲಮ್ಮ ದಂಪತಿಯ ಶಿಶುವಾಗಿ
ಚೆಲುವಿನಾ ಕಾಯವನು ಧರಿಸಿದ ಶಿವದೇಹಿ।
ಸಂಗಮೇಶನೆಂಬ ದಿವ್ಯ ನಾಮದಿ ಬೆಳೆದು
ಆದೆ ಲಿಂಗಾನಂದ ಬಸವ ಕರುಣೆಯ ಪಡೆದು ॥3॥
ಮಹಿಳಾಗುರು ಪೀಠವಂ ಸ್ಥಾಪಿಸಿದ ಮಹಾಗುರು
ಮಹಮನೆಯ ಆಸರೆಯ ನೀಡಿದ ಕಲ್ಪತರು।
ಕೂಡಲ ಸಂಗಮದ ಬಸವ ಧರ್ಮದ ಪೀಠ
ಏರಿ ಜಗದ್ಗುರುವಾಗಿ ಬೆಳಗಿದ ಸುವಿರಾಗಿ ॥4॥



ರಾಷ್ಟ್ರ ಪ್ರೇಮದ ಕಣಿಯೆ ಸತ್ಯನಿಷ್ಠೆಯ ಕಲಿಯೆ
ರಾಷ್ಟ್ರೀಯ ಬಸವ ದಳ ಸ್ಥಾಪಿಸಿದ ತತ್ತ್ವವಾದಿ।
ಪ್ರವಚನದ ಪಟುವಾಗಿ ಜ್ಞಾನ ನೀಡಿದ ಮೂರ್ತಿ
ವಚನ ವಾಙ್ಮಯ ಕೀರ್ತಿ ಪಸರಿಸಿದ ಗುರು ಜ್ಯೋತಿ॥5॥
ಚೈತನ್ಯ ಚಿಲುಮೆಯೆ ಸತ್ಯ ಚಿಂತನ ನಿಧಿಯೆ
ಜಾತಿವಾದವ ಜರಿದ ವಿಶ್ವಪ್ರೇಮದ ಸುಧೆಯೆ।
ಶರಣ ಧರ್ಮದ ದಿವ್ಯ ವರರತ್ನ ತಾವು
ಎಂದು ಬಸವಾತ್ಮಜೆಯು ನಿತ್ಯ ನೆನೆಯುವೆ ನಾನು ॥6॥

-ಮಾತಾಜಿ

★ ಕಲ್ಯಾಣ ಕಿರಣ ★

ಕಿರಣ ಗನ್ನಡಿ



ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ ।
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸತ್ ಚಿತ್ ಆನಂದನ ಶುಭ ರಕ್ಷೆಯು ತಮಗಿದೆ ॥

ದಿ. 30-6-2007ರಂದು ಪೂಜ್ಯ ಶ್ರೀ ಲಿಂಗಾನಂದ
ಅಪ್ಪಾಜಿಯವರ ಸಂಸ್ಮರಣೆ

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, at Padmashri Printers. Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ಸಂಕಲ್ಪದಲ್ಲಿ ಶಕ್ತಿ ಇದೆ

-ಮಾತಾಜಿ

ದಿ.25-05-2007 ರಂದು ಓರ್ವ ಸದ್ಭಕ್ತರ ದೂರವಾಣಿ ಬಂದಿತು. ಅವರು ಮಂಗಳೂರಿನ ಶಂಕರಿ ಅಮ್ಮ; 1979ರಲ್ಲಿ ಅಲ್ಲಿ ನನ್ನ ಪ್ರವಚನವಾದಾಗ ಮಂತ್ರದೀಕ್ಷೆಯನ್ನು ಪಡೆದಿದ್ದರು. ಯಾವಾಗಲಾದರೊಮ್ಮೆ ಗುರು ದರ್ಶನಕ್ಕೆ ಬರುತ್ತಾರೆ. ಪ್ರತಿ ವರ್ಷ ತಪ್ಪದೆ ಕಾಣಿಕೆ ಕಳಿಸುತ್ತಾರೆ. ಧ್ವನಿ ಕೇಳಿ ಸಂತೋಷವಾಯಿತು.

"ನನಗೆ ತಮ್ಮ ದರ್ಶನಕ್ಕೆ ಬರಬೇಕೆಂದು ತುಂಬಾ ಆಸೆಯಾಗಿದೆ. ಹೈದರಾಬಾದಿಗೆ ನಮ್ಮ ಅಕ್ಕನ ಮಗಳ ಗೃಹ ಪ್ರವೇಶಕ್ಕೆ ಹೋಗಿದ್ದೆವು."

"ಬನ್ನಿರಿ, ಬೆಂಗಳೂರಿನಲ್ಲೇ ಇದ್ದೇನೆ."

"ಆಗುವುದಿಲ್ಲ. ನನಗೆ ವಯಸ್ಸಾಯಿತು. ಒಬ್ಬಳೇ ಓಡಾಡಲಾರೆ. ರಾಜಾಜಿನಗರ ತುಂಬಾ ದೂರ. ನಾವು ಉಳಿದಿರುವುದು ಏರ್‌ಪೋರ್ಟಿಗೆ ಹತ್ತಿರದಲ್ಲಿರುವ ಪರಿಚಿತರ ಮನೆಯಲ್ಲಿ. ನನ್ನನ್ನು ಅಲ್ಲಿಗೆ ಕರೆದುಕೊಂಡು ಬರಲು ಯಾರು ಇಲ್ಲ." ಎಂದು ಕಳವಳಿಸಿದರು.

ಏರ್‌ಪೋರ್ಟಿಗೆ ಹತ್ತಿರದ ಮನೆಯಲ್ಲಿ ಉಳಿದಿರುವುದು ಎಂದು ಹೇಳಿದ ತಕ್ಷಣ ನನಗೆ ನೆನಪಾಯಿತು ನಾನು ಮರುದಿನವೇ ಹೈದರಾಬಾದಿಗೆ ಆಂಧ್ರಪ್ರದೇಶ್ ರಾಷ್ಟ್ರೀಯ ಬಸವ ದಳ ಅಧ್ಯಕ್ಷರಾದ ಧನರಾಜ ಜೀರಗೆ ಅವರ ಮನೆಯ ಗೃಹಪ್ರವೇಶ ಕಾರ್ಯಕ್ರಮಕ್ಕೆ ಹೋಗುವುದಿತ್ತು. ಏರ್‌ಪೋರ್ಟಿಗೇ ಬರಲು ಹೇಳಿ ಬಿಡೋಣ ಎಂದುಕೊಂಡೆ. ಆದರೆ ಅತ್ತಕಡೆ ಫೋನ್ ಕಟ್ ಆಯಿತು; ಸುಮ್ಮನಾದೆ.

ಮರುದಿನ ನಮ್ಮ ವಿಮಾನದ ನಿರ್ಗಮನ ಇದ್ದುದು ಸಂಜೆ 5-30ಕ್ಕೆ. ಸಮಯಕ್ಕೆ ಸರಿಯಾಗಿ ವಿಮಾನ ನಿಲ್ದಾಣಕ್ಕೆ ಬಂದು, ಸೆಕ್ಯುರಿಟಿ ಚೆಕ್ ಎಲ್ಲ ಮುಗಿಸಿ ಒಳಕ್ಕೆ ಬಂದಾಗ ವಿಮಾನವು ಅರ್ಧಗಂಟೆ ತಡವಾಗಿ 6 ಗಂಟೆಗೆ ಹೊರಡಲಿದೆ. ಎಂದು ತಿಳಿಸಿದರು. ಮತ್ತೂ ತಡವಾಗಿ ಆರೂವರೆಯಾದರೂ ವಿಮಾನ ಹೊರಡಲಿಲ್ಲ. ಕಾಯುತ್ತ ಕುಳಿತಿರುವಾಗಲೇ ಇಬ್ಬರು ವ್ಯಕ್ತಿಗಳು ಆಗಮಿಸಿ ನಮಸ್ಕಾರ ಮಾಡಿದಾಗ ತಲೆ ಎತ್ತಿ ನೋಡಿದೆ. ಎದುರಿಗೆ ಶಂಕರಿ ಅಮ್ಮ ಮತ್ತು ಅವರ ಮಗಳು. ಅವರಿಗೆ ಅತ್ಯಂತ ಹೆಚ್ಚಿನ ಸಂತೋಷ ಉಂಟಾಯಿತು.

ಮಂಗಳೂರಿಗೆ ವಿಮಾನ ಹತ್ತಲು ಬಂದಿದ್ದರು. ನನ್ನನ್ನು ನೋಡಿ ಸಂಭ್ರಾಂತರಾದರು. ದರ್ಶನ ಪಡೆದು ಕೊಂಡುದಲ್ಲದೆ ಒಂದು ಸಾವಿರ ರೂಗಳ ಕಾಣಿಕೆ ನೀಡಿದರು. ಬೆಂಗಳೂರಿಗೆ ಬಂದು ಸಹ ನಿಮ್ಮನ್ನು ದರ್ಶಿಸಲು ಆಗದೆ ಹೋಗುತ್ತಿದ್ದುದಕೆ ನಿನ್ನೆಯಿಂದ ಬಹಳ ವ್ಯಥೆ ಪಡುತಲಿದ್ದೆ; ಮನಸಿಗೆ ಸಮಾಧಾನವೇ ಇರಲಿಲ್ಲ ಎಂದರು. ನನಗಾದರೂ ಅಷ್ಟೇ. ಆದರೆ ಎಷ್ಟು ವಿಚಿತ್ರ; ಐದೂವರೆಗೆ ಹೊರಡಬೇಕಾದ ವಿಮಾನ ಆರೂ ಮುಕ್ಕಾಲಿಗೆ ಹೊರಟುದು, ಶಂಕರಿ ಅಮ್ಮ ಆರೂ ನಲವತ್ತಕ್ಕೆ ಆಕಸ್ಮಿಕವಾಗಿ ಭೇಟಿಯಾದುದು ಎಲ್ಲ ಸೋಜಿಗವೆನಿಸಿತು. ಸಂಕಲ್ಪವು ಬಹಳ ಶಕ್ತಿಶಾಲಿಯಾದುದು. ಸಾಧ್ಯವಾಗುತ್ತದೋ ಬಿಡುತ್ತದೋ ಎಂದು ಹೊಯ್ದಾಡದೆ ಸಂಕಲ್ಪ ಮಾಡಿದರೆ ಎಂದಾದರೂ ಅದು ಸಾಧ್ಯವಾದೀತು.

ಈ ವಿಷಯದಲ್ಲಿ ನನಗೆ ಮತ್ತೊಂದು ನೆನಪಿಗೆ ಬರುತ್ತದೆ. ನಾವು ಬಹಳ ಹಿಂದೆ ಕನ್ಯಾಕುಮಾರಿಗೆ ಸದ್ಭಕ್ತರೊಡನೆ ಪ್ರವಾಸ ಹೋಗಿದ್ದೆವು. ವಿವೇಕಾನಂದ ಶಿಲಾ ಸ್ಮಾರಕದ ಮುಂದೆ ನಿಂತು ನೋಡುವಾಗ ಮನಸ್ಸಿನಲ್ಲಿ ಒಂದು ಆಸೆ ಮೊಳೆಯಿತು. ನಮ್ಮ ಶರಣರ ಯಾವುದೊಂದು ಕ್ಷೇತ್ರವೂ ಸಮುದ್ರ ದಂಡೆಯ ಮೇಲಿಲ್ಲ. ವಿಶಾಲವಾಗಿ ನಿಂತ ನೀರು; ಮಧ್ಯೆ ಶರಣ ಸ್ಮಾರಕ ಇದ್ದರೆ ಎಷ್ಟು ಚಂದ! ನನ್ನ ಹುಚ್ಚು ಆಸೆಗೆ ನನಗೇ ನಗು ಬಂದಿತ್ತು.

ಇಂದು ಧರ್ಮಗುರು ಬಸವಣ್ಣನವರ ಲಿಂಗೈಕ್ಯ ಮಂಟಪ ನೋಡಿದಾಗ ಅದು ಯಾವ ಕನ್ಯಾಕುಮಾರಿಗಿಂತಲೂ ಕಡಿಮೆ ಇಲ್ಲ ಎನ್ನಿಸುವುದು. ಮಳೆಗಾಲದಲ್ಲಿ ನೀರು ವಿಸ್ತಾರಗೊಂಡು ನಿಂತಾಗ ಸಮುದ್ರದಂತೆ ಕಾಣುತ್ತದೆ; ಮಧ್ಯೆ ಬಸವಣ್ಣನವರ ಲಿಂಗೈಕ್ಯ ಮಂಟಪ ಸುಂದರವಾಗಿ ತಲೆ ಎತ್ತಿ ನಿಂತಿದೆ. ಅದೇ ರೀತಿ ತಾಯಿ ನೀಲಾಂಬಿಕೆಯವರ ಲಿಂಗೈಕ್ಯ ಮಂಟಪ ಸಹಿತ ಬಹು ಸುಂದರ. ಬಸವ ಗುರು ಕೃಪೆಯಿಂದ ಅಸಾಧ್ಯ ಸಾಧ್ಯವಾಯಿತು. ಅಭೇದ್ಯ ಭೇದ್ಯವಾಯಿತು ಎಂಬುದು ಪರಮ ಸತ್ಯ. ಅದೇ ಹಿನ್ನೆಲೆಯಲ್ಲೇ ನಾರಾಯಣಪುರ ಜಲಾಶಯಕ್ಕೆ ಇಂದಿರಾ ಸಾಗರ ಎಂದು ಹೆಸರಿಡುವ ಸಿದ್ಧತೆ ನಡೆದಾಗ ಒಂದು ಪೋಸ್ಟರು ತಂದು ಅದರ ಮೇಲೆ ಹಿಂದೂ ಮಹಾಸಾಗರ ಎಂಬುದನ್ನು ಸಂಕೇತಿಸುವಂತೆ ಬಸವ ಸಾಗರ ಎಂದು ಬರೆದು ಬೆಂಗಳೂರಿನಲ್ಲಿ ನಡೆದ ಬಸವ ಜಯಂತಿಗೆ ಉದ್ಘಾಟಕರಾಗಿ ಆಗಮಿಸಿದ್ದ ಶ್ರೀ ರಾಮಕೃಷ್ಣ ಹೆಗಡೆ ಅವರಿಗೆ ಆ ಚಿತ್ರವನ್ನು ಅರ್ಪಿಸಿ, ಜಲಾಶಯಕ್ಕೆ ಬಸವ ಸಾಗರ ಎಂದು ಹೆಸರಿಡಲು ಮನವಿ ಅರ್ಪಿಸಿದ್ದೆವು.

1. ಜೈನ ಧರ್ಮ ವಿಶ್ವ ಧರ್ಮ

-ಮಾತಾಜಿ

(ನಗ್ನ ಸತ್ಯ ಮುನಿ ಶ್ರೀ ತರುಣಸಾಗರಜಿ : ಮಹಾವೀರರ ಮಂದಿರಕ್ಕೆ ಎಲ್ಲರಿಗೂ ಪ್ರವೇಶ ವಿರಬೇಕು. ಯಾರ ಪ್ರವೇಶಕ್ಕೂ ನಿಷೇಧ ಇರಬಾರದು. ಕಾರಣ "ಮಂದಿರಗಳ ನಿರ್ಮಾಣ ಮನುಷ್ಯರಿಗಾಗಿ ಅತ್ಯಂತ ಪಾಪಿ ವ್ಯಕ್ತಿಗೂ ಮಹಾವೀರರ ಬಳಿ ತಲುಪುವ ಹಕ್ಕಿರಬೇಕು. ಆಗಲೇ ಜೈನ ಧರ್ಮ ವಿಶ್ವ ಧರ್ಮವಾಗಬಲ್ಲದು. ಒಂದು ವೇಳೆ ಅದು ಸಾಧ್ಯವಾಗದಿದ್ದರೆ, ಪ್ರತಿ ಮಾನವನ ಬಳಿಗೂ ಮಹಾವೀರರೇ ತಲುಪಲು ಸಾಧ್ಯವಾಗಬೇಕು. ನಾವು ಎರಡರಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಳ್ಳಬೇಕು. ಒಂದು, ಪ್ರತಿಯೊಬ್ಬನಿಗೂ ಮಹಾವೀರರ ಬಳಿ ತಲುಪಲು ಅಧಿಕಾರವಿರಬೇಕು ಅಥವಾ ಮಹಾವೀರರನ್ನೇ ಪ್ರತಿಯೊಬ್ಬರ ಬಳಿ ತಲುಪಿಸುವಂತಾಗಬೇಕು.

-ವಿಜಯ ಕರ್ನಾಟಕ 8-5-07)

ಜಗತ್ತಿನಲ್ಲಿ ಜೈನ ಧರ್ಮೀಯರ ಸಂಖ್ಯೆ ಹೆಚ್ಚಿಲ್ಲ; ಅವರ ನಂತರದ ಸಂಖ್ಯೆ ಸಿಖ್ಖರದು; ಆ ನಂತರದ ಹೆಚ್ಚಿನ ಸಂಖ್ಯೆ ಲಿಂಗಾಯತರದ್ದು. ಜೈನ ಮತ್ತು ಲಿಂಗಾಯತ ಧರ್ಮಗಳು ಶುದ್ಧ ಸಸ್ಯಾಹಾರಿ, ಅಹಿಂಸಾತ್ಮಕ ಧರ್ಮಗಳಾದ್ದರಿಂದ ಅವು ಸಂಖ್ಯೆಯಲ್ಲಿ ತೀವ್ರವಾಗಿ ಮತ್ತು ವ್ಯಾಪಕವಾಗಿ ಬೆಳೆದಿಲ್ಲ. ಹೀಗಿರುವಾಗ ಪೂಜ್ಯ ಮುನಿ ಶ್ರೀ ತರುಣ ಸಾಗರಜೀಯರು ಜೈನ ಧರ್ಮವನ್ನು ವಿಶ್ವಧರ್ಮ ಎಂದಿದ್ದಾರಲ್ಲ ? ಇದು ಸರಿಯೆ? ನಾವು ಸಹ ಗುರು ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮವು ವಿಶ್ವಧರ್ಮ ಎನ್ನುತ್ತೇವೆ. ಇದು ತಪ್ಪಲ್ಲವೆ ಎಂದು ಕೆಲವರ ಸಂದೇಶ.

"ಫಿಲಾಸಫಿ ಆಫ್ ರಿಲಿಜಿಯನ್"ದಲ್ಲಿ ಬಣ-ಬುಡಕಟ್ಟು ಧರ್ಮ(Tribal Religion) ರಾಷ್ಟ್ರೀಯ ಧರ್ಮ (Natonal Religion) ಮತ್ತು ವಿಶ್ವಧರ್ಮಗಳ ವ್ಯಾಖ್ಯಾನ ಕೊಡಲಾಗುವುದು. ಬುಡಕಟ್ಟು ಜನರು ಸಹ ತಮ್ಮದೇ ಆದ ಕೆಲವು ನಂಬಿಕೆ ಹೊಂದಿ, ಆಚರಣೆಗಳನ್ನು ಮಾಡುವರು. ಇವಕ್ಕೆ ಹೆಚ್ಚಿನ ವೈಜ್ಞಾನಿಕ ಅರ್ಥವಿರದು. ರಾಷ್ಟ್ರೀಯ ಧರ್ಮಗಳು ಭೌಗೋಳಿಕವಾಗಿ ಬೆಳೆದಿರುತ್ತವೆ. ಇಲ್ಲಿ ಧಾರ್ಮಿಕ ಅನುಯಾಯಿತ್ವವು ಹುಟ್ಟಿನಿಂದ ಬರುತ್ತದೆ. ಅನ್ಯರಿಗೆ ದೀಕ್ಷೆ ಕೊಟ್ಟು ಅವರನ್ನು ಒಳಗೆ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ ಪಾರ್ಸಿ, ಯಹೂದಿ ಮತ್ತು ಹಿಂದೂ ಧರ್ಮಗಳು. ಯಹೂದಿತ್ವವು ಹುಟ್ಟಿನಿಂದ ಮಾತ್ರ ಬರುತ್ತದೆ. ದೀಕ್ಷೆಯ ಮೂಲಕ ಯಾರೂ ಪಾರ್ಸಿ, ಯಹೂದಿ ಹಿಂದುವಾಗಲು ಬರುವುದಿಲ್ಲ. ಈ ಸಮಾಜಗಳು ಜನನ ಮೂಲದಿಂದ ಮಾತ್ರ ವೃದ್ಧಿಯಾಗುತ್ತದೆ.

ವಿಶ್ವಧರ್ಮ ಎಂದರೆ ಎಲ್ಲೆಡೆಯಲ್ಲಿ ವ್ಯಾಪಕವಾಗಿರುವ ಧರ್ಮ ಎಂದು ವ್ಯಾಖ್ಯಾನಿಸಲಾಗದು; ದೇಶ, ಭಾಷೆ, ಜಾತಿ, ಮತ, ಉದ್ಯೋಗ, ಲಿಂಗಭೇದವಿಲ್ಲದೆ ಎಲ್ಲರಿಗೂ ಧಾರ್ಮಿಕ ಸಂಸ್ಕಾರವನ್ನು ನೀಡುವುದು ವಿಶ್ವಧರ್ಮ. ಎಲ್ಲರಿಗೂ ಅನ್ವಯವಾಗುವ ಮೌಲ್ಯಗಳನ್ನು ಬೋಧಿಸುವುದು ವಿಶ್ವಧರ್ಮ. ಈ ದೃಷ್ಟಿಯಿಂದ ಜೈನ, ಬೌದ್ಧ, ಸಿಖ್, ಲಿಂಗಾಯತ ಎಂಬ ಭಾರತೀಯ ಧರ್ಮಗಳು ಕ್ರೈಸ್ತ, ಇಸ್ಲಾಂ ಎಂಬ ವಿದೇಶಿ ಧರ್ಮಗಳು ವಿಶ್ವಧರ್ಮಗಳು ಎನಿಸಿಕೊಳ್ಳುತ್ತವೆ.

ಮುನಿ ಶ್ರೀ ತರುಣ ಸಾಗರಜಿ ಮತ್ತೊಂದು ಮಾತು ಹೇಳಿದ್ದಾರೆ.ಮಹಾವೀರ ಮಂದಿರಕ್ಕೆ ಎಲ್ಲರಿಗೂ ಪ್ರವೇಶವಿರಬೇಕು. ಪ್ರತಿಯೊಬ್ಬನಿಗೂ ಮಹಾವೀರರ ಬಳಿಗೆ ತಲುಪಲು ಅಧಿಕಾರ ವಿರಬೇಕು. ಅಥವಾ ಮಹಾವೀರರನನ್ನೇ ಪ್ರತಿಯೊಬ್ಬರ ಬಳಿ ತಲುಪಿಸುವಂತಾಗಬೇಕು:

ಈ ಮಾತುಗಳು ಬಸವ ಮಂಟಪ, ವಿಶ್ವಗುರು ಬಸವಣ್ಣನವರು ಮತ್ತು ಅವರ ತತ್ವಗಳಿಗೂ ಅನ್ವಯವಾಗುತ್ತವೆ. 2000ವರ್ಷಗಳ ಹಿಂದೆ ಹುಟ್ಟಿದ ಜೈನ ಧರ್ಮ ಮತ್ತು ಎಂಟೂವರೆ ನೂರು ವರ್ಷಗಳ ಹಿಂದೆ ಹುಟ್ಟಿದ ಲಿಂಗಾಯತ ಧರ್ಮ ಮೂಲತಃ ಸುಧಾರಣಾವಾದಿ, ಅವೈದಿಕ ಧರ್ಮಗಳು. ಎಲ್ಲರಿಗೂ ಧರ್ಮ ಸಂಸ್ಕಾರ ನೀಡುವ ಘನೋದ್ದೇಶದಿಂದ ಅದರ ಸಂಸ್ಥಾಪಕರು ಸ್ಥಾಪಿಸಿದ ಧರ್ಮಗಳು. ಆದರೆ ಇಂದು ಅವುಗಳ ಅನುಯಾಯಿಗಳು ಮಡುಗಟ್ಟಿನಿಂತ ವಿಚಾರಗಳ

ಆಗರವಾಗಿದ್ದಾರೆ. ಧರ್ಮಗುರು ಬಸವಣ್ಣನವರು ಯಾವ ಯಾವ ನಂಬಿಕೆ, ಆಚರಣೆಗಳನ್ನು ನಿರೋಧಿಸಿ ಸಮಾಜದಿಂದ ಕಿತ್ತೆಸೆದಿದ್ದರೋ ಅವೆಲ್ಲವನ್ನೂ ತಂದು ಭದ್ರವಾಗಿ ಇಟ್ಟುಕೊಂಡು, ಆಚರಿಸುತ್ತಿದ್ದಾರೆ. ಮಹಾವೀರ ಮಂದಿರ, ಬಸವ ಮಂಟಪಗಳು ಪ್ರಗತಿಪರ ಮನೋಭಾವದವಾದರೆ ಅನ್ಯ ಧರ್ಮಗಳಿಗೆ ಆಗುವ ಮತಾಂತರವನ್ನು ಸಾಕಷ್ಟು ತಡೆಗಟ್ಟಬಹುದು. ಆದರೆ ಈಗ ಟ್ರೇನಿನಲ್ಲಿ ಒಳಗೇರಿ ಬೋಲ್ಟ್ ಹಾಕಿಕೊಂಡು ಅನ್ಯರು ಹತ್ತಬಾರದೆಂದು ಚಿಂತನೆ ಮಾಡುತ್ತಿರುವವರ ಮನೋಭಾವ ಹೊಂದಿರುವ ಬಹುಪಾಲು ಜೈನರು ಹಾಗೂ ಲಿಂಗಾಯತರಿಗೆ ಮಹಾವೀರ ಮತ್ತು ಬಸವಣ್ಣನವರ, ಮುನಿ ಶ್ರೀ ತರುಣಸಾಗರಜಿ ಮತ್ತು ನಮ್ಮಂತಹವರ ಕರೆಯಾದರೂ ಕಿವಿಗೆ ಕೇಳೀತೆ? ಅಂತರಂಗದ ಕದವನ್ನು ತಟ್ಟೀತೆ?

ಆದ್ದರಿಂದ ಈಗಿರುವ ದಾರಿಯೊಂದೇ ಮಹಾವೀರ, ಬಸವಣ್ಣ, ಗಾಂಧೀಜಿಯಂತಹವರ ಸಂದೇಶಗಳನ್ನು (ಧರ್ಮನಿರಪೇಕ್ಷಿತವಾಗಿ)ಅಧ್ಯಾತ್ಮಿಕ ದೃಷ್ಟಿಯಿಂದ ಎಲ್ಲರಿಗೂ ತಲುಪಿಸುವುದು. ಹಾಲಿನ ಹಳ್ಳ ಹರಿದಾಗ ಯಾರು ಬೇಕಾದರೂ ತುಂಬಿಕೊಳ್ಳುವಂತೆ, ಅವುಗಳ ಸ್ಪರ್ಶದಿಂದ ಧನ್ಯರಾಗುವವರು ಆಗಲಿ !

ಬಾಳೊಂದು ವರ, ಬದುಕೊಂದು ಕಲೆ -4

-ಮಾತಾಜಿ

ಮಕ್ಕಳು ದೇವರಂತೆ

ಸಾಮಾನ್ಯವಾಗಿ ಮಾತನಾಡುವಾಗ ಅವನು ಬಹಳ ಒಳ್ಳೆಯವನು, ಮಗುವಿನಂತೆ; ಎನ್ನಲಾಗುವುದು. ಮಕ್ಕಳು ದೇವರಂತೆ ಎಂದು ಬಣ್ಣಿಸಲಾಗುವುದು. ಕಳೆದ ಸಂಚಿಕೆಯಲ್ಲಿ ನಾನು ಮಗುವನ್ನು ಕುರಿತು ನೆಗೆಟಿವ್-ನಿಷೇಧಾತ್ಮಕ ಲಕ್ಷಣಗಳನ್ನು ಹೇಳಿ, ಅವು ಸಹಜ ಪ್ರವೃತ್ತಿ ಅವನ್ನು ಗೆಲ್ಲಬೇಕು ಎಂದು ಬರೆದಿದ್ದೆ. ಈ ಬಾರಿ ಮಕ್ಕಳಲ್ಲಿ ಇರುವ ಒಳ್ಳೆಯ ಅಂಶಗಳನ್ನು ವಿವರಿಸುತ್ತೇನೆ.

1. ಕ್ರಿಯಾಶೀಲತೆ, ಅನ್ವೇಷಣೆ

ಸಾಮಾನ್ಯವಾಗಿ ಮಕ್ಕಳು ಸದಾ ಕ್ರಿಯಾಶೀಲವಾಗಿರುತ್ತವೆ. ಓಡಾಡಲು ಬಂದ ಮೇಲಂತೂ ಅವನ್ನು ಹಿಡಿಯುವುದು, ಕಾಯುವುದು ಬಲು ಕಷ್ಟ, ಪಾಲಕರಿಗೆ ಸ್ವಲ್ಪ ಕಿರಿ ಕಿರಿ ಆಗುವುದು ನಿಜ. ಆದರೆ ಚಟುವಟಿಕೆಯಿಂದ ಇರುವ ಮಕ್ಕಳೇ ಸಾಮಾನ್ಯವಾಗಿ ಎಲ್ಲರನ್ನು ಆಕರ್ಷಿಸುತ್ತವೆ. ಕೆಲವು ಮಕ್ಕಳು (Hyperactive)ಅತಿ ಚಟುವಟಿಕೆಯಿಂದ ಕೂಡಿ ಧ್ವಂಸ ಕಾರ್ಯದಲ್ಲಿ ನಿರತವಾಗಿರುತ್ತವೆ. ಅವುಗಳಿಗೆ ಚಿಂತನ ಶಕ್ತಿ ಕಡಿಮೆ ಎಂದು ನಾವು ಗ್ರಹಿಸಬಹುದು. ಆರೋಗ್ಯ ಯುಕ್ತ ಮಕ್ಕಳು ಚಟುವಟಿಕೆಯಿಂದ ಕೂಡಿರುತ್ತವೆ. ನಮ್ಮ ಶರೀರ, ಮನಸ್ಸುಗಳನ್ನು ನಾವು ಸದಾ ಕೆಲಸದಲ್ಲಿ ತೊಡಗಿಸಬೇಕು. ಅವುಗಳನ್ನು ಖಾಲಿ ಕೂಡಿಸಿದರೆ ಶರೀರಕ್ಕೆ ಆಲಸ್ಯ, ಮನಸ್ಸಿಗೆ ಚಿಂತೆ ಅಥವಾ ದೂಷಿಸುವ ಚಪಲ ಅಂಟಿಕೊಳ್ಳುತ್ತವೆ.

2. ನಿರ್ವೈರ

ಚಿಕ್ಕ ಮಕ್ಕಳದು ಕೋಪ ರಹಿತ , ನಿರ್ವೈರ ಸ್ಥಿತಿ. ತಾಯಿ ಏನಾದರೂ ಸಿಟ್ಟಿಗೆದ್ದು ಕೋಪದಿಂದ ಹೊಡೆದರೂ ಮಗು ಪುನಃ ತಾಯಿಯನ್ನು ಅಮರಿಕೊಳ್ಳುತ್ತದೆ. ಹಾಗೆ ಮಾನವನು ಭಕ್ತನ ಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರೂ ದೇವರಲ್ಲಿ ಶರಣಾಗತಿ ಭಾವವನ್ನು ತೊರೆಯಬಾರದು. ದೇವರನ್ನು ನಂಬಿದ್ದೇನೆ, ಅವನು ನನ್ನ ಕೈಬಿಡುವುದಿಲ್ಲ ಎಂಬ ವಿಶ್ವಾಸ ದೃಢವಾಗಿ ಇರಬೇಕು.

ಮಕ್ಕಳು ಬಹು ಬೇಗನೇ ವೈರತ್ವವನ್ನು ತೊರೆಯುತ್ತವೆ. ದೊಡ್ಡವನಾದ ಮನುಷ್ಯ ಎಂದೆಂದಿನ ಕಾರಣಗಳನ್ನು ತೆಗೆದುಕೊಂಡು ದ್ವೇಷವನ್ನು ಇಲ್ಲದಿದ್ದರೆ ಹಠವನ್ನು ಸಾಧಿಸುತ್ತಾನೆ. ಕೆಲವರಂತೂ ಹಾಗೆ ಸಾಧಿಸುವುದು ತಮ್ಮ ಹಿರಿಮೆ ಎಂದು ಕೊಚ್ಚಿಕೊಳ್ಳುತ್ತಾರೆ. ಒಬ್ಬರು ಹೇಳುತ್ತಿದ್ದರು "ಏನೋ ಅಂದ ಅಂತ ನಮ್ಮ ಅಪ್ಪನನ್ನೇ ನಾನು ಸಾಯುವ ತನಕ ಮಾತನಾಡಿಸಲಿಲ್ಲ." ಕೋಪ, ದ್ವೇಷ, ವೈರತ್ವ ಮನಸ್ಸಿನ ದೌರ್ಬಲ್ಯ ಎಂಬುದನ್ನು ಅರಿಯದ ಇಂಥವರು ತಮ್ಮ ದೌರ್ಬಲ್ಯವನ್ನು ಸದ್ಗುಣ, ಹಿರಿಮೆ ಎಂಬಂತೆ

ಬಣ್ಣಿಸಿ ಕೊಳ್ಳುವರು.

ರಷ್ಯದ ಒಂದು ಕಥೆ ಹೀಗಿದೆ. ಮನೆಯ ಮುಂದೆ ಒಂದು ಮರಳಿನ ಗುಡ್ಡೆ ಇತ್ತು, ಮಕ್ಕಳು ಆಟವಾಡಿಕೊಳ್ಳುತ್ತಿದ್ದರು. ಇಬ್ಬರು ಮಕ್ಕಳಲ್ಲಿ ಜಗಳ ಬಂದು ಹೊಡೆದಾಡಿ ಕೊಂಡವು. ಎರಡೂ ಒಳಗೆ ಹೋಗಿ ತಾಯಂದಿರಿಗೆ ದೂರು ಸಲ್ಲಿಸಿದವು. ಅವರು ಹೊರಗೆ ಬಂದು ಜಗಳಕ್ಕಿಳಿದರು. ಅವರ ಹಿಂದೆ ಆ ಮಹಿಳೆಯರ ಗಂಡಂದಿರು ಬಂದು ಹೊಡೆದಾಡಿದರು. ಓಣಿಯ ಜನರಲ್ಲಿ ಎರಡು ಗುಂಪಾಗಿ, ಬೀದಿ ಕಾಳಗಕ್ಕೆ ನಿಂತರು. ಹೊಡೆದಾಟ ತೀವ್ರವಾಗಿ ಪೋಲಿಸರು ಬಂದರು. ಸ್ಟೇಷನಿಗೆ ಎರಡೂ ಕಡೆಯವರನ್ನು ಎಳೆದೊಯ್ದರು. ಆಗ ಮನೆಯ ಮುಂದಿನ ಮರಳು ಗುಡ್ಡೆಯ ಮೇಲೆ ಆ ಎರಡೂ ಮಕ್ಕಳು ಆಟವಾಡುತ್ತಾ ಕುಳಿತಿದ್ದರು. ಹೀಗೆ ಮಕ್ಕಳಂತಹ ನಿರ್ವೈರತ್ವದ ಮನಸ್ಸು ನಮ್ಮದಾಗಬೇಕು.

3. ನಿಶ್ಚಂತತೆ

ಮಕ್ಕಳು ನಿದ್ರೆ ಮಾಡುವಾಗ ಮುಗ್ಧತೆ (Innocency) ಎನ್ನುವುದು ಮನ ಸೆಳೆಯುತ್ತದೆ. ಅವಕ್ಕೆ ಹಿಂದು ಮುಂದಿನ ಚಿಂತೆ ಇರುವುದಿಲ್ಲ. ನಿಶ್ಚಿಂತವಾಗಿ ನಿದ್ರಿಸುತ್ತವೆ. ದೊಡ್ಡವನಾದ ಮನುಷ್ಯನಿಗೆ ನಾನಾ ಬಗೆಯ ಚಿಂತೆ. ಎಲ್ಲವನ್ನು ಮಾಡುವವನು ದೇವರು, ನಾನು ಅವನ ಕೈಲಿ ನಿಮಿತ್ತ ಮಾತ್ರ ಸಾಧನ ಎಂಬ ಶರಣಾಗತ ಭಾವವಿದ್ದರೆ ಆಗ ವ್ಯಕ್ತಿ ನಿಶ್ಚಿಂತನಾಗಿರುವನು. ಇದು ನಿಷ್ಕ್ರಿಯತೆಯಲ್ಲ ನಿರಂತರ ಕ್ರಿಯೆಯ ಮಧ್ಯೆ ಇರುವ ಶರಣಾಗತ ಭಾವದ ನಿಶ್ಚಿಂತೆ !

4. ನಿರ್ವಿಕಾರತೆ

"ಹೆಂಗೂಸಿನಂಗವ ನೋಡಿರೆ ಪುರಾತರು, ಬಾಲತನದದಂಗವ ನೋಡಿರೆ ಲಿಂಗವಂತರು." ಎಂದು ಅಕ್ಕಮಹಾದೇವಿಯನ್ನು ನೋಡಿ, ಧರ್ಮಪಿತ ಬಸವಣ್ಣನವರು ಉದ್ಗರಿಸುತ್ತಾರೆ. ಅತ್ಯಂತ ಸುಂದರಿಯಾಗಿದ್ದು, ದಿಗಂಬರೆಯಾಗಿದ್ದೂ ಸಹ ಅಕ್ಕಮಹಾದೇವಿ ನಿರ್ವಿಕಾರದ ಪ್ರತಿರೂಪವಾಗಿದ್ದಳು. ಒಂದು ಚಿಕ್ಕ ಮಗುವನ್ನು ನೋಡಿದಾಗ ನೋಡುಗರಲ್ಲಿ ಹೇಗೆ ಚಾಂಚಲ್ಯ ಉಂಟಾಗುವುದಿಲ್ಲವೋ ಹಾಗೆ ನಿರ್ವಿಕಾರ ಮೂರ್ತಿ ಅಕ್ಕನವರನ್ನು ನೋಡಿದಾಗ ಯಾರಿಗೂ ಕೀಳು ಮನೋಭಾವ ಹುಟ್ಟಿರಲಿಲ್ಲ.

ಇಂದು ಮಹಿಳೆಯರು ವಿವಾಹಿತರು, ಅವಿವಾಹಿತರು ಎಂಬ ವ್ಯತ್ಯಾಸವಿಲ್ಲದೆ ಬತ್ತಲೆ ಪ್ರದರ್ಶನದ ಗೊಂಬೆಗಳಾಗುತ್ತಿದ್ದಾರೆ. ಸ್ವತಃ ತಾಯಿ ತಂದೆ ಕಣ್ಣಿದ್ದೂ ಕುರುಡರೇನೋ ಎಂಬಂತೆ ಮಕ್ಕಳ ವೇಷಭೂಷಣಗಳಲ್ಲಿನ ಅಸಭ್ಯತೆಯನ್ನು ಪೋಷಿಸುತ್ತಾರೆ. ಗಂಡಂದಿರು ಸಹ ತಮ್ಮ ಪತ್ನಿಯ ಸೌಂದರ್ಯ ವೈಭವನ್ನು ಪ್ರದರ್ಶಿಸಲು ಪ್ರಚೋದಿಸುತ್ತಾರೆ. ಮೊದಲೊಂದು ಕಾಲದಲ್ಲಿ ಗಾಂಭೀರ್ಯ, ಸರಳತೆ ವ್ಯಕ್ತಿಯ ಬಗ್ಗೆ ಗೌರವ ಭಾವವನ್ನು ಉಂಟು ಮಾಡುತ್ತವೆ ಎಂಬುದು ವ್ಯಾಪಕವಾಗಿದ್ದುದು ಇವತ್ತು ಮರೆಯಾಗುತ್ತಲಿದೆ. ಮಹಿಳೆಯರ ಮೇಲಿನ ಅತ್ಯಾಚಾರಗಳು ಜಾಸ್ತಿಯಾಗಲು ಮನಪ್ರಚೋದಕ ಸಿನಿಮಾ, ಟಿ.ವಿ.ದೃಶ್ಯಗಳು ಮಾತ್ರವಲ್ಲ ಅಲ್ಪಬಟ್ಟೆ ಧರಿಸಿ, ಅಂಗಾಂಗ ಪ್ರದರ್ಶನ ಮಾಡಿಕೊಳ್ಳುವ ಮಹಿಳೆಯರೂ ಸ್ವತಃ ಕಾರಣ ಎನ್ನಿಸುತ್ತದೆ.

ಕಾಡು ಜನರು, ಶಿಲಾಯುಗದ ಮಹಿಳೆಯರು ತಲೆಬಾಚಲು ಗೊತ್ತಿರದೆ ತಲೆ ಕೆದರಿ ಕೊಂಡು ಇರುತ್ತಿದ್ದರು. ವಸ್ತ್ರದ ಆವಿಷ್ಕಾರವಾಗದಿದ್ದಾಗ ಎಲೆ ಸೊಪ್ಪು ಚರ್ಮಗಳನ್ನು ಅರ್ಧಂಬರ್ಧವಾಗಿ ದೇಹಕ್ಕೆ ಮುಚ್ಚಿಕೊಳ್ಳುತ್ತಿದ್ದರು, ಆದರೆ ಇಂದಿನ ಅತ್ಯಾಧುನಿಕ ತರುಣಿಯರು ಕೂದಲು ಕತ್ತರಿಸಿಕೊಂಡು ಗಾಳಿಯಲ್ಲಿ ಹಾರಿಸಿಕೊಳ್ಳುತ್ತ ಕರಡಿಗಳಂತೆ ಕೂದಲಿನಲ್ಲಿ ಮುಖ ಮರೆಸಿಕೊಂಡು ತಿರುಗುವುದನ್ನು ನೋಡಿದಾಗ, ಅರ್ಧಂಬರ್ಧ ಬಟ್ಟೆಯುಟ್ಟು ಪ್ರಚೋದನಕಾರಿಗಳಾಗಿ ತಿರುಗುವುದನ್ನು ನೋಡಿದಾಗ ಆ ಶಿಲಾಯುಗದ ಜನರು ಅನಾಗರಿಕರು, ಇವರು ಅತ್ಯಂತ ಮುಂದುವರಿದವರು ಎನ್ನುವುದೇಕೆ ಎಂಬ ಸಂದೇಹ ಉಂಟಾಗುತ್ತದೆ. ಆದರ್ಶ ಮೌಲ್ಯಗಳು, ಉತ್ತಮ ನಡೆ ನುಡಿಗಳೇ ಅಲಂಕಾರಗಳೇ ವಿನಾ ಬಹಿರಂಗದ ವೇಷ ಭೂಷಣಗಳಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 12ನೆಯ ಲಿಂಗೈಕ್ಯ ಸಂಸ್ಮರಣೆ



ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ।
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸತ್ ಚಿತ್ ಆನಂದನ ಶುಭ ರಕ್ಷೆಯು ತಮಗಿದೆ ॥

ಪರಮ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ದಿ.30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿ ಹೊಂದಿದರು. ಅವರ ಲಿಂಗೈಕ್ಯ ಸಂಸ್ಮರಣೆಯು ದಿ.30 ರಂದು, ಶರಣ (ಶನಿ)ವಾರ ಒದಗಿ ಬಂದಿದೆ. ಮರುದಿವಸವೇ ದೇವ (ಭಾನು) ವಾರ ಒದಗಿ ಬಂದಿರುವುದರಿಂದ ರಾಷ್ಟ್ರೀಯ ಬಸವ ದಳದವರು, ಇತರ ಶರಣ ಬಂಧುಗಳು ಪೂಜ್ಯರ ಲಿಂಗೈಕ್ಯ ಸಂಸ್ಮರಣೆಯನ್ನು ದೇವ(ಭಾನು)ವಾರದಂದು ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆಯ ನಂತರ ಏರ್ಪಡಿಸಬಹುದು.

1-7-2007ರಂದು ,ದೇವ (ಭಾನು) ವಾರ; ಬೆಳಿಗ್ಗೆ 10-30ಕ್ಕೆ

1. ಬೆಂಗಳೂರು ಬಸವ ಮಂಟಪದಲ್ಲಿ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮಿಗಳು
2. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಮಾತೆ ಸತ್ಯಾದೇವಿ
3. ನವ ದೆಹಲಿಯ ಬಸವ ಮಂಟಪದಲ್ಲಿ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಚನ್ನಬಸವಾನಂದ ಸ್ವಾಮಿಗಳು
4. ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು

ದಿ.30-6-2007, ಶರಣ (ಶನಿ)ವಾರದಂದು
ಕೂಡಲ ಸಂಗಮದ ಬಸವ ಧರ್ಮ ಪೀಠದಲ್ಲಿ
ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಮಾದೇಶ್ವರ ಸ್ವಾಮಿಗಳು

. . . .

ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ
ಬೀದರ ನಗರದ ಬಸವ ಮಂಟಪದಲ್ಲಿ
ದಿ.30-6-2007ರಂದು ಸಂಜೆ 6 ಗಂಟೆಯಿಂದ
ಪೂಜ್ಯ ಲಿಂಗಾನಂದ ಸ್ವಾಮೀಜಿಯವರ
ಲಿಂಗೈಕ್ಯ ಸಂಸ್ಮರಣೆ ಕಾರ್ಯಕ್ರಮ ಜರುಗಲಿದೆ

ವ್ಯವಸ್ಥಾಪಕರು: ರಾಷ್ಟ್ರೀಯ ಬಸವ ದಳ, ಲಿಂಗಾಯತ ಸಮಾಜ, ಬೀದರ್

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಬೆಂಗಳೂರು ನಗರದಲ್ಲಿ

ವಿಶ್ವಗುರು ಬಸವಣ್ಣನವರ

812ನೆಯ ಲಿಂಗೈಕ್ಯ ದಿನಾಚರಣೆ

ದಿವ್ಯ ಸನ್ನಿಧಿ: ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮ ಪೀಠ, ಕೂಡಲ ಸಂಗಮ.



ಶರಣ (ಶನಿ)ವಾರ ದಿ. 18-8-2007 ರಂದು ಬೆಳಿಗ್ಗೆ 10-30

ದೇವ (ಭಾನು)ವಾರ ದಿ.19-8-2007ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ

ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ(ಟೌನ್ ಹಾಲ್)

ಶರಣರ ಬರುವೆಮಗೆ ಪ್ರಾಣ ಜೀವಾಳ

2. ಜಾತಿ ಪೀಠಗಳಿಂದ ಆಗುವ ಅನಾಹುತ

- ಮಾತಾಜಿ

ಜಾತಿ /ಉಪಜಾತಿಗಳಿಗೊಂದು ಪೀಠ ಮಾಡುತ್ತ ಫಲವತ್ತಾದ ಭೂಮಿಯಲ್ಲಿ ನೆಗ್ಗಿಲು ಮುಳ್ಳು, ಜಾಲಿ ಗಿಡಗಳ ಬೀಜವನ್ನು ಚೆಲ್ಲಿದಂತೆ ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಬಿತ್ತಿದ ವಿಷದ ಬೀಜ ಇನ್ನು ಫಲಕೊಡಲು ಆರಂಭಿಸುತ್ತವೆ. ಮೊದಲನೆಯ ಜ್ವಲಂತ ಉದಾಹರಣೆ. ಮಾದಾರ ಚನ್ನಯ್ಯ ಗುರುಪೀಠದ ಸ್ವಾಮಿಗಳು. ಇವರು ಗುರು ಋಣವನ್ನು ತೀರಿಸಲು ಆರಂಭಿಸಿದ್ದಾರೆ. ಊರೂರಿನಲ್ಲಿ ಕಾರ್ಯಕ್ರಮ ಏರ್ಪಡಿಸಿ ಬಂಜಗೆರೆಯ ಪುಸ್ತಕವನ್ನು ಪ್ರಚಾರ ಮಾಡುತ್ತ ಬಸವಣ್ಣನವರ ಬಗ್ಗೆ ವ್ಯವಸ್ಥಿತವಾಗಿ ಅಪಪ್ರಚಾರವನ್ನು ಮಾಡುತ್ತಿದ್ದಾರೆ. ಇದಕ್ಕೆ ಅವರಿಗೆ ದೀಕ್ಷೆ ನೀಡಿದ ಅವರ ಗುರುಗಳ ಕುಮ್ಮಕ್ಕು ಇರಲೇಬೇಕಲ್ಲವೆ? ಈಗಾಗಲೇ ಪಿ.ಎಂ.ಗಿರಿರಾಜ ಎಂಬ ಎಡವಟ್ಟು ಸಾಹಿತಿಯಿಂದ ಬಸವರ ನೋಟ ಎಂಬ ವಿಕೃತ ಪುಸ್ತಕ ಬರೆಸಿ ಛೀಮಾರಿ ಹಾಕಿಸಿಕೊಂಡು ಆ ಪುಸ್ತಕವನ್ನು ಮಾರಾಟದಿಂದ ಹಿಂತೆಗೆದುಕೊಂಡಿರುವ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳು ಅಪರಿಪಕ್ವ ವಿಚಾರ ಶಕ್ತಿಯವರಾಗಿ ಹಿಂದಾಲೋಚನೆ ಮತ್ತು ಮುಂದಾಲೋಚನೆ ಇಲ್ಲದೆ ಕೆಲಸ ಮಾಡುತ್ತ ಬರೀ ಎಡವಟ್ಟು ಕೆಲಸಗಳನ್ನು ಮಾಡುವುದರಲ್ಲಿ ಪರಿಣಿತರು. ಲಿಂಗಧಾರಣೆ, ಕಾವಿಧಾರಣೆ ಮಾಡಿಕೊಂಡು ಜಂಗಮ ಮೂರ್ತಿಯಾದ ಸ್ವಾಮಿಗಳು ಸರ್ಕಾರವು ಬಿಸಿಯೂಟದಲ್ಲಿ ಕೋಳಿ ಮೊಟ್ಟೆ ಕೊಡುವ ಯೋಜನೆ ಹಾಕಿದಾಗ ಅದನ್ನು ಬಸವ ಧರ್ಮ ಪೀಠದ ನಾವು ವಿರೋಧಿಸಿದರೆ ಮಾದಾರ ಚನ್ನಯ್ಯ ಸ್ವಾಮಿಗಳು ಪ್ರೋತ್ಸಾಹಿಸಿದರು. ಇದು ಬಸವ ದ್ರೋಹವಲ್ಲವೆ ? ಶರಣ ಸಂಸ್ಕೃತಿಗೆ ಮಾಡುವ ಅಪಚಾರವಲ್ಲವೆ?

ಒಬ್ಬ ವ್ಯಕ್ತಿ ಜಂಗಮ ದೀಕ್ಷೆ ಪಡೆದ ಮೇಲೆ ಪೂರ್ವಾಶ್ರಯ ನಿರಸನವಾಗಬೇಕು. ಹಳೆಯ ಆಚರಣೆ ತೊರೆದು ತಾನು ಸ್ವೀಕರಿಸಿದ ಧರ್ಮದ ಆಚರಣೆಗೆ ಬದ್ಧನಾಗಬೇಕು. ತಾನು ಕೆಡುವುದಲ್ಲದೆ ಕೋತಿ ವನವನ್ನೆಲ್ಲ ಕೆಡಿಸಿತ್ತು, ಎಂಬಂತೆ ತಮ್ಮ ಪೂರ್ವಾಶ್ರಮದ ಆಚರಣೆಗಳನ್ನು, ಸ್ವೀಕರಿಸಿದ ಧಾರ್ಮಿಕ ಸಮಾಜದಲ್ಲಿ ಪ್ರೋತ್ಸಾಹಿಸುವುದು ಸರಿಯೇ? ಕಾವಿಯ ಬೆಲೆಯನ್ನು ಸಮವಸ್ತ್ರವಾಗಿ ಮಾಡಿ ಮೂರುಕಾಸಿಗೂ ಇಲ್ಲದಂತೆ ಇಳಿಸುತ್ತಿರುವ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳ ಒಪ್ಪಿಗೆ ಮಾದಾರ ಚನ್ನಯ್ಯ ಸ್ವಾಮಿಯವರ ಮಾತಿನ ಹಿಂದೆ ಇದೆಯೋ ಎಂದು ಏಕೆ ಸಂದೇಹಿಸಬಾರದು? ಅಥವಾ ಗುರುಗಳ ಮಾತಿಗೆ ಕಾಸಿನ ಕಿಮ್ಮತ್ತೂ ಕೊಡದ ಉದ್ಧಟತನ ಅವರದೊ? ತಾನು ಸ್ವೀಕರಿಸಿದ ಧರ್ಮಕ್ಕೆ ಚ್ಯುತಿ ತರುವಂತೆ ಮಾದಾರ ಚನ್ನಯ್ಯ ಸ್ವಾಮಿಗಳು ಕೋಳಿ ಮೊಟ್ಟೆ ಯೋಜನೆಯನ್ನು ಪ್ರೋತ್ಸಾಹಿಸುವ ಅಗತ್ಯವೇನಿತ್ತು ?

ಇಂದು ನಾವೇ ಅಸಂಖ್ಯಾತ ದಲಿತರಿಗೆ ದೀಕ್ಷೆ ಕೊಟ್ಟಿದ್ದೇವೆ. ಕೊಡುತ್ತಿದ್ದೇವೆ. ಅವರು ಬಸವ ಧರ್ಮಕ್ಕೆ ಬರುತ್ತಿರುವುದು ಇದರ ಸಾತ್ವಿಕ ಆಚಾರ, ಸಸ್ಯಾಹಾರ, ಸದಾಚಾರಕ್ಕೆ ಮಾರು ಹೋಗಿ. ಇಲ್ಲಿಯೂ ಆಹಾರ ಪದ್ಧತಿಯನ್ನು ಕೆಡಿಸಿದರೆ ಅಂಥ ಸಾತ್ವಿಕರು ಬಸವ ಪಥಕ್ಕೆ ಬರುವ ಮನಸ್ಸು ಮಾಡುವುದಿಲ್ಲವಷ್ಟೆ.

ಡಾ॥ ಬಂಜಗೆರೆ ಎಂಬ ತಲೆ ಕೆಟ್ಟ ಸಂಶೋಧಕರ ಒದರಾಟಕ್ಕೆ ಅಧಿಕೃತ ಬೆಂಬಲವನ್ನು ಮಾದಾರ ಚನ್ನಯ್ಯ ಸ್ವಾಮಿ ಕೊಟ್ಟಿದ್ದಾರೆ. ಬಹುಶಃ ಇದರಲ್ಲಿ ಬಸವಣ್ಣ ನಮ್ಮ(ಮಾದಾರ)ವ ಎಂಬ ಪ್ರೀತಿ ಅಭಿಮಾನ ಇದೆ ಎಂದು ಅವರು ಸಮರ್ಥಿಸಿಕೊಳ್ಳಬಹುದು. ವಿಶ್ವಗುರು ಬಸವಣ್ಣನವರನ್ನು ಕುರಿತ ಈ ಪ್ರೀತಿ - ಅಭಿಮಾನ ಪೂತನಿ ಎಂಬ ರಾಕ್ಷಸಿ ಶ್ರೀ ಕೃಷ್ಣನಿಗೆ ಹಾಲು ಕುಡಿಸಿದಂತೆ, ಅಫಜಲಖಾನ್ ಶಿವಾಜಿ ಮಹಾರಾಜರನ್ನು ಬಿಗಿದು ಅಪ್ಪಿಕೊಂಡಂತೆ ಇದೆ !! ಬಂಜಗೆರೆಯ ಅಭಿಮಾನವು ಸಹ ಹೀಗೇ ಇದೆ.

ಸಾದರು, ರೆಡ್ಡಿಯವರು, ಸಜ್ಜನರು, ನೊಳಂಬರು, ಐಯ್ನೋರು, ವೀರಶೈವರು ಇತ್ಯಾದಿ ಪ್ರತ್ಯೇಕ ಗುಂಪುಗಳನ್ನು ಮಾಡಿಕೊಂಡು ಲಿಂಗಾಯತ ಸಮಾಜವನ್ನು ಸೀಳುತ್ತಿರುವಾಗ, ಇದಕ್ಕೆ ಈಗ ಪಂಚಮ ಸಾಲೆಯವರು ಸಿದ್ಧರಾಗಿ ನಿಂತಿದ್ದು ಕರ್ನಾಟಕದಲ್ಲಿ ಲಿಂಗಾಯತರು ಎಲ್ಲಿದ್ದಾರೆ ಎಂದು ಹಗಲಿನಲ್ಲೇ

ಪಡುಕಬೇಕಾದ ಸನ್ನಿವೇಶ ನಿರ್ಮಾಣವಾಗಿರುವಾಗ ಮಾದಾರ ಚನ್ನಯ್ಯ ಸ್ವಾಮಿಗಳಂತಹವರೂ ಮಗ್ಗಲು ಮುಳ್ಳಾಗಿ ಲಿಂಗಾಯತ ಸಮಾಜಕ್ಕೆ ಕಾಡತೊಡಗಿದರೆ ಮುಂದೇನು?

ಒಂದೊಂದೂ ತಪ್ಪು ಹೆಜ್ಜೆಯನ್ನೇ ಇಡುತ್ತಿರುವ ಚಿತ್ರದುರ್ಗ ಶ್ರೀಗಳು ಬಸವ ತತ್ವಕ್ಕೆ ಪೂರ್ತಿ ಅಪಚಾರ ಮಾಡುತ್ತಿದ್ದಾರೆ. ಧರ್ಮಪಿತ ಬಸವಣ್ಣನವರು ಎಲ್ಲ ಜಾತಿಯವರಿಗೂ ಧರ್ಮ ಸಂಸ್ಕಾರ ನೀಡಿ ಜಾತಿ ವರ್ಣ ರಹಿತ ಧರ್ಮ ಸಹಿತ ಶರಣ ಸಮಾಜ ರಚಿಸಿದರು. ಅರ್ಹತೆಯಿಂದ ಎಲ್ಲರನ್ನು ಗೌರವಿಸಿ ಜಂಗಮ ಮೂರ್ತಿಗಳನ್ನಾಗಿ ಮಾಡಿದರು. ಇದಕ್ಕೆ ವಿರುದ್ಧವಾಗಿ ಚಿತ್ರದುರ್ಗ ಸ್ವಾಮಿಗಳು ಜಾತಿ ಗುಂಪುಗಳನ್ನು ಮಾತ್ರವಲ್ಲ ಒಳಜಾತಿಯ ಗುಂಪುಗಳನ್ನು ಸಹ ಪ್ರತ್ಯೇಕಿಸುವ ಪ್ರಯತ್ನ ದಲ್ಲಿದ್ದಾರೆ. ದಲಿತರಲ್ಲೇ ಹೊಲೆಯ, ಸಮಗಾರ, ಮಾದಾರ, ಜಾಂಬವ, ಛಲವಾದಿ, ಡೋಹಾರ ಮುಂತಾದ ಗುಂಪುಗಳಿವೆ. ಇವರೆಲ್ಲರಿಗೂ ಪ್ರತ್ಯೇಕವಾಗಿ ಗುರು ಪೀಠ ಮಾಡಿದಸರೆ ಅವರವರಲ್ಲೇ ಸಂಘರ್ಷ ಶುರುವಾಗದೆ? ಈಗ ರಾಜಕೀಯ ಸಂಘರ್ಷ(ಲಿಂಗಾಯತರ ಒಳಜಾತಿಗಳಲ್ಲಿ ನಡೆಯುತ್ತಿರುವಂತೆ) ಅವರವರಲ್ಲೇ ನಡೆಯುತ್ತಿದ್ದು ಇನ್ನು ಧಾರ್ಮಿಕ ಸಂಘರ್ಷವೂ ಶುರುವಾಗಬಹುದಲ್ಲವೆ ?

ತಮ್ಮ ಮಠದ ಆಶ್ರಯದಲ್ಲಿ ಸಾಕಷ್ಟು ಶಾಖಾ ಮಠಗಳುಂಟು. ಧರ್ಮಗುರು ಬಸವಣ್ಣನವರು ಶೂನ್ಯ ಪೀಠಕ್ಕೆ ಶೂದ್ರಾತಿಶೂದ್ರ ಕುಲವಾದ ನಟುವರ ಜಾತಿಯ ಅಲ್ಲಮ ಪ್ರಭುದೇವರನ್ನು ಪೀಠಾಧಿಕಾರಿಯಾಗಿ ಮಾಡಿದಂತೆ ಚಿತ್ರದುರ್ಗದ ಶ್ರೀಗಳು ಮಾಡಬೇಕಿತ್ತು. ಒಂದು ವೇಳೆ ಎಲ್ಲ ಜನಾಂಗದವರಿಗೂ ಅವರವರ ಗುರುಗಳು ಬೋಧೆ ಮಾಡಿ ಬಸವ ಪಥಕ್ಕೆ ಕರೆತರುವ ಕಳಕಳಿಯಿಂದ ಜಾತಿ ಪೀಠಗಳನ್ನು ಮಾಡುತ್ತಿದ್ದರೆ. ದೀಕ್ಷೆ ಪಡೆದುಕೊಂಡು ಆ ಗುರು, ಮತ್ತು ಅವರ ಅನುಯಾಯಿಗಳು ಸ್ವೀಕರಿಸಿದ ಧರ್ಮಕ್ಕೆ ಚ್ಯುತಿ ತರದಂತೆ ನಡೆದುಕೊಳ್ಳಬೇಕು.

ಬಂಜಗೆರೆ ಜಯಪ್ರಕಾಶರ ಈ ಕುತ್ಸಿತ ಪುಸ್ತಕದ ಹಿಂದೆ ಬಹಳಷ್ಟು ಕೈಗಳು ಕೆಲಸ ಮಾಡಿದಂತೆ ತೋರುತ್ತಿದೆ. ಅಲ್ಲಿ ನೀರಿದೆ ಎಂದು ಸುದ್ದಿಯಾದಾಗ ಹೋಗಿ ನೋಡಿದರೆ ಕೆಸರು ಅತ್ತಲಿರಲಿ, ತೇವಾಂಶ ಕೂಡ ಇಲ್ಲವಂತೆ ಆಧಾರ ರಹಿತವಾಗಿ ಅಸಂಬದ್ಧವಾಗಿ ಬರೆದು ವಿವಾದದ ಸುಂಟರ ಗಾಳಿಯನ್ನು ಎಬ್ಬಿಸಿರುವ ಜಯಪ್ರಕಾಶರ ಪುಸ್ತಕ ಪ್ರಕಟಣೆಯ ಹಿಂದೆ ಸಂಪ್ರದಾಯವಾದಿ ಮೂಢ ಲಿಂಗಾಯತರು, ವೀರಶೈವವಾದಿಗಳು ಧರ್ಮಗುರು ಬಸವಣ್ಣನವರನ್ನು ಗೌರವಿಸದಂತೆ, ನವ ಧರ್ಮ ದ್ರಷ್ಟಾರರೆಂದು ಒಪ್ಪಿಕೊಳ್ಳದಂತೆ ಮಾಡುವ ಹುನ್ನಾರವಿದ್ದಂತೆ ತೋರುತ್ತಿದೆ.

ಬಹುಶಃ ಬಂಜಗೆರೆಯವರು ಕೆಲವು ಆಧುನಿಕ ಮಠಾಧೀಶರ ನಡೆ ನುಡಿ ಆದರ್ಶಗಳನ್ನು ಕಂಡು, ಅವರ ಜನ್ಮ ಕಥೆಗಳನ್ನು ಕೇಳಿ ಗುರು ಬಸವಣ್ಣ, ಅಕ್ಕನಾಗಲಾಂಬಿಕೆ ಕುರಿತು ಅಸಭ್ಯ ರೀತಿಯಲ್ಲಿ ಊಹಿಸಿರಬಹುದು. ಒಮ್ಮೆ ನಾನು ಕೇಳಿದ್ದೆ, ಓರ್ವ ಬಹುದೊಡ್ಡ ಮಠದ ಸ್ವಾಮಿಗಳು ತಮ್ಮ ಮಠದಲ್ಲಿ ಕಸ ಹೊಡೆಯುತ್ತಿದ್ದ ತಳವಾರ ಜಾತಿಯ ಹೆಣ್ಣು ಮಗಳೊಡನೆ ಸಂಬಂಧ ಇಟ್ಟುಕೊಂಡು, ಆಕೆಯಲ್ಲಿ ಹುಟ್ಟಿದ ಮಗನನ್ನು ಎಲ್ಲೋ ಅಪರಿಚಿತವಾಗಿ ಬೆಳೆಸಿ, ನಂತರ ಸುತ್ತಿ ಬಳಸಿ ಆತನನ್ನೇ ತಂದು ತಮ್ಮ ಉತ್ತರಾಧಿಕಾರಿಯನ್ನಾಗಿ ಪಟ್ಟಾಭಿಷೇಕ ಮಾಡಿದರು ಎಂದು. ಬಹುಶಃ ಇಂಥ ಮಠಾಧಿಕಾರಿಯ ಹುಟ್ಟಿನ ಬಗೆಯನ್ನು ಕೇಳಿ ಬಂಜಗೆರೆ ಪವಿತ್ರಾತ್ಮ ಬಸವಣ್ಣನವರ ಹುಟ್ಟನ್ನು ಕಲುಷಿತಗೊಳಿಸಲು ಹೋಗಿದ್ದಾರೆಂದು ತೋರುತ್ತದೆ.

ಮಾನವ ದೌರ್ಬಲ್ಯದಿಂದ ಆ ಮಠಾಧಿಕಾರಿ ಕೆಳಜಾತಿಯ ಮಹಿಳೆಯೊಡನೆ ಸಂಬಂಧ ಮಾಡಿರಬಹುದು. ಆ ಮಹಿಳೆಯ ಜಾತಿಯನ್ನು ಬಸವ ತತ್ವವಾದಿಗಳಾದ ನಾವು ಕೀಳು ಎನ್ನುವುದಿಲ್ಲ. ಆದರೆ ಆತ ಹಾಕಿಕೊಂಡ ಲಾಂಛನಕ್ಕೆ ವಿರುದ್ಧವಾಗಿ ಸಮಾಜವನ್ನು ವಂಚಿಸಿ ಓರ್ವ ಹೆಣ್ಣಿನ ಸಂಬಂಧ ಮಾಡಿದ್ದು ಪಾಪ ಕಾರ್ಯ! ತನಗೆ ವಿರಕ್ತಿ ಮಾರ್ಗ ಅಸಾಧ್ಯವೆನಿಸಿದರೆ ಅದನ್ನು ಬಿಟ್ಟು ಗೃಹಸ್ಥ ಜೀವನ ಸ್ವೀಕರಿಸಬೇಕಿತ್ತು, ಅದು ಬಿಟ್ಟು ಮಠಾಧಿಕಾರಿಯ ಗೌರವ ಬೇಕು, ನಡತೆ ಬೇಡ ಎಂಬುದು ಮೊದಲ ಅಪರಾಧ; ನಂತರ ಅರ್ಹತೆ ಇಲ್ಲದಿದ್ದರೂ ಹಿಂದಿನ ಬಾಗಿಲಿನಿಂದ ಅನರ್ಹನಾಗಿದ್ದರೂ ಕಳ್ಳತನದಲ್ಲಿ ತಂದು ಮಗನನ್ನು ಅಧಿಕಾರಿಯನ್ನಾಗಿ ಮಾಡಿದ್ದು ಎರಡನೆಯ ಅಪರಾಧ. ಈ ಪಾಪದ ಹೊಣೆ ತಂದೆಯದು! ತಾಯಿ ತಪ್ಪಿತಸ್ಥಳೇ ಇದ್ದರೂ ಯಾವುದೇ ಯಾವುದೇ ಧಾರ್ಮಿಕ, ನೈತಿಕ ಸಂಸ್ಕಾರ ಇಲ್ಲದ

ಆಕೆಯನ್ನು ತನ್ನ ಕಾಮನೆಯ ತೃಪ್ತಿಗೆ ಬಳಸಿಕೊಂಡಿದ್ದು ಘೋರ ಅಪರಾಧ.

ಇನ್ನು ಮಾನವೀಯತೆಯ ದೃಷ್ಟಿಯಿಂದ, ಪಾಪದ ಫಲವಾಗಿ ಹುಟ್ಟಿದ ಮಗುವಿಗೆ ಮಠಾಧಿಕಾರಿಯಾಗುವ ಅವಕಾಶ ಸ್ವೀಕರಿಸುವುದು ಅಪರಾಧವಲ್ಲದಿದ್ದರೂ, ತಾನು ಅಧಿಕಾರಕ್ಕೆ ಬಂದ ಮೇಲೆ ಅನೈತಿಕತೆಯನ್ನು ಪ್ರೋತ್ಸಾಹಿಸುವುದು ತಾನು ಲಾಂಛನಧಾರಿಯಾಗಿಯೂ ಅನೈತಿಕ ಮಾರ್ಗದಲ್ಲಿ ನಡೆಯುವುದು ಅಪರಾಧವಾಗುತ್ತದೆ. ಆಧುನಿಕ ಕಾಲದ ಇಂಥ ಆಚಾರ್ಯರುಗಳ ಕಥೆ ಕೇಳಿ ಹಿಂದಿನ ಶೈವಾಗಮಾಚಾರ್ಯರು ಈ ರೀತಿ ಅಕ್ರಮ ಸಂತಾನಕ್ಕೆ ಕಾರಣವಾಗುತ್ತಿದ್ದರು; ಆ ರೀತಿಯಲ್ಲಿ ಹುಟ್ಟಿದವರು ಗುರು ಬಸವಣ್ಣನವರು ಮತ್ತು ಅಕ್ಕನಾಗಲಾಂಬಿಕೆ ಎಂಬ ಅತಿರೇಕದ ಊಹೆಯನ್ನು ಬಂಜಗೆರೆ ಜಯ ಪ್ರಕಾಶ್ ಹರಿಯ ಬಿಟ್ಟಂತೆ ತೋರುತ್ತದೆ.

ಇಂಥ ಒಂದು ಕುತ್ಸಿತ ಕಲ್ಪನೆಯ ಪುಸ್ತಕವನ್ನು ಸಚಿವ ಎಂ.ಪಿ.ಪ್ರಕಾಶ್ ಬೆಂಬಲಿಸಿ, ಪ್ರೋತ್ಸಾಹಿ-ಸುವುದಾಗಿ ಹೇಳಿರುವುದು ನಿಜಕ್ಕೂ ನಾಚಿಕೆ ಗೇಡಿನ ಹಾಗೂ ಖಂಡನಾರ್ಹ ಸಂಗತಿ.

ದಾರ್ಶನಿಕ, ಧಾರ್ಮಿಕ ಸಂಸ್ಕಾರವೇ ಇಲ್ಲದ ಜಯಪ್ರಕಾಶರಿಗೆ ಜ್ಞಾನಿಗಳು, ವೈರಾಗ್ಯ ಮೂರ್ತಿಗಳು ಆದ ಶೈವಾಗಮಾಚಾರ್ಯರಾದ ಜಾತವೇದ ಮುನಿಗಳಾಗಲಿ, ಸದಾಚಾರ ಸಂಪನ್ನ ಸದ್ಗೃಹಸ್ಥ ದಂಪತಿಗಳಾದ ಮಾದರಸ ಮಾದಲಾಂಬಿಕೆಯ ಆಚಾರ ಭರಿತ ಜೀವನವಾಗಲಿ ಅರ್ಥವಾಗುವುದು ಹೇಗೆ ಸಾಧ್ಯ?

ಉದರ ಸಂಜಾತ ಮತ್ತು ಕರ ಸಂಜಾತ ಎಂಬುದನ್ನು ಬಂಜಗೆರೆ ವಿಚಿತ್ರವಾಗಿ ಅರ್ಥ ಮಾಡಿದ್ದಾರೆ. ಲಿಂಗಾಯತ ಧರ್ಮದಲ್ಲಿ ಮಾತ್ರವಲ್ಲ ಅಧ್ಯಾತ್ಮಿಕ ಮಾರ್ಗದಲ್ಲಿ ಅನುಗ್ರಹ ಕೊಡುವಾಗ ಗುರುಗಳು ಶಿಷ್ಯನ ತಲೆಯ ಮೇಲೆ ಕೈಯಿಟ್ಟು ಮಂತ್ರೋಪದೇಶ ಮಾಡುವರು. ಗಾಯತ್ರಿ ಮಂತ್ರ ಉಪದೇಶ ಮಾಡುವ ಓರ್ವ ಪುರೋಹಿತನಿಗೆ ಅವನು ಮಂತ್ರೋಪದೇಶ ಮಾಡಿದ ಶಿಷ್ಯ "ಕರ ಕಮಲ ಸಂಜಾತ ಶಿಷ್ಯ" ಎನ್ನುವುದನ್ನು ಗ್ರಾಮೀಣ ಭಾಷೆಯಲ್ಲಿ "ಶಿಷ್ಯ ಮಕ್ಕಳು." (ಶಿಶು ಮಕ್ಕಳು) ಎಂದು ಕರೆಯುತ್ತಾರೆ. ಗುರುಗಳಿಂದ ಮಂತ್ರೋಪದೇಶವನ್ನು ಪಡೆದು ಅಧ್ಯಾತ್ಮಿಕ ಬೋಧೆ ಪಡೆದವರು ತಾವು ಆ ಗುರುಗಳ ಶಿಶು ಮಕ್ಕಳೆಂದು ಹೇಳಿಕೊಳ್ಳುತ್ತಾರೆ. ಇದಕ್ಕೆ ವಿಪರೀತ ಅರ್ಥ ಮಾಡುವುದು ಅಧ್ಯಾತ್ಮ ಜಗತ್ತಿಗೆ ಮಾಡುವ ಅಪಚಾರ. ಶರಣು ಮಾಡು ಎಂಬ ಶಿಷ್ಟ ಪ್ರಯೋಗ ಹಳ್ಳಿ ಜನಗಳ ಬಾಯಿಯಲ್ಲಿ ಸಣ್ಣ ಮಾಡು ಎಂದಾದಂತೆ, ಶಿಷ್ಯ ಮಕ್ಕಳು ಎಂಬ ಶಿಷ್ಟ ಸಂಬೋಧನೆ ಶಿಶು ಮಕ್ಕಳು ಎಂದು ವಿಕೃತಗೊಂಡಿದೆ ಎಂಬುದನ್ನು ಅರಿಯಬೇಕು.

ನೆಗಡಿಯಾಗಿ ಮೂಗು ಕಟ್ಟಿದ ವ್ಯಕ್ತಿಗೆ ಸುವಾಸನೆ, ದುರ್ವಾಸನೆ ಎರಡೂ ತಿಳಿದುಬರದು. ಅದೇ ರೀತಿ ಬಸವ ವಿರೋಧಿಯಾದ ಎಂ.ಪಿ.ಪ್ರಕಾಶರಿಗೆ ಲಿಂಗದೇವ ಪರಿಕಲ್ಪನೆಯ ಸುವಾಸನೆ ಮತ್ತು ಬಂಜಗೆರೆ ಪುಸ್ತಕದ ದುರ್ವಾಸನೆ ಎರಡೂ ಬುದ್ಧಿಗೆ ತಾಗುತ್ತಿಲ್ಲ. ಸಾಹಿತ್ಯ ಕೃತಿಗಳ ಬಗ್ಗೆ ಸಾಹಿತಿಗಳು ಮಾತ್ರ ಸಂವಾದ ನಡೆಸಬೇಕು. ಧಾರ್ಮಿಕ ಜನರು, ಮಠಾಧೀಶರು ಏಕೆ ಕೈ ಹಾಕಬೇಕು? ಎಂದು ಕೆಲವು ವಿಚಾ(ಕಾ)ರವಾದಿ ಸಾಹಿತಿಗಳ ಅಭಿಪ್ರಾಯ. ಪೂಜ್ಯ ಗುರು ಬಸವಣ್ಣನವರು ಕೇವಲ ಸಾಹಿತಿಯಲ್ಲ ದಾರ್ಶನಿಕರು, ಧರ್ಮಪಿತ, ಅಸಂಖ್ಯಾತರ ಆರಾಧ್ಯ ಗುರು. ವಚನ ಸಾಹಿತ್ಯ ಕೇವಲ ಸಾಹಿತ್ಯವಲ್ಲ ಧಾರ್ಮಿಕ ಸಂವಿಧಾನ. ಕೇವಲ ಸಾಹಿತಿಗಳಿಗೆ ಅದು ಕೇವ ಭಾಷಣಕ್ಕೆ, ಬರಹಕ್ಕೆ, ಅನುಯಾಯಿಗಳಿಗೆ ಬದುಕಲಿಕ್ಕೆ. ಅವರಿಗೆ ಅದು ಹಪ್ಪಳ ಉಪ್ಪಿನ ಕಾಯಿ ನಮಗದು ಮುಖ್ಯ ಊಟ. ಏನೆಂದರೆ ಅದನ್ನು ಬರೆದು ದಕ್ಕಿಸಿಕೊಳ್ಳುವ ಸಾಹಿತಿಗಳ ಸ್ವೇಚ್ಛೆಗೆ ಕಡಿವಾಣ ಅಗತ್ಯ.

"ದೇವಾ ಆನು ಹೊರಗಣವನು" ಬಸವಣ್ಣನವರು, ಅಕ್ಕನಾಗಲಾಂಬಿಕೆ, ಮಾದರಸ, ಮಾದಲಾಂಬಿಕೆ, ಶೈವಾಗಮಾಚಾರ್ಯರು ಮಾತ್ರವಲ್ಲ ಇಡೀ ಭಾರತೀಯ ದಾರ್ಶನಿಕ ಪರಂಪರೆಗೆ ಕಲಂಕ ಹಚ್ಚಿರುವ ಅಸಂಬದ್ಧ ಕೃತಿಯಾಗಿದೆ. ಬಸವ ಭಕ್ತರ ಭಾವನೆಗಳಿಗೆ ನೋವನ್ನುಂಟು ಮಾಡುವುದಷ್ಟೇ ಅಲ್ಲ ಕೆಳಮಟ್ಟದ ಚಿಂತನೆಯ ಹಾವು ಚೇಳುಗಳನ್ನು ಹರಿಯ ಬಿಟ್ಟ ಹೊಲಸು ಪುಸ್ತಕ ಬರೆದ ಲೇಖಕರು ಮತ್ತು ಪ್ರಕಾಶಕರು ಇಬ್ಬರೂ ಖಂಡನಾರ್ಹರು. ಇಂಥ ಪುಸ್ತಕವನ್ನು ನಿಷೇಧಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.

108 ಅಡಿ ಬಸವ ಪುತ್ಥಳಿ ನಿರ್ಮಾಣ ಕಾರ್ಯ ಪ್ರಗತಿ ಪಥದಲ್ಲಿ

ಬಸವ ಕಲ್ಯಾಣದ ಬಸವ ಮಹಾಮನೆಯ ಆವರಣದಲ್ಲಿ ಬಸವ ಧರ್ಮ ಪೀಠ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಸಂಯುಕ್ತವಾಗಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿವೆ.

1. ಸಿಹಿ ನೀರಿನಿಂದ ಕೂಡಿದ ವಿಶಾಲವಾದ ಭಾವಿ ಪೂರ್ಣಗೊಂಡಿದೆ.
2. ವಿಶಾಲವಾದ ನೀರಿನ ಸಂಗ್ರಹಾಗಾರ "ಹರಳಯ್ಯ ತೀರ್ಥ"
3. ಸಾಮೂಹಿಕ ಸ್ನಾನ ಗೃಹಗಳು
4. ದಾನಿಗಳ ನೆರವಿನಿಂದ ಕಟ್ಟಿಸಿರುವ 20 ಕೋಣೆಗಳು ಮತ್ತು 3 ವಿಶಾಲವಾದ ಪಡಶಾಲೆ (ಡಾರ್ಮಿಟರಿ)
5. ಬಸವ ಮಂಟಪ ಪ್ರಾರ್ಥನಾ ಮಂದಿರ

ಇವಿಷ್ಟೂ ಪೂರ್ಣಗೊಂಡಿವೆ. ಇನ್ನು ಸ್ವಲ್ಪ ಕೆಲಸ ಮಾತ್ರ ಬಾಕಿ ಉಳಿದಿರುವುವು.

1. ಬಸವ ಸಮುದಾಯ ಭವನ - ಮದುವೆ ಮುಂತಾದ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಅನುಕೂಲವಾಗುವ ಹಾಲ್ ಮತ್ತು ಕಟ್ಟಡದ ಮುಂಭಾಗದ ಹೆಬ್ಬಾಗಿಲು ಕೆಲಸ
2. ದಾಸೋಹ ನಿಲಯ - ಮಠಕ್ಕೆ ಅಗತ್ಯವಿರುವ ಅಡಿಗೆ ಮನೆ ಮತ್ತು ದಾಸೋಹ ನಿಲಯ
3. ಬಸವಾನುಗ್ರಹ ಧಾಮ: ಬಸವ ಕಲ್ಯಾಣದ ಭೂಮಿಯಲ್ಲಿ ಇರುವ ಲ್ಯಾಟರೈಟ್ ಶಿಲಾ ಪದರವನ್ನು ಬಳಸಿಕೊಂಡು ವಿಶಾಲವಾದ ಗವಿಯನ್ನು ಲಕ್ಷಾಂತರ ರೂಗಳನ್ನು ಖರ್ಚು ಮಾಡಿ ಕೆತ್ತಿಸಲಾಗಿದ್ದು ಬಹಳ ಅಪೂರ್ವ ಮತ್ತು ವಿಶೇಷವಾಗಿದೆ. ಇದರಲ್ಲಿ ಪೂಜ್ಯ ಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯನ್ನು ಇಡಲಾಗಿದೆ. ವಿವಿಧ ಒಳಗವಿಗಳಲ್ಲಿ ಶೂನ್ಯ ಪೀಠಾಧೀಶ ಅಲ್ಲಮ ಪ್ರಭು, ಚಿನ್ಮಯ ಜ್ಞಾನಿ ಚನ್ನಬಸವಣ್ಣ, ಬಸವ ಯೋಗಿ ಸಿದ್ಧರಾಮೇಶ್ವರ , ವೀರ ವೈರಾಗ್ಯ ನಿಧಿ ಅಕ್ಕಮಹಾದೇವಿ, ದಾಸೋಹ ನಿಧಿ ನೀಲಾಂಬಿಕಾ ತಾಯಿ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಲೈಫ್ ಸೈಜಿನ ಸಿಮೆಂಟ್ ಮೂರ್ತಿಗಳನ್ನು ಕೂರಿಸಲಾಗಿದೆ. ಮುಂದೆ ದಾನಿಗಳ ನೆರವು ಸಿಕ್ಕಂತೆ ಅಮೃತ ಶಿಲಾ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುವುದು. ಗವಿಯ ಸ್ವಲ್ಪ ಭಾಗ ಕೆತ್ತಿಸಿ, ದೀಪಗಳ ವ್ಯವಸ್ಥೆ ಮಾಡಿ, ಫೈನಲ್ ಫಿನಿಷಿಂಗ್ ಕೆಲಸ ಮಾಡಬೇಕಾಗಿದೆ.
4. ಅಕ್ಕಮಹಾದೇವಿ ಯೋಗ ಧಾಮ : ಇದು ಮತ್ತೊಂದು ಲ್ಯಾಟರೈಟ್ ಶಿಲಾ ಪದರದಲ್ಲಿ ಕೆತ್ತಲ್ಪಟ್ಟ ಗವಿ. ಕದಳಿ ಬನದ ದೃಶ್ಯವನ್ನು ಇಲ್ಲಿ ನಿರ್ಮಿಸಲಾಗುವುದು. ಇದರಲ್ಲಿ ಸುಮಾರು 18 ಪೊಳ್ಳುಗಳ ಕೋವಿಯನ್ನು ಮಾಡಿ. ಅದರಲ್ಲಿ ಅಕ್ಕಮಹಾದೇವಿಯ ಜೀವನದ ಮುಖ್ಯ ಪ್ರಸಂಗಗಳನ್ನು ಶಿಲ್ಪಗಳ ಮೂಲಕ ಚಿತ್ರಿಸಲಾಗುವುದು.
5. ಶಿವ ಮಾನಸ ಸರೋವರ : ನೀರು ನಿಲ್ಲಿಸಿ ಸರೋವರವನ್ನು ಮಾಡುತ್ತಲಿದ್ದು ನೀರು ನಿಂತ ಮೇಲೆ ಬೋಟ್ ವ್ಯವಸ್ಥೆ ಸಹ ಮಾಡಿಸಲಾಗುವುದು. ಇದರ ದಂಡೆಯಮೇಲೆ ಮಡಿವಾಳ ಮಾಚಿದೇವರು,. ಗೌಳಿಗಿತ್ತಿ ಗೌರವ್ವ, ಸುಲಿಯ ಚಂದಯ್ಯ ಕಂಡು ಬಂದರೆ, ಅಂಬಿಗರ ಚೌಡಯ್ಯನವರು ದೋಣಿ ಹಾಯಿಸಲಿರುವರು.

ಬಸವಾನುಗ್ರಹ ಧಾಮಕ್ಕೆ ಸೌರ ವಿದ್ಯುತ್ ಅಗತ್ಯ.

ಸಾಮಾನ್ಯವಾಗಿ ವಿದ್ಯುತ್ ಪ್ರಸರಣ ನಿಗಮದ ವಿದ್ಯುತ್ ಇರುವುದೇ ಕಡಿಮೆ. ವಿಶಾಲವಾದ ಗವಿಯಲ್ಲಿ ಪೂರ್ಣ ಕತ್ತಲು. ಎಣ್ಣೆಯ ದೀಪ ಹೆಚ್ಚು ಹೊತ್ತು ಇರುವುದಿಲ್ಲ. ಹೀಗಾಗಿ ಸಂದರ್ಶಕರು ಎಷ್ಟೋ ಜನ ಗವಿಯೇ ಮುಖ್ಯ ಆಕರ್ಷಣೆಯಾಗಿದ್ದು ನೋಡಲು ಬಂದು , ನಿರಾಶರಾಗಿ ವಾಪಸ್ಸು ಹೋಗುತ್ತಾರೆ. ಇದಕ್ಕೆ ಒಂದೇ ಪರಿಹಾರ ಸೌರ ವಿದ್ಯುತ್ ವ್ಯವಸ್ಥೆ. ಬಿಸಿಲು ತೀಕ್ಷ್ಣವಾಗಿ ಇರುವ ಪ್ರದೇಶದಲ್ಲಿ ಇದರಿಂದ ವಿದ್ಯುತನ್ನು ಉಳಿಸಬಹುದು. ಕೇವಲ ಬಸವಾನುಗ್ರಹ ಧಾಮ-ಗವಿ

ಸಮುಚ್ಚಯಕ್ಕೆ 18-20 ದೀಪಗಳು ಅಗತ್ಯವಾಗುತ್ತವೆ. ಒಂದು ಲಕ್ಷದ ಐವತ್ತು ಸಾವಿರ (1,50000) ರೂಗಳ ಅಂದಾಜು ಖರ್ಚು ಇದೆ. ಯಾವುದಾದರೂ ಸಂಘ-ಸಂಸ್ಥೆಯ ವತಿಯಿಂದ ಅಥವಾ ದಾನಿಗಳು ತಮ್ಮ ಹೆಸರಿನಲ್ಲಿ, ತಮ್ಮ ಹಿರಿಯರ ಹೆಸರಿನಲ್ಲಿ ಸೌರ ವಿದ್ಯುತ್ ದೀಪಗಳನ್ನು ಗವಿಯಲ್ಲಿ ಹಾಕಿಸಿಕೊಟ್ಟರೆ ಬಹಳ ಉಪಕಾರವಾಗುತ್ತದೆ.

ಶಿವ ಮಾನಸ ಸರೋವರ

ಭಾರತೀಯ ಪರಂಪರೆಯ ಹೆಮ್ಮೆಯ ಸಂಕೇತ ಮಾನಸ ಸರೋವರ. ಅದು ಒಂದು ಕಾಲದಲ್ಲಿ ಯೋಗಿರಾಜ ಶಿವನ, ಪ್ರಥಮ ಯೋಗಿಣಿ ಪಾರ್ವತಿಯ ಆವಾಸ ಸ್ಥಾನವಾಗಿತ್ತು. ಶರಣ ಶೈಲದ ಮೇಲೆ ಒಂದು ಸರೋವರವನ್ನು ನಿರ್ಮಿಸಿ ಅದರಲ್ಲಿ ದೋಣಿ ವಿಹಾರದ ವ್ಯವಸ್ಥೆ ಮಾಡಲು ಸುಮಾರು 4-5 ಲಕ್ಷ ರೂಗಳ ಖರ್ಚು ಬರುತ್ತದೆ. ಅಂಥ ವೆಚ್ಚವನ್ನು ಒಬ್ಬರೇ ಭರಿಸುವ ದಾನಿಗಳ ಒಂದು ಪ್ರತಿಮೆಯನ್ನು ಸಹ ಮಾಡಿ ಸರೋವರದ ಬಳಿ ನಿಲ್ಲಿಸಲಾಗುವುದು.

108 ಅಡಿ ಬಸವ ಪುತ್ಥಳಿ ಪ್ರಗತಿಯ ಪಥದಲ್ಲಿ

ಶ್ರೀ ಗುರು ಬಸವಣ್ಣನವರ 108 ಅಡಿ ಬಸವ ಪುತ್ಥಳಿ ನಿರ್ಮಾಣ ಕಾರ್ಯವು ಭರದಿಂದ ಸಾಗುತ್ತಿದೆ. ಶ್ರೀ ಮೂರ್ತಿಯು ಕುಳಿತ ಭಂಗಿಯಲ್ಲಿದ್ದು ಇದರ ಕೆಳಗೆ ಒಂದು ಆಸನ ಪೀಠವು 2 ಅಂತಸ್ತಿನ ಕಟ್ಟಡವಾಗಿದ್ದು ಒಂದು ಅಂತಸ್ತು ಭೂಮಿಯ ಕೆಳಗೆ ನೆಲಮನೆಯಾಗಿರುವುದು, ಇನ್ನೊಂದು ಭೂಮಿಯ ಮೇಲ್ಭಾಗದಲ್ಲಿರುತ್ತದೆ.

ಈ ಎರಡು ಅಂತಸ್ತುಗಳ ಆಸನ ಪೀಠ 60' × 80 ಅಡಿಯ ವಿಸ್ತಾರದ್ದಾಗಿದೆ. ಮಧ್ಯದಲ್ಲಿ ಬೆನ್ನು ಹುರಿಯಂತೆ ಕೆಲಸ ಮಾಡುವ ಶಾಫ್ಟ್ ಇದೆ. ಇದು ಭೂಮಿಯ ಆಳದಿಂದ ಮೇಲಕ್ಕೆ ಬರುತ್ತಿದೆ. ಆಸನ ಪೀಠದ ಮೇಲಿನ ಮೂರ್ತಿಯ ಆಕಾರದ ಕೆಲಸ ಶುರುವಾಗಿದೆ. ಮೂರ್ತಿಯ ನಿರ್ಮಾಣಕ್ಕಾಗಿ ಕಾಂಕ್ರೀಟ್ ಮೇಲೆತ್ತುವ ಕಾಂಕ್ರೀಟ್ ಲಿಫ್ಟ್, ಕ್ರೇನ್ ಮುಂತಾದುವನ್ನು ಪೂನಾದಿಂದ ಖರೀದಿಸಲಾಗಿದೆ. 150 ಅಡಿ ಎತ್ತರದ ಅಟ್ಟಣಿಗೆ ಕಟ್ಟಲು ಬೇಕಾದ ಕಬ್ಬಿಣದ ಫ್ರೇಮ್, ಪೈಪ್ ಇತ್ಯಾದಿಗಳನ್ನು ಹೈದರಾಬಾದಿನಲ್ಲಿ ಖರೀದಿಸಲಾಗಿದೆ. ಮೂರ್ತಿಯ ನಿರ್ಮಾಣ ಅತ್ಯಂತ ಹೆಮ್ಮೆಯ ಕಾರ್ಯ ಎಂಬುದನ್ನು ಬೇರೆ ಹೇಳಬೇಕಾಗಿಲ್ಲವಷ್ಟೇ.

ಶರಣ ಬಂಧುಗಳೇ ನಮ್ಮ ಶಕ್ತಿಗೆ ಮೀರಿದ ಬೃಹತ್ ಕಾರ್ಯವನ್ನು ನಿಮ್ಮೆಲ್ಲರ ಮೇಲೆ ವಿಶ್ವಾಸ ವಿಟ್ಟು ನಾವು ಹಮ್ಮಿಕೊಂಡಿದ್ದೇವೆ. ಆದ್ದರಿಂದ ತಾವು ಉದಾರವಾಗಿ ಧನ ಸಹಾಯವನ್ನು ಮಾಡಬೇಕು. ನಿಮ್ಮ ಸ್ವಂತ ಖರ್ಚುಗಳನ್ನು ಮಿತಗೊಳಿಸಿ ಸಾಧ್ಯವಾದಷ್ಟೂ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ಸಲ್ಲಿಸಿರಿ. ಬೆಳ್ಳಿ, ಬಂಗಾರ, ಹಣ ಯಾವುದೇ ರೂಪದಲ್ಲಿಯೂ ಕೊಡಬಹುದು. ಮೂರ್ತಿಯು ಪೂರ್ಣಗೊಳ್ಳಲು ಕನಿಷ್ಠ ಪಕ್ಷ ಒಂದೂವರೆ ವರ್ಷಬೇಕಾಗುವುದರಿಂದ ನೀವು ಎಷ್ಟೇ ಬಡವರಿದ್ದರೂ ಹನ್ನೊಂದು ಸಾವಿರ ರೂಗಳನ್ನಾದರೂ ಕೊಡುವ ಸಂಕಲ್ಪ ತಳೆಯಿರಿ. ಹೆಚ್ಚಿನ ಶಕ್ತಿ ಇರುವವರು ದೊಡ್ಡ ಮೊತ್ತವನ್ನು ಪ್ರಕಟವಾಗಿ ಅಥವಾ ಗುಪ್ತವಾಗಿ ಕೊಡಬಹುದು.

ಜೀವನ ಚರಿತ್ರೆ

ಆಸನ ಪೀಠದ ಒಳಭಾಗದಲ್ಲಿ ಒಂದು ಮ್ಯೂಸಿಯಂ ಮಾಡಲಿದ್ದು ಇದರಲ್ಲಿ ಧರ್ಮಗುರುವಿನ ಜೀವನ ಚರಿತ್ರೆಯ ವಿವಿಧ ಘಟನೆಗಳನ್ನು ಮೂರ್ತಿಗಳ ರೂಪದಲ್ಲಿ ಚಿತ್ರಿಸಲಾಗುವುದು. ಅಂಥ ಒಂದೊಂದು ಕೋಣೆಯನ್ನು, ಮೂರ್ತಿ ಸಹಿತವಾಗಿ ಸಿದ್ಧಪಡಿಸಲು ಒಂದೊಂದು ಲಕ್ಷ ವೆಚ್ಚವಾಗುತ್ತದೆ. ಹಾಗೆ ಕೊಟ್ಟವರ ಹೆಸರನ್ನು ಆ ಕೋಣೆಯ ಹೊರಗೆ ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ ಹಾಕಲಾಗುವುದು. ಮೂರ್ತಿಯ ನಿರ್ಮಾಣಕ್ಕೆ ಈಗಾಗಲೇ ಒಂದು ಲಕ್ಷ ರೂ ಕೊಟ್ಟವರೂ ಸಹ ಈ ಯೋಜನೆಗೆ ಪ್ರತ್ಯೇಕವಾಗಿ ಕೊಡಬಹುದು. ಒಂದು ಅಂತಸ್ತಿನಲ್ಲಿ 54 ಕೋಣೆ (ಗೋಡು)ಗಳು ಬರುತ್ತವೆ. ಇನ್ನೊಂದು ಅಂತಸ್ತಿನಲ್ಲಿ ಷಡ್‌ಗಣಾಧೀಶರು, ಮುಖ್ಯ ಶರಣರ ಬದುಕಿನ ಮಹತ್ವಪೂರ್ಣವಾದ ಒಂದು ಘಟನೆಯನ್ನು ಮೂರ್ತೀಕರಿಸಲಾಗುವುದು. ಅದಕ್ಕೂ ಸಹ ಇದೇ ರೀತಿ ಒಂದೊಂದು ಲಕ್ಷದಂತೆ ದೇಣಿಗೆ ನೀಡಬಹುದು.

ಅಕ್ಕಮಹಾದೇವಿ ಗವಿ

ಅಕ್ಕಮಹಾದೇವಿ ಗವಿಯಲ್ಲಿ ಸಹ ಗೂಡುಗಳ ತರಹ ಪೊಳ್ಳುಗಳು ಬರಲಿದ್ದು ಅಕ್ಕಮಹಾದೇವಿಯ ಸಮಗ್ರ ಜೀವನ ಚರಿತ್ರೆಯನ್ನು ಮೂರ್ತೀಕರಿಸಲಾಗುವುದು. ಇನ್ನೂ ಹಲವಾರು ಯೋಜನೆಗಳನ್ನು ಹಂತ ಹಂತವಾಗಿ ಪ್ರಕಟಿಸಲಾಗುವುದು.

ತ್ರಿವಿಧ ದಾಸೋಹ

ಪೂರ್ಣಾವಧಿ ಸಮಯ ಇಲ್ಲಿ ಇರಲಿಕ್ಕೆ ಆಗದಿದ್ದರೂ ತಮಗೆ ಬಿಡುವಾದಷ್ಟು ಸಮಯ ನೀಡಿ ಶರಣ ಬಂಧುಗಳು ಬಂದು, ಇದ್ದುಕೊಂಡು ಅವರವರ ಶಕ್ತ್ಯಾನುಸಾರ ತನು ಸೇವೆ ಮಾಡ ಬಹುದು. ಅವರ ವಯೋಮಾನಕ್ಕೆ ಅನುಗುಣವಾಗಿ ಸೇವೆ ಮಾಡಲು ಅವಕಾಶ ಉಂಟು. ತಮ್ಮ ಬಂಧು ಮಿತ್ರ ಪರಿಚಿತರಿಗೆ ಪ್ರೇರಣೆ ನೀಡಿ ಕಾಣಿಕೆ ಸಂಗ್ರಹಿಸಿಕೊಡಬಹುದು.

ಸಾಲ: 108 ಅಡಿ ಮೂರ್ತಿಯ ಕೆಲಸವು ತೀವ್ರಗತಿಯಲ್ಲಿ ನಡೆಯುತ್ತಿರುವುದರಿಂದ ಸಾಲದ ರೂಪದಲ್ಲಿ ಹಣವನ್ನು ಕೊಡಲು ಅವಕಾಶ ಉಂಟು. ಈಗಾಗಲೇ ಸಾಲ ಕೊಟ್ಟವರಿಗೆ 12% ಬಡ್ಡಿ ಕೊಡಲಾಗುತ್ತಿದೆ. ಮತ್ತು ಏನಾದರೂ ವಿಶೇಷ ಕಾರ್ಯಕ್ಕೆಂದು ಇಟ್ಟುಕೊಂಡವರು ಸಾಲ ಕೊಟ್ಟರೆ ಅವರಿಗೆ ಅಗತ್ಯ ಬಿದ್ದಾಗ ಕೇಳಿದರೆ ಮರಳಿಸಲಾಗುವುದು. ಆದ್ದರಿಂದ ಕೆಲಸವು ನಿಲ್ಲದೆ ಸಾಗುವಂತೆ ಉದಾರವಾಗಿ ಕಾಣಿಕೆಯನ್ನಾದರೂ ಕೊಡಲು ಅಥವಾ ಸಾಲರೂಪದಲ್ಲಾದರೂ ನೀಡಲು ಕೋರುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ
ಕೂಡಲ ಸಂಗಮ-ಬಸವ ಕಲ್ಯಾಣ

ಲಿಂಗಾನಂದ ಗುರುವಿಗೆ ನಮೋ ನಮೋ
ಮಹಾ ಗುರುವಿಗೆ ನಮೋ ನಮೋ

ಕಾರಣ ಶರೀರದಲ್ಲಿ ಅಕ್ಕಮಹಾದೇವಿ ತಾಯಿಯನ್ನು ಅಳವಡಿಸಿಕೊಂಡು
ಸೂಕ್ಷ್ಮ ಶರೀರದಲ್ಲಿ ಗುರು ಚನ್ನಬಸವಣ್ಣನವರನ್ನಳವಡಿಸಿಕೊಂಡು
ಸ್ಥೂಲ ಶರೀರದಲ್ಲಿ ಮಡಿವಾಳ ಮಾಚಿತಂದೆಯನ್ನಳವಡಿಸಿಕೊಂಡು
ಅಂತರಂಗದಲ್ಲಿ ಅಲ್ಲಮ ಪ್ರಭುವಾಗಿ, ಬಹಿರಂಗದಲ್ಲಿ ಅಕ್ಕನಾಗಮ್ಮನಾಗಿ
ಭಾವದೊಳು ಸಿದ್ಧರಾಮ ಶಿವಯೋಗಿಯಾಗಿ
ಉಸಿರಿನಲ್ಲಿ ಗುರು ಬಸವ ತಂದೆಯನ್ನಿಂಬಿಟ್ಟು ಕೊಂಡು
ಲಿಂಗದೇವನ ಹೃದಯ ಕಮಲದಲ್ಲಡಗಿದ
ಗುರುವಿಗೆ ನಮೋ, ಮಹಾಗುರುವಿಗೆ ನಮೋ, ಅಪ್ಪಾಜಿಯವರಿಗೆ ನಮೋ
ಜಂಗಮ ಜ್ಯೋತಿ ಮಹಾ ಜಗದ್ಗುರು ಲಿಂಗಾನಂದ ಗುರು ದೇವರಿಗೆ ನಮೋ ನಮೋ

-ಶರಣ ಸಚ್ಚಿದಾನಂದ

★★★★★★★★★★★★★★★★

ಗುರು ಬಸವ ತಂದೆಯೇ ನೀವು ಮುಂದೆ ಮುಂದೆ
ನೊಂದು ಬೆಂದ ಜನತೆ ನಿಮ್ಮ ಹಿಂದೆ ಹಿಂದೆ
ಹರಿಯಿಸಿದಿರಿ ಅಮೃತದ ಧಾರೆಯ ನಿಮ್ಮ ಜ್ಞಾನದಿಂದೆ
ಅದನುಂಡು ಸಾರ್ಥಕ್ಯ ಪಡೆದರು ಜೀವನದಿಂದೆ
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವೆ
ನೀನು ಬೆಳಕಿಗೆ ಬಂದೆ ಬಸವ ಗುರುವಿನ ಕಾರುಣ್ಯದಿಂದೆ.

- ಬಸವ ಕಂದ, ಮೈಸೂರು

ಆನು ದೇವಾ ಹೊರಗಣವನು ಕೃತಿಯ ಬಗ್ಗೆ ಕೆಲವರ ಅಭಿಪ್ರಾಯಗಳು

"ಆನು ದೇವಾ ಹೊರಗಣವನು ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಿ"

- ರಾಜಶೇಖರ್ ಚಂದನಗೌಡರ, ಬೆಂಗಳೂರು

ಡಾ.ಪಿ.ವಿ.ನಾರಾಯಣ ಅವರ ಚನ್ನಬಸವಣ್ಣನ ತಾಯಿ ಅಕ್ಕನಾಗಮ್ಮ ವಿವಾಹ ಬಾಹಿರವಾಗಿ ಹಡೆದಳು ಎಂದು ಹೇಳುವ ಕೃತಿ 'ಧರ್ಮಕಾರಣ'ವನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಂತೆ ಡಾ. ಬಂಜಗೆರೆಯವರು ಇತ್ತೀಚೆಗೆ ಪ್ರಕಟಿಸಿದ ಆನು ದೇವಾ ಹೊರಗಣವನು ಕೃತಿಯಲ್ಲಿ ಬಸವಣ್ಣ, ಮಾದರಸ-ಮಾದಲಾಂಬಿಕೆಯರಿಗೆ ಉದರ ಸಂಜಾತ ಮಗುವಲ್ಲ. ಆದರೆ ಅವನು ಶೈವಾಗಮಾಚಾರಿ, ಮಾದಿರಾಜನಿಗೆ ವಾಮಚಾರಿ ತಾಂತ್ರಿಕನು, ತನ್ನ ಸ್ತ್ರೀಪ್ರಧಾನವಾದ ಸಾಧನೆಗಾಗಿ ಡೊಂಬಿನಿ, ಮಾತಂಗಿನಿ, ರಜಕಿನಿ (ಕೀಳು ಜಾತಿಯವರು)ಯರಂಥ ಸ್ತ್ರೀಯರನ್ನು ಉಪಯೋಗಿಸಿ ಕೊಳ್ಳುತ್ತಾರೆ. ಈ ಬಗೆಯಲ್ಲಿ ಬಸವಣ್ಣ ಶೈವಾಗಮಾಚಾರ್ಯ ಮಾದಿರಾಜನಿಗೆ ಪಡೆದ ಮಗ ಅಥವಾ ಕರಸಂಜಾತ ಮಗ ಇರಬೇಕು ಎಂದು ಹೇಳಿ ಬಸವಣ್ಣ ಚಾರಿತ್ರ್ಯ ವಧೆ ಮಾಡಿ ಹಿಂದೆ ಯಾರು ಎಂದೂ ಹೇಳದ ಸಂಗತಿಯನ್ನು ಇದು ತಮ್ಮ ಹೊಸ ಸಂಶೋಧನೆಯೆಂಬಂತೆ ಬಿಂಬಿಸಿದ್ದಾರೆ. ಈ ಕೃತಿಯನ್ನು ರಚಿಸಲು 6 ಗ್ರಂಥಗಳ ಸಹಾಯ ಪಡೆದಿದ್ದಾರೆ. ಈ ಯಾವ ಗ್ರಂಥಗಳಲ್ಲೂ ಮಾದಿರಾಜ ಹಾಗೂ ಮಾದಲಾಂಬಿಕೆಯ ಉದರ ಸಂಜಾತನಲ್ಲ ಎಂದು ಹೇಳಿಲ್ಲ ಹಾಗೂ ಯಾವ ಗ್ರಂಥವೂ ಮಾದಿರಾಜನನ್ನು ವಾಮಚಾರಿ ತಾಂತ್ರಿಕನಂತೆ ಚಿತ್ರಿಸಿಲ್ಲ. ಮೇಲಿನ ಯಾವ ಗ್ರಂಥದಲ್ಲೂ ಮಾದಿರಾಜ ತನ್ನ ಸ್ತ್ರೀ ಪ್ರಧಾನವಾದ ಸಾಧನೆಗಾಗಿ ಡೊಂಬಿನಿ, ಮಾತಂಗಿನಿ, ರಜಕಿನಿ (ಕೀಳು ಜಾತಿಯವರು)ಯರಂಥ ಸ್ತ್ರೀಯರನ್ನು ಉಪಯೋಗಿಸಿಕೊಳ್ಳುತ್ತಿದ್ದ ಎಂದು ಹೇಳಿಲ್ಲ. ಆದರೂ ಅವರೇ ಹೇಳುವಂತೆ ಇದೊಂದು ಸಂಭಾವ್ಯ ಸತ್ಯ. ಸಂಭಾವ್ಯ ಸತ್ಯವು ಎಂದೂ ಸತ್ಯವಾಗಲಾರದು. ಸತ್ಯವು ನಿಖರವಾಗಿರಬೇಕು. ಈ ತರಹದ ಸತ್ಯಗಳು ಕೂಡಾ ಒಬ್ಬ ಜಗದ್ವಂದ್ಯ ಧಾರ್ಮಿಕ ಮಹಾಪುರುಷನ ಅನುಯಾಯಿಗಳು ನೂರಾರು ವರ್ಷಗಳಿಂದ ಸತ್ಯವೆಂದು ನಂಬಿದ ಅವರ ನಂಬಿಕೆಯನ್ನು ಘಾಸಿಗೊಳಿಸಿ ಅವರ ಮನನೋಯಿಸಿ, ಸಮಾಜದಲ್ಲಿ ಗಲಭೆ-ಗೊಂದಲಗಳನ್ನು ಹುಟ್ಟಿಸುವಂತಿರಬಾರದು. ಈಗ ಪತ್ರಿಕಾ ಪ್ರಕಟಣೆಗಳನ್ನು ನೋಡಿದರೆ ಡಾ.ಬಂಜಗೆರೆಯವರು ತಮ್ಮ ಕೃತಿಯಲ್ಲಿ ಬಸವಣ್ಣನನ್ನು ಮಾದಿಗ ಜಾತಿಯವರು ಎಂಬ ವಿವಾದಕ್ಕೆ ಮಾತ್ರ ಸೀಮಿತಗೊಳಿಸಿದ್ದಾರೆ. ಆದರಿಂದ ಎಷ್ಟೋ ಜನ ಸ್ವಾಮಿಗಳು ಹಾಗೂ ಬಸವ ಭಕ್ತರು ಬಸವಣ್ಣನ ಜಾತಿ ಮುಖ್ಯವಲ್ಲ. ಆದರೆ ಅವರ ತತ್ವಗಳು ಮುಖ್ಯವೆಂದು ಹೇಳಿದ್ದಾರೆ. ಆದರೆ ಅವರೂ ಕೂಡ ಈ ಕೃತಿಯನ್ನು ಸಮಗ್ರವಾಗಿ ಓದಿದಂತಿಲ್ಲ. ಈ ಕೃತಿಯ 2ರಿಂದ 5 ಪುಟಗಳನ್ನು ಓದಿದಾಗ ಬಸವಣ್ಣನವರ ಹುಟ್ಟಿನ ಬಗ್ಗೆ ಅಪಚಾರವಾಗುವಂತೆ ಹೇಳಿ ಬಸವಣ್ಣನವರ ಅನುಯಾಯಿಗಳಿಗೆ ಆಘಾತವನ್ನು ಕೊಟ್ಟಿದ್ದಾರೆ ಎಂಬ ಸಂಗತಿಯನ್ನು ಈ ಕೃತಿಯಲ್ಲಿ ಅರಿಯಬಹುದು. ಈ ಹಿಂದೆ ಧರ್ಮ ಕಾರಣ, ಮಹಾಚೈತ್ರ ಕೃತಿಗಳಿಂದ ಸಮಾಜದಲ್ಲಾದ ಗಲಭೆಗಳು ಮರುಕಳಿಸುವುದರಲ್ಲಿ ಸಂದೇಹವಿಲ್ಲ.

ಆದ್ದರಿಂದ ಈ ಕೂಡಲೇ ಸರ್ಕಾರ ಎಚ್ಚೆತ್ತು ಈ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಿ ಹಾಗೂ ಕೃತಿ ರಚಿಸಿದ ಡಾ. ಬಂಜಗೆರೆ ಹಾಗೂ ಅದನ್ನು ಪ್ರಕಟಿಸಿದ ಪ್ರಕಾಶಕರ ಮೇಲೆ ಫಿರ್ಯಾದು ದಾಖಲು ಮಾಡಿ ಅವರನ್ನು ದಂಡಿಸುವಂತೆ ಕ್ರಮ ಕೈಗೊಳ್ಳಲಿ.

(ಸಂಯುಕ್ತ ಕರ್ನಾಟಕ, ಜನಮನ ವಿಭಾಗ, 31-5-07)

★ ★ ★ ★ ★

ಪ್ರಚಾರಕ್ಕಾಗಿ ಜನಿಸಿದ್ದು "ಆನು ದೇವಾ ಹೊರಗಣವನು...."

- ಡಾ. ಎಚ್.ಚಂದ್ರಶೇಖರ್

ಡಾ. ಬಂಜಗೆರೆ ಜಯಪ್ರಕಾಶ್ ತಮ್ಮ ಆನು ದೇವಾ ಹೊರಗಣವನು ಕೃತಿಯನ್ನು ಸಂಶೋಧನಾ ಕೃತಿ ಹಾಗೂ ವಚನ ಸಾಹಿತ್ಯದ ಅಧ್ಯಯನದಲ್ಲಿ ಬೆಳೆದಿರುವ ಕಸವನ್ನು ಹಸನುಗೊಳಿಸುವ ಒಂದು ಪ್ರಯತ್ನ ಎಂದು ಹೇಳಿಕೊಂಡಿದ್ದಾರೆ.

ಈ 82 ಪುಟಗಳ ಕೊನೆಯಲ್ಲಿ ಡಾ ಬಂಜಗೆರೆಯವರು ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಆದರೆ ಅವು ಒಟ್ಟು

16 ಪುಸ್ತಕಗಳು ಮತ್ತು ಅವುಗಳಲ್ಲಿ ಯಾವ ಗ್ರಂಥಗಳೂ ಮೂಲಗ್ರಂಥಗಳಲ್ಲ. ಇವರು ಮೂಲ ಸಾಹಿತ್ಯವನ್ನು (Original Source) ಈ ಪುಸ್ತಕದ ರಚನೆಗಾಗಿ ಅಧ್ಯಯನ ಮಾಡಿಲ್ಲ ಎಂಬುದು ಸ್ಪಷ್ಟ; ಎಲ್ಲವೂ ಎರವಲು ಪಡೆದ ಮಾಹಿತಿಗಳೇ (Secondary Source Material). ಅಂದರೆ ಇವರು ಯಾವುದೋ ಸಂದರ್ಭದಲ್ಲಿ ಯಾರೋ ಬರೆದ ಮಾತುಗಳನ್ನು ತಮ್ಮ ವಾದಕ್ಕೆ ಹೊಂದಿಸುವ ವ್ಯರ್ಥ ಪ್ರಯತ್ನ ಮಾಡಿದ್ದಾರೆ ಎಂದು ಹೇಳಲೇಬೇಕು. ಈ ಪುಸ್ತಕದ ಹಿಂಬದಿ ಪುಟದಲ್ಲಿ ಶ್ರೀ ಇಂದುಧರ ಹೊನ್ನಾಪುರ ಅವರ 'ಕಾಪಿ-ಪೇಸ್ಟ್' ಎಂಬ ಪದ ಈ ಪುಸ್ತಕಕ್ಕೆ ನೇರವಾಗಿ ಅನ್ವಯಿಸುತ್ತದೆ.

ಬಸವಣ್ಣ ಅನೈತಿಕ ಆಚರಣೆಗಳ ಸಂತಾನ?

ಇದುವರೆಗೆ ಪ್ರಕಟವಾಗಿರುವ ಎಲ್ಲಾ ಕಾವ್ಯಗಳಲ್ಲಿ ಮತ್ತು ಸಂಶೋಧಕರು ಬರೆದಿರುವ ಎಲ್ಲಾ ಗ್ರಂಥಗಳಲ್ಲಿ ಬಸವಣ್ಣನವರ ತಂದೆ ಮಾದಿರಾಜ (ಮಾದರಸ) ಹಾಗೂ ತಾಯಿ ಮಾದಲಾಂಬಿಕೆ (ಮಾದಾಂಬೆ) ಎಂದು ಉಲ್ಲೇಖಿತವಾಗಿರುವ ವಿಷಯ ಸರ್ವವಿದಿತ. ಆದರೆ ಬ.ಜ.ಪ್ರ.ಅವರು ಬಸವಣ್ಣನವರು ಮಾದಿರಾಜನಿಗೆ ಉದರ ಸಂಜಾತ ಮಗನಾಗಿರದೆ ಕರ ಸಂಜಾತ ಮಗನಾಗಿರಬೇಕು ಎಂದು ಬರೆದಿದ್ದಾರೆ (ಪುಟ 64-68). ಅಷ್ಟೇ ಅಲ್ಲ,ಮಾದಿರಾಜನು ಕೃಷ್ಣರ ಭಟನಂತೆ ವಾಮಾಚಾರ ತಾಂತ್ರಿಕನಾಗಿದ್ದು, ತನ್ನ ಸ್ತ್ರೀ ಪ್ರಧಾನ ಸಾಧನೆಗಾಗಿ ಡೊಂಬಿನಿ, ಮಾತಂಗಿನಿ, ರಜಕಿನಿ (ಕೆಳ ಜಾತಿಗಳವರು) ಯರಂಥ ಸ್ತ್ರೀಯರನ್ನು ಉಪಯೋಗಿಸಿಕೊಂಡು ಬಸವಣ್ಣನನ್ನು ಕರ ಸಂಜಾತ ಮಗನಾಗಿ ಪಡೆದನು ಎಂದು ಈ ಲೇಖಕರು ಆಘಾತಕಾರಿ ಆಧಾರರಹಿತ ಮಾತುಗಳನ್ನು ಹೇಳುತ್ತಾರೆ. ಅಂದರೆ ಬಸವಣ್ಣನವರು ಮಾದಿರಾಜನು ಮಾಡುತ್ತಿದ್ದ ಅನೈತಿಕ ಆಚಾರಗಳ ಕೂಸು ಎಂದರ್ಥ ! ಅಂದರೆ ಬಸವಣ್ಣನವರ ತಾಯಿ ಯಾರೋ ಗೊತ್ತಿಲ್ಲ, ತಂದೆ ಮಾತ್ರ ವಾಮಾಚಾರಿ ಮಾದಿರಾಜನು ಎಂದು ಹೇಳುತ್ತಾರೆ ಲೇಖಕರು! (ಪುಟ -64)ನಂತರ ಮುಂದುವರೆದು, ತಾಯಿಯ ಹೆಸರು ಮಾದಲಾಂಬೆ ಎಂದು ಒಪ್ಪಿಕೊಂಡು ಆಕೆಯ ಗಂಡನ ಹೆಸರು ಮಾದಿರಾಜ, ಚಂದ್ರಶೇಖರ ಸ್ವಾಮಿ ಮುಂತಾಗಿ ಇದೆ ಎಂದು ಯಾವ ಆಕರಗಳನ್ನು ನೀಡದೆ ಆಧಾರರಹಿತವಾಗಿ. ಬಸವಣ್ಣನವರ ತಾಯಿಯಾದ ಮಾದಲಾಂಬಿಕೆ ಪಾತಿವ್ರತ್ಯಕ್ಕೆ ಕಳಂಕ ಎಳಿಯುತ್ತಾರೆ (ಪುಟ-65). ಇಷ್ಟೇ ಅಲ್ಲ, ಪ್ರೊ. ಕಲಬುರ್ಗಿಯವರು ಮಾದಿರಾಜನಿಗೆ ಬಸವಣ್ಣ ಉದರ ಸಂಜಾತ ಮಗನಲ್ಲ ಎಂದು ಒಂದು ಕಡೆ ಹೇಳಿದ್ದಾರೆ (ಪುಟ-68) ಎಂದು ಬ.ಜ.ಪ್ರ.ಹೇಳಿದ್ದಾರೆ. ನಾನೇ ಪ್ರೊ. ಕಲಬುರ್ಗಿಯವರೊಡನೆ ದೂರವಾಣಿ ಮೂಲಕ ಮಾತನಾಡಿದಾಗ ನಾನು ಆ ರೀತಿಯಾಗಿ ಎಲ್ಲಿಯೂ ಹೇಳಿಲ್ಲ ಎಂದು ಹೇಳಿದರು.

ಬಸವಣ್ಣ ಗಂಡು ಬಸವಿ, ನಾಗಾಯಿ ಹೆಣ್ಣು ಬಸವಿ

ಪುಟ 41ರಲ್ಲಿ ಬ.ಜ.ಪ್ರ. ಅವರು ಬಸವಣ್ಣ ಮತ್ತು ಅಕ್ಕನಾಗಮ್ಮ ಕೂಡಲ ಸಂಗಮದಲ್ಲಿ ಆಶ್ರಯ ಪಡೆದ ಪ್ರಸಂಗವನ್ನು ವಿಕೃತವಾಗಿ ಅರ್ಥೈಸುತ್ತಾರೆ.'ಬಸವಣ್ಣ ಹಾಗೂ ನಾಗಾಯಿ ದೇವರ ಸೇವೆಗೆ ಅಂಕಿತರಾದವರು' ಎಂದು ಹೇಳುತ್ತಾ, 'ಬಸವಣ್ಣ ಗಂಡು ಬಸವಿ' ಅಕ್ಕ ನಾಗಾಯಿ ದೇವದಾಸಿ (ಬಸವಿ) ಯಾದಳು ಎಂದಿದ್ದಾರೆ. ಇದಕ್ಕೆ ಪೂರಕವಾಗಿ ಪುಟ 79ರಲ್ಲಿ ಮಾದಿಗ ಜಾತಿಯಲ್ಲಿ ಮೂಢನಂಬಿಕೆಯನ್ನಾಧರಿಸಿದ ಬಾಲ ಬಸಪ್ಪ ಮತ್ತು ಬಸವಿ ಪದ್ಧತಿಯನ್ನು ಉದಾಹರಿಸುತ್ತಾರೆ. ಇವರ ದೃಷ್ಟಿಯಲ್ಲಿ ಮಾದಿಗರಲ್ಲಿ ಗಂಡುಗಳೆಲ್ಲಾ ಗಂಡು ಬಸವಿಗಳು, ಹೆಣ್ಣುಗಳೆಲ್ಲಾ ಬಸವಿಗಳು. ಅಂದರೆ ಮಾದಿಗರಲ್ಲಿ ಗೃಹಸ್ಥ ಜೀವನವೇ ಇಲ್ಲವೆಂದು ಮಾದಿಗರನ್ನು ಹೀಗಳೆಯುತ್ತಾರೆ,ಮಾನ್ಯ ಸಂಶೋಧಕರು! ಈ ಖಂಡನೀಯ ಆಚರಣೆಯು ಬಸವಣ್ಣನವರ ಜೀವನಕ್ಕೆ ಯಾವ ರೀತಿಯಲ್ಲೂ ಸಂಬಂಧವಿಲ್ಲ. ಅಲ್ಲಿಯವರೆಗೆ ಸಿಗದಿದ್ದ ಸಮಾನ ಸ್ಥಾನಮಾನವನ್ನು ಹೆಣ್ಣಿಗೆ ನೀಡಿದವರು ಬಸವಣ್ಣನವರು ಎಂಬುದು ವಚನ ಸಾಹಿತ್ಯವನ್ನು ಅಧ್ಯಯನ ಮಾಡಿದವರಿಗೆಲ್ಲರಿಗೂ ಗೊತ್ತು.

ಅಂಬೇಡ್ಕರ್ ಮತ್ತು ಕುವೆಂಪು ಜನನ

ಸ್ವಯಂ ಘೋಷಿತ ಸತ್ಯ ಸಂಶೋಧಕರಾಗಿರುವ ಈ ಲೇಖಕರು ಬಸವಣ್ಣ ಮತ್ತು ಅಕ್ಕನಾಗಮ್ಮನವರ ಜನನವನ್ನು ಅಂದರೆ ಪಿತೃತ್ವವನ್ನು ಶಂಕಿಸುವುದಲ್ಲದೆ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಮತ್ತು ನಮ್ಮ ಹೆಮ್ಮೆಯ ರಾಷ್ಟ್ರಕವಿ ಕುವೆಂಪುರವರ ಪಿತೃತ್ವವನ್ನೂ ಶಂಕಿಸುತ್ತಾರೆ(ಪುಟ15) ಅವರ ಬುದ್ಧಿ ಸಾಮರ್ಥ್ಯವನ್ನು ನೋಡಿದರೆ ಅವರು ಬ್ರಾಹ್ಮಣ ಸಂಯೋಗದಿಂದ ಜನ್ಮ ತಳೆದವರಿರಬೇಕು ಎಂದು ತಮಗೆ ಯಾರೋ

ಹೇಳಿದರು ಎಂದು ಜಾರಿಕೊಳ್ಳುತ್ತಲೇ ಇಪ್ಪತ್ತನೆಯ ಶತಮಾನದ ಈ ಇಬ್ಬರು ಮಹಾಪುರುಷರಿಗೆ ಮಸಿ ಬಳಿಯುತ್ತಾರೆ. ಇದೆಂಥ ಆಘಾತಕಾರಿ ಸಂಶೋಧನೆ !!

ವಚನಗಳ ಆಧಾರ

ಬಸವಣ್ಣನವರು ಹುಟ್ಟಿನಿಂದ ಶೈವ ಬ್ರಾಹ್ಮಣರು ಎಂಬುದಕ್ಕೆ ಕಾವ್ಯಗಳು,ಶಾಸನಗಳು ಮತ್ತು ವಚನಗಳು ಸಾಕ್ಷಿಯಾಗಿವೆ. ಬಸವಣ್ಣನವರೇ ತಮ್ಮ ಹಲವಾರು ವಚನಗಳಲ್ಲಿ ತಮ್ಮನ್ನು ಹಾರುವ ಜಾತಿಯವರು ಹಾಗೂ ವಿಪ್ರ ಕುಲ ಸಂಜಾತ ಎಂದು ಹೇಳಿಕೊಂಡಿದ್ದಾರೆ. 'ಆನು ಹಾರುವನೆಂದರೆ ಕೂಡಲ ಸಂಗಮ ದೇವ ನಗುವನಯ್ಯ'(ವ.ಸಂ.345) 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸ-ದಿರಯ್ಯ'(ವ.ಸಂ.344), 'ಕೂಡಲ ಸಂಗಮದೇವನು ವಿಪ್ರಕರ್ಮವ ಬಿಡಿಸಿ, ಅಶುದ್ಧನ ಶುದ್ಧನಾಗಿ ಮಾಡಿದನಾಗಿ' (ವ.ಸಂ716) ಎಂದು ಮುಂತಾಗಿ ಹೇಳಿಕೊಂಡಿರುವರು. ಹುಟ್ಟಿನಿಂದ ಬ್ರಾಹ್ಮಣರಾಗಿದ್ದರೆಂಬುದು ಸ್ಪಷ್ಟ, ಬಸವಣ್ಣನವರ ಪತ್ನಿ ಗಂಗಾಂಬಿಕೆಯವರು ಬಸವಣ್ಣನವರನ್ನು'ಮಾದಲಾಂಬಿಕೆಯ ನಂದನ' 'ಮಾದರಸನ ಮೋಹದ ಮಗನು'(ವ.ಸಂ.261) ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಡಿವಾಳ ಮಾಚಿದೇವರು 'ಶೈವಾಗಮಾಚಾರ್ಯ ಮಂಡಗೆಯ ಮಾದಿರಾಜನ ಸತಿ ಮಾದಾಂಬಿಕೆಯ ಗರ್ಭ ದಿಂದವತರಿಸಿದ ಬಸವಣ್ಣ' ಎಂದು ಹೇಳುತ್ತಾರೆ(ವ.ಸಂ 569).

ಇಷ್ಟೆಲ್ಲಾ ಸ್ಪಷ್ಟವಾದ ಆಧಾರಗಳಿದ್ದರೂ ಬ.ಜ.ಪ್ರ ಅವರು ಬಸವಣ್ಣನವರ ಜನನದ ಬಗ್ಗೆ ಶಂಕೆ ವ್ಯಕ್ತಪಡಿಸಿ ಸಂಶೋಧನೆಯ ಹೆಸರಿನಲ್ಲಿ ಸಮಾಜದಲ್ಲಿ ರಾಡಿಯನ್ನು ಎರಚುವ ಕೆಲಸ ಮಾಡಿದ್ದಾರೆ. ಕೇವಲ ಅಗ್ಗದ ಪ್ರಚಾರ, ಹೆಸರು ಮತ್ತು ಹಣ ಗಳಿಸುವ ಉದ್ದೇಶದಿಂದ ಈ ಸ್ವಯಂ ಘೋಷಿತ ಸಂಶೋಧಕರು ಈ ಪುಸ್ತಕವನ್ನು ಬರೆದಿದ್ದಾರೆ.

ಸುಮಾರು 900 ವರ್ಷಗಳ ವಚನ ಸಾಹಿತ್ಯದ ಅಧ್ಯಯನದ ನಂದನವನದಲ್ಲಿ ಇದೊಂದು ಕಳೆಯಾಗಿ ಬೆಳೆದಿದೆ. ಇದನ್ನು ಕಿತ್ತೆಸೆಯಲೇಬೇಕು; ಹೊರ ಹಾಕಲೇಬೇಕು. (ವಿಜಯ ಕರ್ನಾಟಕ)

★ ★ ★ ★ ★ ★ ★ ★ ★ ★

'ಆನು ದೇವಾ' ಕೃತಿ ಮುಟ್ಟುಗೋಲು ಇಲ್ಲ : ಎಂ.ಪಿ. ಪ್ರಕಾಶ್

ಬಳ್ಳಾರಿ: ಬಸವಣ್ಣನವರ ಜಾತಿಯ ಮೂಲದ ಕುರಿತು ವಿವಾದಕ್ಕೆ ಕಾರಣವಾಗಿರುವ ಬಂಜಗೆರೆ ಜಯಪ್ರಕಾಶ್ ಅವರ ಆನುದೇವ ಹೊರಗಣವನು ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂಬ ಬೇಡಿಕೆಯನ್ನು ಗೃಹ ಸಚಿವ ಎಂ.ಪಿ.ಪ್ರಕಾಶ್ ಅವರು ತಳ್ಳಿ ಹಾಕಿದ್ದು ತಾವು ಆ ಕೃತಿಯ ಪರವಾಗಿ ನಿಲ್ಲುವುದಾಗಿ ಹೇಳಿದ್ದಾರೆ. ಮಾದಾರ ಚೆನ್ನಯ್ಯ ಗುರು ಪೀಠ ಹಿತರಕ್ಷಣಾ ಸಮಿತಿಯ ವತಿಯಿಂದ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮಾದಿಗರ ಸ್ವಾಭಿಮಾನ ಸಮಾವೇಶ ಹಾಗೂ ಮಾದಿಗ ಸಮಾಜದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆ ಕೃತಿಯಲ್ಲಿ ಲೇಖಕರು ಇನ್ನೊಬ್ಬರ ಮನಸ್ಸನ್ನು ನೋಯಿಸುವ ಅಥವಾ ಧಾರ್ಮಿಕ ಭಾವನೆಯನ್ನು ಕೆರಳಿಸುವ ಪ್ರಯತ್ನವನ್ನೇನೂ ಮಾಡಿಲ್ಲ. ಬಸವಣ್ಣನವರ ಹುಟ್ಟಿನ ಬಗ್ಗೆ ಇರುವ ಸಂಭವನೀಯತೆಯನ್ನು ಮಾತ್ರ ಲೇಖಕರು ವ್ಯಕ್ತಪಡಿಸಿದ್ದಾರೆ. ಇದು ಹೀಗೆಯೇ ಇತ್ತು ಎಂದು ಅವರು ಬರೆದಿಲ್ಲ. ಈ ಹಿನ್ನೆಲೆಯಲ್ಲಿ ಮೂಲವನ್ನು ಕೆದಕುವ ಪ್ರಯತ್ನ ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟರು. ಆದರೆ ಬಸವಣ್ಣನವರ ಅಂಕಿತವನ್ನೇ ಬದಲಾಯಿಸಿದ ಮಾತೆ ಮಹಾದೇವಿ ಅವರೂ ಈ ಕೃತಿಯ ಬಗ್ಗೆ ವಿರೋಧ ವ್ಯಕ್ತಪಡಿಸಿರುವುದು ಹಾಸ್ಯಾಸ್ಪದವಾಗಿದೆ. ಪುಸ್ತಕವನ್ನು ಸುಡುವ ಮೂಲಕ ವಿಚಾರಗಳನ್ನು ಕೊಲ್ಲುವ ಅಗತ್ಯವಿಲ್ಲ ಎಂದು ತಿಳಿಸಿದರು.

ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರುಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ ಅವರು ಮಾತನಾಡಿ, ಬಸವಣ್ಣನವರು ಹುಟ್ಟಿನಿಂದ ಮಾದಿಗ ಜಾತಿಯವರೋ ಅಥವಾ ಬ್ರಾಹ್ಮಣರೋ ಎನ್ನುವ ಕುರಿತು ನಿರ್ಧಾರಕ್ಕೆ ಬರಲು ಸರ್ಕಾರ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಿ, ಸಮಿತಿಯು ಎರಡೂ ಅಭಿಪ್ರಾಯಗಳನ್ನು ಪಡೆದು ನಿರ್ಧಾರಕ್ಕೆ ಬರಲಿ. ಕೃತಿಯನ್ನು ಮುಟ್ಟುಗೋಲು ಹಾಕಬೇಕೋ ಬೇಡವೋ ಎನ್ನುವುದನ್ನು ಗೃಹ ಸಚಿವರು ಸ್ಪಷ್ಟಪಡಿಸಲಿ ಎಂದರು.

ಶ್ರೀ ಎಂ.ಪಿ.ಪ್ರಕಾಶರ ಹೇಳಿಕೆಗೆ
ಪೂಜ್ಯ ಮಾತಾಜಿಯವರಿಂದ ಆಕ್ಷೇಪ

ಬಂಜಗೆರೆ ಜಯಪ್ರಕಾಶರ ಕೃತಿ ಆನು ದೇವಾ ಹೊರಗಣವನು ಇತಿಹಾಸವನ್ನು ವಿಕೃತಗೊಳಿಸಿದ್ದು ಮಾತ್ರವಲ್ಲ ಅನೇಕ ಸತ್ತ ಇಲಿ ಹೆಗ್ಗಣಗಳನ್ನು ಹೊರಗೆ ಹಾಕುತ್ತಿದೆ. ನಮ್ಮ ದೇಶದಲ್ಲಿ ಸತ್ಯದ ಬೆಲೆ ಏನಿದೆ ಎಂಬುದನ್ನು ಬೆತ್ತಲೆ ಗೊಳಿಸುತ್ತಿದೆ.

ಗೃಹ ಸಚಿವ ಸ್ಥಾನಕ್ಕೆ ಅಗತ್ಯವಾದ ಯಾವುದೇ ಗಡಸುತನ, ವಿವೇಚನಾ ಪ್ರಜ್ಞೆ ಇಲ್ಲದೆ ಸಮಯ ಸಾಧಕತನದ ರಾಜಕಾರಣ ಮಾಡುತ್ತ ರಾಜಕೀಯ ಅಧಿಕಾರವನ್ನು ಗಿಟ್ಟಿಸುತ್ತ ಬಂದಿರುವ ಶ್ರೀ ಎಂ.ಪಿ.ಪ್ರಕಾಶರ ಆಷಾಢಭೂತಿತನವನ್ನು ಮತ್ತೊಮ್ಮೆ ಈ ಕೃತಿ ಹೇಳಿಕೆ ಬಯಲು ಮಾಡಿದೆ. ಅವರ ಅಂತರಂಗದಲ್ಲಿ ಸತ್ತು ನಾರುತ್ತಿದ್ದ ಆಲೋಚನೆಗಳ ಇಲಿ ಹೆಗ್ಗಣಗಳನ್ನು ಹೊರಹಾಕಿದೆ. ಬಾಯಲ್ಲಿ ನಿರರ್ಗಳವಾಗಿ ಬಸವಣ್ಣನವರ ಹೆಸರು; ಅಂತರಂಗದಲ್ಲಿ ಸದಾ ಬಸವ ವಿರೋಧಿ ನೀತಿ ಮತ್ತು ತಂತ್ರಗಳನ್ನು ಅನುಸರಿಸುತ್ತ ಬಂದಿರುವ ಶ್ರೀ ಎಂ.ಪಿ.ಪ್ರಕಾಶರ ನಡೆ ಹಲವಾರು ಪ್ರಸಂಗಗಳಲ್ಲಿ ಬಯಲಾಗುತ್ತಲೇ ಬಂದಿದೆ.

1. ಮಹಾಚೈತ್ರ ಎಂಬ ಪುಸ್ತಕದಲ್ಲಿ ಗುರು ಬಸವಣ್ಣನವರು, ಅಕ್ಕಮಹಾದೇವಿ, ಅಕ್ಕನಾಗಲಾಂಬಿಕೆ ಮುಂತಾದ ಮಹಾನುಭಾವರ ಚರಿತ್ರೆ ಮತ್ತು ಚಾರಿತ್ರ್ಯ ಎರಡನ್ನೂ ಹನನ ಮಾಡಿ ಡಾ|| ಹೆಚ್.ಎಸ್.ಶಿವಪ್ರಕಾಶ್ ಪುಸ್ತಕ ಬರೆದುದಲ್ಲದೆ ಅದನ್ನು ಗುಲಬರ್ಗಾ ಮತ್ತು ಕುವೆಂಪು ವಿಶ್ವವಿದ್ಯಾಲಯ ಗಳಲ್ಲಿ ಪಠ್ಯ ಪುಸ್ತಕವನ್ನಾಗಿ ಮಾಡಿದಾಗ ಪಾಠ ಮಾಡಲು ನೊಂದುಕೊಂಡ ಶಿಕ್ಷಕರು, ಕೇಳಲು ನೊಂದ ಕೊಂಡ ವಿದ್ಯಾರ್ಥಿಗಳು ನಮ್ಮ ಗಮನಕ್ಕೆ ತಂದಾಗ ಆ ಪುಸ್ತಕವನ್ನು ಪಠ್ಯ ಕ್ರಮದಿಂದ ಹಿಂತೆಗೆದುಕೊಳ್ಳ ನಾವು ಹೋರಾಟಕ್ಕಿಳಿದಾಗ ಎಂ.ಪಿ.ಪ್ರಕಾಶ್ ಪುಸ್ತಕದ ಪರವಾಗಿ ನಿಂತರು. ದಲಿತ ಸಂಘಟನೆಗಳಿಂದ ವಿಚಾರ ಸಂಕಿರಣಗಳನ್ನು ಮಾಡಿಸಿ, ಆ ಪುಸ್ತಕವನ್ನು ಪಠ್ಯವಾಗಿ ಓದದೆ ಇರುವ ಹುಡುಗರಿಂದ ಆ ಪುಸ್ತಕ ಇರಲೇ ಬೇಕೆಂದು ಹೂವಿನ ಹಡಗಲಿ ಮುಂತಾದಲ್ಲಿ ಚಳುವಳಿ ಮಾಡಿಸಿದರು. ಇದರರ್ಥ ಶರಣರ ನಿಂದನೆ ಶ್ರೀ ಪ್ರಕಾಶ್ ಅವರಿಗೆ ಸಂತೋಷ ಕೊಡುವ ಸಂಗತಿ. ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬ ಸಭ್ಯ ಸೋಗಿನಲ್ಲಿ ಅಪ್ರತ್ಯಕ್ಷವಾಗಿ ಶರಣ 'ನಿಂದನೆಗೆ ಪ್ರೋತ್ಸಾಹ ಕೊಡುತ್ತಿದ್ದಾರೆಂದು ಏಕೆ ಊಹಿಸಬಾರದು?

2. ಎಂ.ಪಿ.ಪ್ರಕಾಶ್ ಮಾಡಿರುವ ಘನ ಘೋರ ಅಪರಾಧ. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರು ಆಗುವುದನ್ನು ತಪ್ಪಿಸಿದ್ದು. ಶ್ರೀ ದೇವೇಗೌಡರು ಪ್ರಧಾನಿ ಪಟ್ಟಕ್ಕೆ ಯತ್ನಿಸಲು ದೆಹಲಿಗೆ ಹೊರಟು, ಗುಲಬರ್ಗಾದಲ್ಲಿ ಚಳುವಳಿ ನಡೆಸುತ್ತಿದ್ದ ನಮ್ಮೊಡನೆ ದೂರವಾಣಿ ಯಲ್ಲಿ ಮಾತನಾಡಿದರು. ರಾ.ಬ.ದಳದ ಮುಖಂಡರಾದ ಶರಣ.ಎನ್.ಪುಟ್ಟರುದ್ರ, ಶರಣೆ. ದೇವಿಕಾ ಶರಣಪ್ಪ ಮುಂತಾದವರು ಮುಖ್ಯಮಂತ್ರಿ ಶ್ರೀ ದೇವೇಗೌಡರ ಕೊಠಡಿಯಲ್ಲಿದ್ದರು. ಮುಖ್ಯ ಮಂತ್ರಿಗಳೊಡನೆ ಗೃಹ ಸಚಿವರಾಗಿದ್ದ ಶ್ರೀ ಪಿ.ಜಿ.ಆರ್.ಸಿಂಧ್ಯ ಇದ್ದರು. ಸ್ಪಷ್ಟ ಮಾತುಗಳಲ್ಲಿ ಶ್ರೀ ದೇವೇಗೌಡರು ಹೇಳಿದರು. "ನಾನು ದೆಹಲಿಗೆ ಹೊರಟಿದ್ದೇವೆ. ನಾಳೆ ರಾಷ್ಟ್ರಪತಿಗೆ ಮನವಿ ಸಲ್ಲಿಸಲಿದ್ದೇನೆ. ನಾಡಿದ್ದು ಬೆಂಗಳೂರಿಗೆ ಬಂದು ಮಾಡುವ ಮೊದಲ ಕೆಲಸ ಬಸವೇಶ್ವರರ ಹೆಸರನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಇಡುವುದು. ದಯವಿಟ್ಟು ನನ್ನ ಮಾತು ನಂಬಿರಿ. ಮಾಡದಿದ್ದರೆ ನನ್ನನ್ನು ವಚನ ಭ್ರಷ್ಟ ಎನ್ನಿರಿ. ದೇವರಾಣೆ, ನಿಮ್ಮ ಪಾದದಾಣೆ ಇದು ಸತ್ಯ.

ಎಂ.ಪಿ.ಪ್ರಕಾಶರಿಗೆ ಸಂಕಟ ಶುರುವಾಯಿತು. ಶ್ರೀ ದೇವಗೌಡರು ಎರಡು ದಿನಗಳ ನಂತರ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನು ಇಟ್ಟರೆ ಶ್ರೇಯಸ್ಸು ರಾ.ಬ.ದಳಕ್ಕೆ ಹೋಗುತ್ತದೆ. ಇದನ್ನು ಕೆಡಿಸಬೇಕು ಎಂದೋ ಅಥವಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರು ಆಗಬಾರದು ಎಂದೋ ಪಿತೂರಿ ಮಾಡಿ (ಆಗ ಖಾಸಗಿ ಚಾನೆಲ್ ಬಂದಿರಲಿಲ್ಲ) ಸರ್ಕಾರಿ ದೂರದರ್ಶನದ ಮೂಲಕ

ನಾವು ಚಳುವಳಿಯನ್ನು ವಾಪಾಸು ತೆಗೆದುಕೊಂಡಿದ್ದೇವೆಂದು ಸುಳ್ಳು ಪ್ರಚಾರ ಮಾಡಿ, ಗದಗಿಗೆ ಹೋಗಿ ತೋಂಟದಾರ್ಯ ಶ್ರೀಗಳನ್ನು ಕರೆದುಕೊಂಡು ಗುಲಬರ್ಗಾಕ್ಕೆ ಬಂದು, ಜೇಲಿನೊಳಗೆ ಹೋಗಿ ನಾನು ಚಳುವಳಿಯನ್ನು ವಾಪಸು ತೆಗೆದುಕೊಂಡುದಾಗಿ ಸತ್ಯಾಗ್ರಹಿಗಳಿಗೆ ತಿಳಿಸಿ, ಅವರು ಒಪ್ಪದೆ ಇದ್ದಾಗ ಅವರನ್ನು ದೂಷಿಸಿ,ಬಲವಂತವಾಗಿ ಉಪವಾಸ ಬಿಡಿಸಿದ್ದಾರೆ. ಕೇವಲ 2 ದಿನಗಳಲ್ಲಿ ಆಗಿ ಬಿಡುತ್ತಿದ್ದ ಕೆಲಸಕ್ಕೆ ಅಡ್ಡಗಾಲು ಹಾಕಿದ (ಅಪ)ಕೀರ್ತಿಯ ಕಲಂಕದಿಂದ ಎಂ.ಪಿ.ಪ್ರಕಾಶ್ ಮತ್ತು ಗದುಗಿನ ಶ್ರೀಗಳು ಖಂಡಿತಾ ಪಾರಾಗಲಾರರು. ಬಹುಶಃ ಸ್ವಧರ್ಮಕ್ಕೆ ದ್ರೋಹ ಬಗೆಯುವ ಶ್ರೀ ಎಂ.ಪಿ.ಪ್ರಕಾಶರಂಥವರು ಬೇರೆ ಯಾವುದೇ ಸಮಾಜದಲ್ಲಿ ದೊರೆಯಲಿಕ್ಕಿಲ್ಲ.

3. ಇತ್ತೀಚೆಗೆ ಸಿರಿಗೆರೆ ಶಾಖಾ ಮಠವಾದ ಸಾಣೇಹಳ್ಳಿ ಮಠದ ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ಶಿವ ಸಂಚಾರ ಎಂಬ ತಂಡವನ್ನು ಕಟ್ಟಿಕೊಂಡು ಸಂಕ್ರಾಂತಿ, ತಲೆ ದಂಡ, ಮಹಾಚೈತ್ರ ಮುಂತಾದ ಶರಣ ದೂಷಣೆಯ ನಾಟಕಗಳನ್ನು ಕನ್ನಡೇತರ ಭಾಷಿಕರಿಗೆ ಪರಿಚಯ ಮಾಡಿಸಲು ಹೊರಟರು. ಕನ್ನಡ ಭಾಷಿಕರಲ್ಲಿ ಶರಣರ ಬಗ್ಗೆ ತಪ್ಪು ಕಲ್ಪನೆ ಹುಟ್ಟಿಸಿದಷ್ಟೇ ಇವರಿಗೆ ಸಮಾಧಾನ ತಂದಿರಲಿಕ್ಕಿಲ್ಲ; ಕನ್ನಡೇತರ ಭಾಷೆಯವರಿಗೆ ಶರಣ ಸಂಸ್ಕೃತಿಯ ಪರಿಚಯ(?) ಮಾಡಲು ಹೋಗಿ ಬಂದರು. ಈ ಮೇಲಿನ ನಾಟಕ ಗಳನ್ನು ನೋಡಿದವರಿಗೆ ಬಸವಾದಿ ಪ್ರಮಥರ ಭವ್ಯ-ದಿವ್ಯ ನಿಲುವಿನ ಪರಿಚಯವಾಗಲಿ; ಶರಣ ಸಂಸ್ಕೃತಿಯ ಮಾಧುರ್ಯವಾಗಲಿ ಖಂಡಿತ ತಿಳಿದು ಬರದು. ನಂತರ ಒಂದು ಸನ್ಮಾನ ಸಮಾರಂಭ ಜರುಗಿತು. ಆಗ ಸ್ವಾಮಿಗಳು, ಕಲಾವಿದರಿಗೆ ಪಾರ್ಟಿ ಕೊಡುವ ಅಗತ್ಯವಿಲ್ಲ ಸರಳವಾಗಿ ಸನ್ಮಾನಿಸಬೇಕು ಎಂಬ ಅರ್ಥದಲ್ಲಿ ಮಾತನಾಡಿದರು. ಆದರೆ ಎಂ.ಪಿ.ಪ್ರಕಾಶ್ ಕಲಾವಿದರು ಬಯಸುವ ರೀತಿಯಲ್ಲಿ ಅವರಿಗೆ ಖುಷಿ ಕೊಡುವಂತೆ ಪಾರ್ಟಿಕೊಟ್ಟರೆ ತಪ್ಪಿಲ್ಲ ಎಂಬ ಅರ್ಥ ಬರುವಂತೆ ಮಾತನಾಡಿದರು. ಇದನೆಲ್ಲ ನೋಡಿದಾಗ ಧರ್ಮ, ಧಾರ್ಮಿಕ ವ್ಯಕ್ತಿಗಳು ಅಪಹಾಸ್ಯದ ವಸ್ತುಗಳಾಗುತ್ತಿವೆ ಏನೋ; ಶರಣರ ವೇಷ ಭೂಷಣ, ನಟನೆ ಅನುಸರಿಸಲು (Following) ಅಲ್ಲ, ಕೇವಲ ಅನುಕರಣೆ(Imitation)ಗಾಗಿ ಮಾತ್ರ, ಇದು ಶುದ್ಧ ತಪ್ಪು ಎನ್ನಿಸುತದೆ. ಎಂ.ಪಿ. ಪ್ರಕಾಶ್ ಕಲಾವಿದರ ಸ್ವೇಚ್ಛೆಗೆ ಪ್ರೋತ್ಸಾಹ ಕೊಡುವಂತೆ ಮಾತನಾಡಿದುದು ಆಕ್ಷೇಪಣೀಯ.

4.ಎಂ.ಪಿ.ಪ್ರಕಾಶ್ ಮತ್ತು ಶ್ರೀಮತಿ ಲೀಲಾದೇವಿ ಪ್ರಸಾದರು ನಮ್ಮನ್ನು ದ್ವೇಷಿಸುವ ಪರಿ ನೋಡಿದರೆ ಇದು ಈ ಜನ್ಮದಲ್ಲ, ಜನ್ಮ ಜನ್ಮಾಂತರದ್ದು ಎನ್ನಿಸದೆ ಇರದು. ಅವರಿಗೆ ಕತ್ತೆ ಮತ್ತು ಪಂಚ ಕಲ್ಯಾಣಿ ಕುದುರೆಯ ವ್ಯತ್ಯಾಸವೇ ತಿಳಿಯದಷ್ಟು ದೃಷ್ಟಿದೋಷ ಉಂಟಾಗಿದೆ. ಲಿಂಗಾಯತ ಧರ್ಮದ ಜೀವಾಳವಾದ ಸೃಷ್ಟಿಕರ್ತ ಲಿಂಗದೇವನ ಪರಿಕಲ್ಪನೆ ಪಂಚ ಕಲ್ಯಾಣಿ ಕುದುರೆಯಂತೆ, ದಾರ್ಶನಿಕ ಮಾನಸ ಸರೋವರದಲ್ಲಿ ವಿಹರಿಸುವ ರಾಜ ಹಂಸೆಯಂತೆ. ಬಂಜಗೆರೆ ಜಯಪ್ರಕಾಶರ ಊಹಾ ಕಲ್ಪನೆಗಳು ಕತ್ತೆಯಂತೆ, ಕೆಸರಿನಲ್ಲಿ ಮುಳುಗೇಳುವ ಹಂದಿಯಂತೆ. ಅರ್ಥ ಮಾಡಿಕೊಳ್ಳುವ ಸೌಜನ್ಯ ಸಹ ತೋರದೆ ಲೀಲಾದೇವಿ ಪ್ರಸಾದ, ಎಂ.ಪಿ.ಪ್ರಕಾಶ್ ಮುಂತಾದವರು ಚಿತಾವಣೆ ನಡೆಸಿ ಬಸವ ವಚನ ದೀಪ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಶ್ರಮಿಸಿದರು. ಆದರೆ ಬಸವ ಭಕ್ತರಿಗೆ ತೀವ್ರ ನೋವನ್ನುಂಟು ಮಾಡಿ ಇತಿಹಾಸವನ್ನೇ ವಿಕೃತ ಗೊಳಿಸುವ ಬಂಜಗೆರೆಯವರ ಪುಸ್ತಕವನ್ನು ಮುಟ್ಟುಗೋಲು ಹಾಕಿ ಕೊಳ್ಳುವುದಿಲ್ಲ ವಂತೆ. ಬಸವ ವಚನ ದೀಪ್ತಿಯನ್ನು ಮುಟ್ಟುಗೋಲು ಹಾಕಿಸುವಾಗ ಎಂ.ಪಿ.ಪ್ರಕಾಶರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ನೆನಪಾಗಲಿಲ್ಲ, ಬಂಜಗೆರೆ ಪುಸ್ತಕದ ವಿಷಯದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ನೆನಪಾಗುತ್ತಿದೆ. ಅಂದರೆ ಈ ನಾಡಿನಲ್ಲಿ ಸತ್ಯಾಸತ್ಯ ನಿರ್ಣಯವಾಗುವುದು ರಾಜಕೀಯ ಗಣ್ಯರ ಪ್ರೀತಿ- ದ್ವೇಷಗಳ ಆಧಾರದ ಮೇಲೆ! ಸೃಷ್ಟಿಕರ್ತ ಲಿಂಗದೇವನ ಪರಿಕಲ್ಪನೆ ನಮ್ಮ ಸಂಶೋಧನೆಯಲ್ಲ, ಬಸವಣ್ಣನವರು ಬ್ರಾಹ್ಮಣರಲ್ಲ ಮಾದಿಗರು; ತಂದೆ ಮಾದಿರಾಜನ ಅಕ್ರಮ ಆಚರಣೆಗಳಿಂದ ಹುಟ್ಟಿದ ಅಕ್ರಮ ಸಂತಾನ, ಬಸವಣ್ಣನವರು ಗಂಡು ಬಸವಿ, ಅಕ್ಕನಾಗಮ್ಮ ಹೆಣ್ಣು ಬಸವಿ ಅರ್ಥಾತ ದೇವದಾಸಿ ಎಂಬ ಬಂಜಗೆರೆಯ ಊಹೆ ಎಂ.ಪಿ.ಪ್ರಕಾಶರ ಪ್ರಕಾರ ಅಪೂರ್ವ ಸಂಶೋಧನೆ. ಇಂಥ ಅವಿಚಾರಿಗಳು ಯಾರಾದರೇನು ಅವರು ಖಂಡನಾರ್ಹರೇ ಸರಿ.

3. ಲಿಂಗಾಯತ ಸಮಾಜಕ್ಕಿಂದು ಅತ್ಯಗತ್ಯವಾಗಿ ಬೇಕಿದೆ ಗಣಾಚಾರ

- ಮಾತಾಜಿ

ಮಹಾಭಾರತದ ಕಥೆಯಲ್ಲಿ ದ್ರೌಪತಿಯ ವಸ್ತ್ರವನ್ನು ಸೆಳೆದು ಮಾನಾಪಹರಣವನ್ನು ದುಶ್ಶಾಸನನು ಮಾಡುತ್ತಿರುವಾಗ ಜೂಜಾಡಿ ಎಲ್ಲವನ್ನೂ ಕಳೆದುಕೊಂಡ ಪಾಂಡವರು ಒಂದು ಕಡೆ ನಿಸ್ತೇಜರಾಗಿ ಕುಳಿತಿದ್ದರೆ, ಕೌರವರ ಹಂಗಿನಲ್ಲಿ ಬದುಕುತ್ತಿದ್ದ ಹಿರಿಯರಾದ ಭೀಷ್ಮ, ದ್ರೋಣಾದಿ ಆಚಾರ್ಯರುಗಳು ನಿರ್ವೀರ್ಯರಾಗಿ ಕುಳಿತಿದ್ದರು. ಶಕುನಿ ಒಳಗೆ ನಗುತ್ತಿದ್ದ. ಈ ದೃಶ್ಯವನ್ನು ಹೋಲುವಂತಿದೆ ಬಂಜಗೆರೆ ಜಯಪ್ರಕಾಶರ "ಆನು ದೇವ ಹೊರಗಣವನು" ಸೃಷ್ಟಿಸಿರುವ ಪರಿಸ್ಥಿತಿ. ಬಂಜಗೆರೆ ಮಹಾಶಯ ವಿಶ್ವಗುರು ಬಸವಣ್ಣ, ಅಕ್ಕನಾಗಲಾಂಬಿಕೆಯರ ಜನ್ಮ ಮತ್ತು ಜಾತಿಯ ಬಗ್ಗೆ ಅಲ್ಲಸಲ್ಲದ ಮಾತುಗಳನ್ನು ಅಸಂಬದ್ಧವಾಗಿ ಬರೆದು ಪ್ರಕಟಿಸಿದ್ದರೆ, ಹಲವಾರು ಲಿಂಗಾಯತ ಸಂಘಟನೆಗಳು ಪಾಂಡವರಂತೆ ನಿಸ್ತೇಜವಾಗಿವೆ; ಬಹುಪಾಲು ವಿರಕ್ತ ಮಠಾಧಿಪತಿಗಳು ಸರ್ಕಾರವೆಂಬ ಕೌರವರ ಹಂಗಿನಲ್ಲಿದ್ದು ನಿರ್ವೀರ್ಯರಾಗಿ ಕುಳಿತಿದ್ದಾರೆ. ಜೊತೆಗೆ ಮಾದಾರ ಚನ್ನಯ್ಯ ಸ್ವಾಮಿಯವರು ಮತ್ತು ಅವರ ಜೊತೆ ಇರುವ ಕಾಣುವ ಮತ್ತು ಕಾಣದ ಕೈಗಳು ಒಳಗೇ ಮುಸಿ ಮುಸಿ ನಗುತ್ತಿವೆ.

ಏಕ ಪಕ್ಷೀಯ ವಿಚಾರ ಮಂಡನೆಗೆ ಸಂವಾದವೆನ್ನುತ್ತಾರೆಯೆ?

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಶನಿವಾರ ದಿ 9 ರಂದು ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತು ಮುಕ್ತ ಸಂವಾದವನ್ನು ಇಟ್ಟುಕೊಂಡಿರುವುದಾಗಿ ಸಾರ್ವಜನಿಕ ಪ್ರಕಟಣೆ ನೀಡಿದ್ದರು. ಸಂವಾದ ಎಂದರೇನು ಪರ ಮತ್ತು ವಿರೋಧ ಎರಡೂ ಅಭಿಪ್ರಾಯಗಳಿಗೆ ಮನ್ನಣೆ ಕೊಡುವುದು. ಅದಕ್ಕಿಂತ ಮುಖ್ಯವಾಗಿ ವಿವಾದ ಏಳಲು ಕಾರಣವಾದ ವ್ಯಕ್ತಿ ಶ್ರೋತೃಗಳ ಸಂದೇಹಕ್ಕೆ ಸಮಾಧಾನ ನೀಡುವುದು. ಇವೆರಡೂ ಇಲ್ಲದ ಸಂವಾದ ಮದುವೆಯ ಗಂಡು ಗೈರು ಹಾಜರಾದಂತಹ ಮದುವೆಯ ಮಂಟಪದಂತೆ ಗೊಂದಲಕ್ಕೆ ಕಾರಣವಾಯಿತೆಂಬುದು ಗಮನಾರ್ಹ. ಸಂಶೋಧಕರು, ವಿಜ್ಞಾನಿಗಳು ತಮ್ಮ ಕೃತಿ ಎತ್ತುವ ಸಂದೇಹಗಳಿಗೆ, ವಿವಾದಗಳಿಗೆ ಉತ್ತರ ನೀಡಬೇಕಾದುದು ಕರ್ತವ್ಯ. ಡಾ|| ಬಂಜಗೆರೆಯವರನ್ನು ಆಹ್ವಾನಿಸದೆ ಇದ್ದುದು ಶ್ರೀ ಚಂಪಾ ಅವರು ವರನನ್ನು ಬಿಟ್ಟು ನಿಬ್ಬಣ ಹೊರಡಿಸಿದಂತಲ್ಲವೆ?

ವಚನ ಸಾಹಿತ್ಯದ ದಾರ್ಶನಿಕ ಹಿನ್ನೆಲೆ ಇಲ್ಲದ ಲೇಖಕರು, ಸಾಹಿತಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿತರಾಗಿದ್ದುದು ಒಂದು ವಿಶೇಷ. ತಮ್ಮ ವಿಚಾರವನ್ನು ಮಂಡಿಸಿದ ಶ್ರೀ ಬರಗೂರು ರಾಮಚಂದ್ರಪ್ಪ, ಡಾ || ಕೆ.ಮರುಳು ಸಿದ್ದಪ್ಪನವರಂತಹ ಪ್ರೌಢ ಸಾಹಿತಿಗಳು ಚರ್ಚಾಗೋಷ್ಠಿಯಲ್ಲಿ ಕೊನೆಯವರೆಗೆ ಭಾಗವಹಿಸಿ ತಮ್ಮ ವಿಚಾರ ಮಂಡನೆ ಕುರಿತು ಎತ್ತುವ ಸಂದೇಹಗಳಿಗೆ ಉತ್ತರಿಸಬೇಕಾದುದು ಅವರ ಕರ್ತವ್ಯವಾಗಿತ್ತಲ್ಲವೆ? ತಮ್ಮ ಭಾಷಣ ಪೂರೈಸಿ ಅವರುಗಳು ಜಾಗ ಖಾಲಿ ಮಾಡಿದರೆ ಅದಕ್ಕೆ ಸಂವಾದ ಎನ್ನುವರೆ ?

ಪುಸ್ತಕವನ್ನು ಸಮರ್ಥಿಸಿಕೊಳ್ಳುವ ಮತ್ತು ಅದನ್ನು ಮುಟ್ಟುಗೋಲು ಹಾಕಬಾರದೆನ್ನುವ ವಿಚಾರದವರೇ ಆಹ್ವಾನಿತರಾಗಿ ಸೇರಿದ್ದ ಸಭೆಯದು. ಆಹ್ವಾನಿಸದೇ ಇದ್ದರೂ ಪರಿಷತ್ ಅಧ್ಯಕ್ಷರು ಸಾರ್ವಜನಿಕ ಪ್ರಕಟಣೆ ನೀಡಿದ್ದರಿಂದ ಈ ಮೇಲಿನ ಪೂರ್ವ ನಿರ್ಧಾರಿತ (Predetermined View) ವಿಚಾರವನ್ನು ಒಪ್ಪದ ಅನೇಕರು ಆ ಸಭೆಗೆ ಆಹ್ವಾನವಿಲ್ಲದ ಅತಿಥಿಗಳಾಗಿ (Uninvited Guest) ಆಗಮಿಸಿದ್ದರು.

ಯಾವುದೇ ಸಂಘ- ಸಂಸ್ಥೆಯ ಪರವಾಗಿ ಹೋಗದೆ ಸಹಜ ಕುತೂಹಲದಿಂದ ಶ್ರೀ ದಯಾನಂದ ಸ್ವಾಮಿಗಳೂ ಆ ಸಭೆಗೆ ಹೋದರು. ಮುಕ್ತ ಸಂವಾದ ಎಂದಿದ್ದುದರಿಂದ ಮಾತನಾಡಲು

ಅವಕಾಶ ಕೋರಿದರು. ಆದರೆ ಬರಗೂರು ರಾಮಚಂದ್ರಪ್ಪನವರು ಆಹ್ವಾನವಿಲ್ಲದವರಿಗೆ ಮೊದಲು ಅವಕಾಶ ಕೊಡಬಾರದು ಎಂದು ವರದಕ್ಷಿಣೆಗಾಗಿ ಆಶಾಬುರುಕ ವರ ಮದುವೆ ಮಂಟಪದೊಳಗಿಂದ ಎದ್ದು ಹೊರಹೋಗುವಂತೆ ಮುನಿಸಿಕೊಂಡು ರಾಮಚಂದ್ರಪ್ಪ ಹೊರ ನಡೆದರಂತೆ. ಪಾಪ ! ಸಾಹಿತ್ಯ ಪರಿಷತ್ ಅಧ್ಯಕ್ಷ ಚಂಪಾ ಅವರು, ಹೆಣ್ಣಿನ ತಂದೆಯಂತೆ ಗೋಗರೆದು ವರನನ್ನು ಕರೆ ತಂದರು.

ಬರಗೂರು ರಾಮಚಂದ್ರಪ್ಪ, ಡಾ|| ಕೆ. ಮರುಳುಸಿದ್ದಪ್ಪ ಎಲ್ಲರದೂ ಒಂದೇ ಧ್ವನಿ ಪುಸ್ತಕದೊಳಗಣ ಅಭಿಪ್ರಾಯಕ್ಕೆ ಸಹಮತವಿಲ್ಲದಿದ್ದರೂ ಅಭಿವ್ಯಕ್ತಿ ಸ್ವಾತಂತ್ರ್ಯ ದೃಷ್ಟಿಯಿಂದ ಪುಸ್ತಕವನ್ನು ಮುಟ್ಟುಗೋಲು ಹಾಕಬಾರದು. ಸಾರ್ವಜನಿಕರು ತಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಬೇಕು ಎಂದಾಗ ಮೊದಲು ಅತಿಥಿಗಳ ಭಾಷಣ ಆಗಲಿ ನಂತರ ಉತ್ತರಿಸುವರು ಎಂದು ಶ್ರೀ ಚಂಪಾ ಅವರು ಹೇಳಿದರು. ಆದರೆ, ಈ ಎಲ್ಲ ಸಾಹಿತ್ಯ ದಿಗ್ಗಜಗಳು ತಮ್ಮ ಭಾಷಣ ಮುಗಿಯುತ್ತಿದ್ದಂತೆಯೇ ಮೆಲ್ಲನೆ ಜಾಗ ಖಾಲಿ ಮಾಡಿದರು. ಹೆಚ್ಚಿನ ಸಾಹಿತಿಗಳು, ರಾಜಕೀಯ ಧುರೀಣರು ಟೂತ್ ಪೇಸ್ಟ್ ಟ್ಯೂಬಿನಂತೆ, ಅದು ವಸ್ತುವನ್ನು ಹೊರಹಾಕುತ್ತದೆಯೇ ವಿನಾ ಒಳಗೆ ತೆಗೆದುಕೊಳ್ಳುವುದಿಲ್ಲ. ಮತ್ತೊಬ್ಬರ ವಿಚಾರವನ್ನು ಕೇಳಲು ಸಹನೆ ಇಲ್ಲದೆ ತಮ್ಮದನ್ನು ಮಾತ್ರ ಹೊರಹಾಕುವ ಮನೋಭಾವ ಹೊಂದಿರುತ್ತಾರೆ.

ನಾಗರಾಜ್ ಎಂಬ ಒಬ್ಬ ಸಾಹಿತಿ ಶ್ರೀ ದಯಾನಂದ ಸ್ವಾಮಿಗಳ ಬಳಿ ತೆರಳಿ, "ಮಾತೆ ಮಹಾದೇವಿಯ ಗೂಂಡಾ ಶಿಷ್ಯ" ಎಂದು ದೂಷಿಸುತ್ತಲೇ ಶ್ರೀ ದಯಾನಂದ ಸ್ವಾಮಿಗಳು ಕೆರಳಿ "ನಿನ್ನನ್ನು ಸೂಳೆ ಮಗ ಎಂದರೆ ಸುಮ್ಮನಿರುತ್ತೀಯಾ? ನಮ್ಮ ಧರ್ಮಗುರುವನ್ನು ಸೂಳೆ ಮಗ ಎಂದು ನಿಂದಿಸಿರುವ ಪುಸ್ತಕವನ್ನು ಸಮರ್ಥಿಸಿಕೊಳ್ಳಬೇಕೆ?" ಎಂದು ಗರ್ಜಿಸಿ ಆತನ ಷರ್ಟಿನ ಕಾಲರ್ ಹಿಡಿದು ಕೆನ್ನೆಗೆ ಒಂದು ಬಾರಿಸಿದ್ದಾರೆ. ನೆರೆದವರು ಸೇರಿ ಉಭಯತರನ್ನು ಸಮಾಧಾನ ಮಾಡಿದ್ದಾರೆ.

ಮರು ದಿವಸ ಚಂಪಾ ಅವರು ಶ್ರೀ ದಯಾನಂದ ಸ್ವಾಮಿಗಳನ್ನು ಕಾವಿಯನ್ನು ತೊಟ್ಟ ಗೂಂಡಾ ಎಂದು ಟಿ.ವಿ ಸಂದರ್ಶನದಲ್ಲಿ ಹೇಳಿದ್ದಾರೆ. ಆದರೆ ಶ್ರೀ ದಯಾನಂದ ಸ್ವಾಮಿಯವರನ್ನು ರೊಚ್ಚಿಗೇಳಿಸುವ ಅವಾಚ್ಯ ಮಾತುಗಳನ್ನು ಆಡಿದ ನಾಗರಾಜ ಅವರು ಸಾಹಿತಿಯೇ ಇರಲಿ, ಪತ್ರಕರ್ತರೇ ಇರಲಿ ಅವರದು ಶಿಷ್ಟಾಚಾರವೆ? ಅಲ್ಲಿ ನಾವು ಇಲ್ಲದೆ ಇರುವಾಗ ನಮ್ಮ ಸಂಸ್ಥೆಯ ಪರವಾಗಿಯೂ ಹೋಗದೆ ಇದ್ದಾಗ, ನಾವೇ ಕಳಿಸಿರಬಹುದೆಂದು ಊಹಿಸಿ ನಮ್ಮ ಹೆಸರು ಹೇಳಿ, "ಮಾತೆ ಮಹಾದೇವಿಯವರ ಗೂಂಡಾ ಶಿಷ್ಯ " ಎಂದು ದಯಾನಂದರನ್ನು ದೂಷಿಸುವದು ಸಾಹಿತಿಗಳಿಗೆ ಶಿಷ್ಟಾಚಾರವೆ?

ಹೇಳಿ ಕೇಳಿ ಚಂಪಾ ಅವರು ನಾಸ್ತಿಕವಾದದವರು; ದಾರ್ಶನಿಕ ಜೀವನ ವಿಧಾನದ ಸೋಂಕು ಇಲ್ಲದ ಕೆಲವರು ಸಾಹಿತಿಗಳು ಅಧ್ಯಾತ್ಮ ಜೀವಿಗಳನ್ನು ಇಂದಿನ ಮತ್ತು ಹಿಂದೆ ಆಗಿ ಹೋದವರನ್ನು ಸಹ, ಸದಾ ಅಪಹಾಸ್ಯ ಮಾಡುತ್ತಲಿರುತ್ತಾರೆ. ತಮ್ಮ ಸೀಮಿತ ಜ್ಞಾನದ ಎಲ್ಲೆ ದಾಟಿ ಎಲ್ಲ ರಂಗಗಳ ಜನರನ್ನೂ ಅಹಂ ಭಾವದಿಂದ ವಿಮರ್ಶಿಸ ಹೋಗುತ್ತಾರೆ. ತಾವು ಒಂದು ಕೈಯಲ್ಲಿ ಸಿಗರೇಟು ಇನ್ನೊಂದು ಕೈಯಲ್ಲಿ ಮದಿರಾ ಬಟ್ಟಲು ಹಿಡಿದು ಸ್ಫೂರ್ತಿ ಪಡೆದು ಸಾಹಿತ್ಯ ರಚಿಸುವಂತೆ 12ನೆಯ ಶತಮಾನದ ಶರಣರನ್ನು ಚಿತ್ರಿಸುತ್ತಾರೆ. ನೈತಿಕ, ಆಧ್ಯಾತ್ಮಿಕ ಎಲ್ಲ ಮೌಲ್ಯಗಳ ಚೌಕಟ್ಟಿನಿಂದ ಹೊರಬಿದ್ದು ವಿಲಕ್ಷಣ ವಾದಗಳನ್ನು ಮಂಡಿಸುತ್ತಾರೆ. ಇದಕ್ಕೆ ಇವತ್ತು ಜ್ವಲಂತ ಸಾಕ್ಷಿಯಾಗಿ ನಿಂತಿದೆ ಬಂಜಗೆರೆಯ ಪುಸ್ತಕ.

ಗುರು ಬಸವಣ್ಣನವರು ಮಾದಾರರಾಗಬೇಕಾದರೆ ಏನು ತಂದೆ ಮಾದಿರಾಜ ಮಾದರ ಹೆಣ್ಣಿನೊಡನೆ ಸಂಬಂಧ ಬೆಳಸಿದನೆ? ಅಥವಾ ತಾಯಿ ಮಾದಲಾಂಬಿಕೆ ಹಾದರ ಮಾಡಿದಳೆ? ಬಂಜಗೆರೆ ಎಂಥಾ ಪಾಪಿ! ಗುರು ಬಸವಣ್ಣ, ಅಕ್ಕನಾಗಲಾಂಬಿಕೆ ಅಕ್ರಮ ಸಂತಾನವಾಗಿ ಬಿಟ್ಟದ್ದಾರೆ, ಈ ಪಾಪಿಯ ಲೇಖನಿ ಮನ ಬಂದಂತೆ ಹರಿದಿದೆ. ಇದನ್ನು ಸಮರ್ಥಿಸಿ, ಪ್ರೋತ್ಸಾಹಿಸಲು ಸಚಿವ ಎಂ.ಪಿ.ಪ್ರಕಾಶ್ ಗೃಹ ಸಚಿವರಾಗಿ (ಶಸ್ತ್ರಾಸ್ತ್ರಗಳೊಡನೆ) ಸಿದ್ದರಾಗಿದ್ದಾರೆ.

ಹೇಡಿ ಲಿಂಗಾಯತ ಸಮಾಜ

850 ವರ್ಷಗಳ ಕಾಲ ಲಿಂಗಾಯತರು ಕೊಟ್ಟ ಕಾಣಿಕೆಯಿಂದ ಬೆಳೆದು ಕೊಬ್ಬಿರುವ ಲಿಂಗಾಯತ ಮಠಗಳ ಮಠಾಧೀಶರು ವಹಿಸಿರುವ ಮೌನವನ್ನು ನೋಡಿದರೆ ನನಗೆ ನಾಚಿಕೆ

ಬರುತ್ತದೆ. ಬಸವಣ್ಣನವರ ಲಿಂಗಾಯತ ಧರ್ಮಾನುಯಾಯಿಯಾದದ್ದಕ್ಕೆ ಅಭಿಮಾನವೆನಿಸಿದರೂ, ಅಭಿಮಾನ ಶೂನ್ಯ, ಛಲರಹಿತ ಸಮಾಜ ಕಂಡು ಇಂಥಲ್ಲಿ ಏಕಾದರೂ ಹುಟ್ಟಿದೆವೋ ಅನ್ನಿಸುತ್ತದೆ. ಬೇರೆ ಯಾರೋ ಬರೆದ ಒಂದು ಲೇಖನದಲ್ಲಿ ಮೊಹಮ್ಮದ್ ಹೆಸರಿಗೆ ಒಂದು ಅಪಶಬ್ದ ಇದ್ದುದಕ್ಕೆ ಮುಸ್ಲಿಂ ಬಂಧುಗಳು ಎಷ್ಟು ತೀವ್ರವಾಗಿ ಪ್ರತಿಭಟಿಸಿದರು. ಗುರು ಗೋವಿಂದ ಸಿಂಗರಂತೆ ವೇಷ ಧರಿಸಿ ಓರ್ವ ವ್ಯಕ್ತಿ ಪೋಸ್ ಕೊಟ್ಟಿದ್ದಕ್ಕಾಗಿ ಸಿಖ್ಖರು ಹೇಗೆ ಪ್ರತಿಭಟಿಸಿದರು. ಏಸುವಿನ ಬಗ್ಗೆ ಒಂದು ಕಾಲ್ಪನಿಕ ಕೆಟ್ಟ ಸಿನಿಮಾವನ್ನು ಓರ್ವ ತೆಗೆದಾಗ ಅದನ್ನು ದೇಶದೊಳಕ್ಕೆ ಬರದಂತೆ ಹಲವಾರು ದೇಶಗಳವರು, ಭಾರತ ಸರಕಾರ ಸಹ ನಿರ್ಬಂಧಿಸಿತು. ಆಗ ಕ್ರೈಸ್ತರು ತಮ್ಮ ಎಲ್ಲ ಒಳಪಂಥಗಳ ಭೇದ ಮರೆತು ಒಟ್ಟಾಗಿ ಪ್ರತಿಭಟಿಸಿ, ಪ್ರದರ್ಶನ ನಡೆಸಿದರು. ಧರ್ಮಕಾರಣದಲ್ಲಿ ಮೂರು ನಾಲ್ಕು ಪ್ರಮಾದಕರ ಅಂಶಗಳಿದ್ದರೆ ಬಂಜಗೆರೆ ಪುಸ್ತಕದಲ್ಲಿ ಮೈಯೆಲ್ಲ ವಿಷ. ಇಂಥದನ್ನು ಪ್ರತಿಭಟಿಸಿದರೆ ಶ್ರೀ ದಯಾನಂದ ಸ್ವಾಮಿಗಳು ಗೂಂಡಾ ಅಂತೆ, ಸ್ವಾಮಿಗಳ ವೇಷದಲ್ಲಿ ಬಂದ ಗೂಂಡಾ ಅಂತೆ. ಸಾಹಿತಿಗಳು ಅಂದರೆ ಯಾರನ್ನು ಬೇಕಾದರೂ ನಿಂದಿಸಲು, ಬಾಯಿಗೆ ಬಂದಂತೆ ಬರೆಯಲು ಅಧಿಕಾರ ಪತ್ರ ಹೊಂದಿದವರೆ?

ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಯಾರು ಏನು ಬೇಕಾದರೂ ಮಾಡುವುದು, ಬರೆಯುವುದು ಸಾಧ್ಯವಿದ್ದಿದ್ದರೆ ಸಂವಿಧಾನದಲ್ಲಿ, ಕಾನೂನಿನಲ್ಲಿ ಮಾನನಷ್ಟ ಮೊಕದ್ದಮೆಯ ಕಾಲಂ ಏಕೆ ಇರುತ್ತಿತ್ತು? ಜೀವಂತ ಇರುವವರೇನೋ ತಮಗೆ ಮಾನಹಾನಿಯಾಯಿತು ಎಂದು ನ್ಯಾಯಾಲಯದ ಕಟ್ಟೆ ಹತ್ತಬಹುದು. ಹಿಂದೆ ಆಗಿ ಹೋದ ಮಹಾನುಭಾವರ ಚಾರಿತ್ರ್ಯ ದಹನವಾದಾಗ ಸತ್ತವರು ಎದ್ದು ಬರಬೇಕೆ? ಅವರ ಅನುಯಾಯಿಗಳು ತಾನೇ ತಮ್ಮ ಶ್ರದ್ಧಾಕೇಂದ್ರವಾದವರ ಬಗ್ಗೆ ಹೋರಾಡಬೇಕು? ಚಂಪಾ, ಬಂಜಗೆರೆ, ಬರಗೂರರಂತಹವರು ಶ್ರೀ ದಯಾನಂದ ಸ್ವಾಮಿಗಳ ಪ್ರತಿಭಟನೆಯನ್ನು ಗೂಂಡಾಗಿರಿ ಎಂದು ಪ್ರಲಾಪ ಮಾಡಬಹುದು. ಸ್ವಾಭಿಮಾನದ ಸಾತ್ವಿಕ ಹೋರಾಟಕ್ಕೂ ಗೂಂಡಾ ಗಿರಿಗೂ ಅಜಗಜಾಂತರ ವ್ಯತ್ಯಾಸವಿದೆ. ಸಾತ್ವಿಕ ಮತ್ತು ತತ್ವಬದ್ಧ ಹೋರಾಟವನ್ನೇ ಆಧುನಿಕ ಸಾಹಿತಿಗಳು ಗೂಂಡಾಗಿರಿ ಎನ್ನುವುದಾದರೆ ಬಂಡಾಯಗಾರರಾದ 12ನೆಯ ಶತಮಾನದ ವೀರಗಣಾಚಾರಿ ಮಡಿವಾಳ ಮಾಚಿದೇವರು, ತತ್ವ ನಿಷ್ಠುರಿ ಅಂಬಿಗರ ಚೌಡಯ್ಯ, ಗುಡ್ಡಾಪುರ ದಾನಮ್ಮ, ಪತಿ ಗಣಾಚಾರದ ಸೋಮನಾಥ ಮುಂತಾದವರನ್ನು ಗೂಂಡಾಗಳ ಸಾಲಿಗೆ ಸೇರಿಸಬೇಕಾದೀತು ?

ಸಂಘಟನಾತ್ಮಕ ಸಂಯುಕ ಹೋರಾಟ

ಪ್ರತಿಯೊಂದು ವಿಷಯದಲ್ಲೂ ಭಿನ್ನಾಭಿಪ್ರಾಯ ಹೊಂದಿರುವ ಹಲವಾರು ಸಂಘ ಸಂಸ್ಥೆ, ಒಳಗುಂಪು, ವಿವಿಧ ಮಠಾಧೀಶರ ಹಿಂಬಾಲಕರಿಂದ, ವೈಯಕ್ತಿಕ ಹಿತಾಸಕ್ತಿಯ ಸಮಯ ಸಾಧಕರಿಂದಾಗಿ ಲಿಂಗಾಯತ ಸಮಾಜದಲ್ಲಿ ಒಗ್ಗಟ್ಟು ಉಂಟಾಗುತ್ತಿಲ್ಲ, ಧ್ವನಿ ಗಟ್ಟಿಯಾಗಿ ಒಂದಾಗಿ ಕೇಳುತ್ತಿಲ್ಲ. ಒಂದು ವೇಳೆ ಸಿಖ್ ಸಮಾಜದಲ್ಲಿ ಅಥವಾ ಮುಸ್ಲಿಂ ಸಮಾಜದಲ್ಲಿ ಅವರ ಸಂತರ ಚಾರಿತ್ರ್ಯ ಹನನ ಮಾಡುವಂತಹ ಕೃತಿಯನ್ನು ಎಂ.ಪಿ.ಪ್ರಕಾಶ್ ಸಮರ್ಥಿಸಿಕೊಂಡಂತೆ, ಸಮರ್ಥಿಸಿಕೊಂಡಿದ್ದರೆ ಅಂಥವರು ಸಾಮಾಜಿಕ / ಧಾರ್ಮಿಕ ಬಹಿಷ್ಕಾರಕ್ಕೆ ಒಳಗಾಗುತ್ತಿದ್ದರಲ್ಲದೆ ಸ್ವರ್ಣ ಮಂದಿರದ ಬಳಿ ನೆಲ ತೊಳೆದು ಬೂಟ್ ಪಾಲಿಷ್ ಮಾಡಬೇಕಾಗುತ್ತಿತ್ತು.

ತಿರುಪತಿಯಲ್ಲಿ ಮತಾಂತರ ಕಾರ್ಯ ನಡೆಯುತ್ತಿರುವ ಬಗ್ಗೆ ಒಬ್ಬರೇ ಒಬ್ಬ ಪೂಜ್ಯ ಪೇಜಾವರ ಮಠಾಧೀಶರು ಧೈರ್ಯವಾಗಿ ಧ್ವನಿ ಎತ್ತಿದರು, ಹೋರಾಡಿದರು. ನಿಜಕ್ಕೂ ಅವರನ್ನು ಮೆಚ್ಚಬೇಕು. ಅದಕ್ಕೆ ಫಲ ಸಿಕ್ಕಿತು. ಆಂಧ್ರ ಪ್ರದೇಶದಲ್ಲಿರುವ ದೇವಾಲಯಗಳ ಸುತ್ತ ಮತಾಂತರವನ್ನು ಕ್ರೈಸ್ತ ಮುಖ್ಯ ಮಂತ್ರಿಗಳು ನಿಷೇಧಿಸಿದ್ದಾರೆ. ಬ್ರಾಹ್ಮಣ ಮಠಾಧೀಶರಲ್ಲಿ ಎಷ್ಟೇ ಒಳ ಭೇದಗಳಿದ್ದರೂ ಧರ್ಮ ರಕ್ಷಣೆಯ ವಿಷಯದಲ್ಲಿ ಅವರು ಪರಸ್ಪರ ತೊಡರುಗಾಲು ಕೊಡುವುದಿಲ್ಲ. ಒಳ ಪಿತೂರಿ ಮಾಡಿ ಹೋರಾಟಕ್ಕೆ ಆತಂಕ ಉಂಟು ಮಾಡುವುದಿಲ್ಲ. ನಮ್ಮ ಸಮಾಜದಲ್ಲಿ ತದ್ವಿರುದ್ಧ. ಹೊರಗಿನವರಲ್ಲ ನಮಗೆ ಒಳಗಿನವರೇ ಶತ್ರುಗಳು. ಅದಕ್ಕಾಗಿಯೇ ಈ ಸಲ ನಾನು ಕಲ್ಯಾಣ ಕಿರಣದಲ್ಲಿ ಬರೆದು ಕುಳಿತಿದ್ದೇನೆ. ಚಳುವಳಿಗೆ ಧುಮುಕಿಲ್ಲ.

ಈಗ ವಿಶ್ವಬಸವ ಧರ್ಮ ಟ್ರಸ್ಟ್‌ದ ಸದಸ್ಯರಾದ ಡಾ|| ದೇ. ಜವರೇಗೌಡರು ರಾಜಶೇಖರ್ ಚಂದನ ಗೌಡರು, ವಿ.ಟಿ.ರಾಯರೆಡ್ಡಿ, ಡಾ|| ಚಂದ್ರಶೇಖರ್ ಮುಂತಾದವರು, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಭೀಮಣ್ಣ ಖಂಡ್ರೆಯವರು, ನಾಡೋಜ ಪಾಟೀಲ್ ಪುಟ್ಟಪ್ಪನವರು ಬಂಜಗೆರೆಯ ಪುಸ್ತಕವನ್ನು ಮುಟ್ಟಗೋಲು ಹಾಕಿಕೊಳ್ಳಬೇಕೆಂದು ಧ್ವನಿ ಎತ್ತಿ ರಣ ಕಹಳೆ ಊದಿದ್ದಾರೆ. ಇದಕ್ಕೆ ನಮ್ಮ ರಾಷ್ಟ್ರೀಯ ಬಸವ ದಳದ ಪೂರ್ಣ ಬೆಂಬಲವಿರುತ್ತದೆ. ಶಾಂತಿ ಕಾಲದಲ್ಲಿ ಸಂಘ-ಸಂಸ್ಥೆಗಳು ಪ್ರತ್ಯೇಕವಾಗಿ ತಮ್ಮ ಧ್ಯೇಯೋದ್ದೇಶಕ್ಕೆ ತಕ್ಕಂತೆ ಕೆಲಸ ಮಾಡುತ್ತಿರಲಿ. ಆದರೆ ಇಂಥ ಯುದ್ಧ ಕಾಲದಲ್ಲಾದರೂ ಒಟ್ಟಾಗಿ ಕೆಲಸ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಸಾಹಿತ್ಯಕ್ಕೂ ಮಿಗಿಲಾದುದು ಧರ್ಮ. ಡಾ|| ಪಾಟೀಲ್ ಪುಟ್ಟಪ್ಪನವರು, ಚನ್ನವೀರ ಕಣವಿಯವರು ಮುಂದೆ ಬಂದು ಖಂಡಿಸಿದುದು ಅಭಿನಂದನಾರ್ಹ.

ಲಿಂಗಾಯತ ಧರ್ಮದ ಪುನರುತ್ಥಾನಕ್ಕೆ,ಬಸವ ತತ್ವ ಪ್ರತಿಷ್ಠಾಪನೆಗೆ ಶತ್ರು ಸೈನ್ಯದ ಚಕ್ರವ್ಯೂಹದಲ್ಲೇ ನುಗ್ಗಿದ ಅಭಿಮನ್ಯುವಿನಂತಹ, ಮಡಿವಾಳ ಮಾಚಿದೇವರಂತಹ ಗಣಾಚಾರಿಗಳು ಬೇಕು. ಅಂತಹ ದಿಟ್ಟತನ ಪ್ರದರ್ಶಿಸಿದ ಶ್ರೀ ದಯಾನಂದ ಸ್ವಾಮಿಯವರನ್ನು ಅಭಿನಂದಿಸೋಣ.

ಗಣಾಚಾರ ಎಂದರೆ ಕ್ರೌರ್ಯವಲ್ಲ ಧೈರ್ಯ. ಇದು ಆಕ್ರಮಣಕ್ಕಾಗಿ ಅಲ್ಲ ಆತ್ಮ ರಕ್ಷಣೆಗೆ ಮಾತ್ರ. ಲಿಂಗಾಯತ ಸಮಾಜಕ್ಕೆ ಗಣಾಚಾರ ತ್ವರಿತವಾಗಿ ಬೇಕಾಗಿದೆ.

ಬಸವ ಪಂಚಮಿ ನಿಮಿತ್ತ ವಿವಿಧ ಸ್ಪರ್ಧೆಗಳು

೧) *ವಚನ ದುಂದುಭಿ* – ವಚನ ಸಾಹಿತ್ಯಾಧಾರಿತ ಪ್ರಶ್ನೋತ್ತರ ಸ್ಪರ್ಧೆ(ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರಿಗೂ ಭಾಗವಹಿಸಲು ಅವಕಾಶಗಳಿದೆ. ವಚನ ಸಾಹಿತ್ಯ ಹಾಗು ಲಿಂಗಾಯತ ಧರ್ಮದ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗುವುದು ಅತಿ ಹೆಚ್ಚು ಪ್ರಶ್ನೆಗಳಿಗೆ ಉತ್ತರ ಹೇಳಿದ ಮೂವರಿಗೆ ಬಹುಮಾನ ನೀಡಲಾಗುವುದು. ಪ್ರಶ್ನೋತ್ತರಗಳಿಗಾಗಿ ಸುಯಿಧಾನ ಸುಗ್ರಂಥ ಮಾಲೆಯಿಂದ ಪ್ರಕಟವಾದ ವಚನ ದುಂದುಭಿ ಎನ್ನುವ ಪುಸ್ತಕವನ್ನು ನೋಡಬಹುದು)

ಸ್ಪರ್ಧೆಯ ದಿನಾಂಕ : ೧೧. ೦೮. ೨೦೦೭ ಸಮಯ: ೫-೦೦ ಗಂಟೆ

ಪ್ರಥಮ ಬಹುಮಾನ – ೫೦೦/
ದ್ವಿತೀಯ ಬಹುಮಾನ – ೩೦೦/
ತೃತೀಯ ಬಹುಮಾನ – ೨೦೦/

೨) *ಭಾಷಣ ಸ್ಪರ್ಧೆ*– ದಿನಾಂಕ ೧೨. ೦೮. ೨೦೦೭, ಸಮಯ ೩-೦೦ ಗಂಟೆ

ವಿಷಯಗಳು:
೧) ಲಿಂಗಾಯತ ಧರ್ಮದ ಪುನರುತ್ಥಾನದಲ್ಲಿ ಬಸವ ಧರ್ಮ ಪೀಠದ ಸಾಧನೆಗಳು
೨) ಅಲ್ಲಮ ಪ್ರಭುದೇವರ ವಚನಗಳಲ್ಲಿ ಇಷ್ಟಲಿಂಗ ಯೋಗ.
೩) ದಲಿತೋದ್ಧಾರಕ್ಕಾಗಿ ಗುರುಬಸವಣ್ಣನವರ ಹೃದಯ ಮಿಡಿತ

೩) *ಲೇಖನ ಸ್ಪರ್ಧೆ*– ದಿನಾಂಕ ೧೨. ೦೮. ೨೦೦೭, ಸಮಯ ಸಂಜೆ ೫-೦೦ ಗಂಟೆ

ವಿಷಯ: ಬಸವ ಭಕ್ತರ ಸಂಘಟನೆಯಲ್ಲಿ ಶರಣ ಮೇಳ ನಡೆದು ಬಂದ ದಾರಿ

ಎಲ್ಲಾ ಸ್ಪರ್ಧೆಗಳು ನಡೆಯುವ ಸ್ಥಳ : ಬಸವ ಮಂಟಪ, ಬೆಂಗಳೂರು

ಸಂಯೋಜನೆ: ಶರಣ. ಸಚ್ಚಿದಾನಂದ, ರಾ.ಬ.ದಳ, ಬೆಂಗಳೂರು

ವಚನ ದುಂದುಭಿ -4

ನಿರ್ವಹಣ - ಸಚ್ಚಿದಾನಂದ

ಕಲ್ಯಾಣ ಕಿರಣದಲ್ಲಿ ವಚನ ದುಂದುಭಿ ಎನ್ನುವ ಅಂಕಣವೊಂದನ್ನು ಪ್ರಾರಂಭಿಸಲಾಗಿದ್ದು, ಇದು ಇನ್ನು ಮುಂದೆ ಪ್ರತಿ ತಿಂಗಳೂ ಪ್ರಕಟಗೊಳ್ಳುವುದು. ಇದರಲ್ಲಿ ಪ್ರತಿ ತಿಂಗಳು 20/25 ಪ್ರಶ್ನೆಗಳು ಪ್ರಕಟವಾಗುತ್ತದೆ. ಪ್ರತಿ ವರ್ಷ ಕಲ್ಯಾಣ ಪರ್ವ ಮತ್ತು ಶರಣ ಮೇಳದಲ್ಲಿ ನಡೆಯುವ ಧಾರ್ಮಿಕ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಈ ಅಂಕಣದಲ್ಲಿ ಪ್ರಕಟವಾದ ಪ್ರಶ್ನೆಗಳನ್ನು ಕೇಳಲಾಗುವುದು. ಮತ್ತು ಈ ಪ್ರಶ್ನೆಗಳಿಗೆ ಸರಿ ಉತ್ತರಗಳನ್ನು ತಾವು ಅಂಚೆ ಕಾರ್ಡ್‌ನಲ್ಲಿ ಬರೆದು, ವಚನ ದುಂದುಭಿ ವಿಭಾಗ ಎಂದು ಕಾಣಿಸಿ ಕಲ್ಯಾಣ ಕಿರಣ ಕಾರ್ಯಾಲಯಕ್ಕೆ ಕಳುಹಿಸಬೇಕು. ಸರಿಯುತ್ತರ ಕೊಟ್ಟವರ ಹೆಸರುಗಳನು ಕಲ್ಯಾಣ ಕಿರಣ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಶ್ನೆಗಳು

1. ಬಸವಣ್ಣನವರು ಯಾರ ಮನೆಯಲ್ಲಿ ಪ್ರಸಾದ ಮಾಡಿದ್ದಕ್ಕೆ ಬಿಜ್ಜಳನಿಗೆ ಚಾಡಿ ಹೇಳಿದರು ?
2. ತಮ್ಮ ಸಂಚಾರ ಮಧ್ಯದಲ್ಲಿ ಪ್ರಭುದೇವರಿಂದ ಉಪದೇಶ ಪಡೆದ ಮೊದಲ ವ್ಯಕ್ತಿ ಯಾರು ?
3. ಅಕ್ಕಮಹಾದೇವಿ ತಾಯಿಯವರಿಗೆ ಯಾವುದು ಒಳಗುಂದದ ಅರಿಶಿನ ?
4. ಮೋದಾರ ಕೇತಯ್ಯನವರು ಯಾವ ಕಾಯಕ ಮಾಡುತ್ತಿದ್ದರು ?
5. ಆಂಧ್ರದಿಂದ ಅನುಭವ ಮಂಟಪಕ್ಕೆ ಬಂದು ವಚನ ರಚಿಸಿದ ಶರಣ ಯಾರು ?
6. ಹರಳಯ್ಯನ ಚಿಲುಮೆ ಎಲ್ಲಿದೆ ?
7. ತತ್ವ ನಿಷ್ಠುರಿ ಎನ್ನುವ ನಾಮ ಯಾರಿಗೆ ಅನ್ವಯಿಸುತ್ತದೆ ?
8. ಅನುಭವ ಮಂಟಪಕ್ಕೆ ಕಳಿಂಗ ದೇಶದಿಂದ ಬಂದ ಶರಣ ಯಾರು ?
9. ಅನುಭವ ಮಂಟಪದ ಬಾಗಿಲಲ್ಲಿ ನಿಂತು ಸ್ವಾಗತ ಮಾಡುತ್ತಿದ್ದ ಶರಣ ಯಾರು ?
10. ದೀಪಾವಳಿ ಹಬ್ಬದಂದು ಲಿಂಗಾಯತ ಧರ್ಮೀಯರ ವಿಶೇಷತೆ ?
11. ವಿಶುದ್ಧಿ ಚಕ್ರ ಎಲ್ಲಿರುತ್ತದೆ ?
12. ಅಕ್ಕನನ್ನು ಅನುಭವ ಮಂಟಪದಲ್ಲಿ ಪ್ರಭುದೇವರು ಪರೀಕ್ಷಿಸಲು ಕಾರಣವೇನು ?
13. ಮಹಾಮನೆಯಲ್ಲಿ ವೈದ್ಯರಾಗಿದ್ದ ಶರಣರ ಹೆಸರೇನು ?
14. ಕಾಡ ಸಿದ್ದೇಶ್ವರರ ಗದ್ದುಗೆ ಎಲ್ಲಿದೆ ?
15. ಅಮುಗೆ ರಾಯಮ್ಮ ಶರಣೆಯ ವಚನಾಂಕಿತವೇನು ?
16. ಅನುಭವ ಮಂಟಪಕ್ಕೆ ಹೋಗಲು ಯಾವ ನಿಬಂಧನೆಗಳಿದ್ದವು ?
17. ಬಹಿರಂಗದ ಅಷ್ಟಾವರಣಗಳು ಯಾವುವು ?
18. ಮಾಡಿ ನೀಡಿ ಹೋದಹೆನೆಂಬಾಗ ಕೈಲಾಸವೇನು ಕೈ ಕೂಲಿಯೇ ? ಎಂದು ಯಾರು ಯಾರಿಗೆ ಹೇಳಿದರು ?
19. ಲಮಾಣಿ ಜನಾಂಗದಿಂದ ಬಂದ ಶರಣ ಯಾರು ?
20. ಗಟ್ಟಿ ತುಪ್ಪ ತಿಳಿದುಪ್ಪಕ್ಕೆ ಹಂಗುಂಟೇ ಅಯ್ಯಾ....? ಅಂಗಕ್ಕೆ ಆತ್ಮಂಗೆ ಭಿನ್ನ ಉಂಟೇ ಅಯ್ಯಾ? ಎಂದು ಯಾರು ಯಾರಿಗೆ ಹೇಳಿದರು?
21. ಲಿಂಗಾಯತರಿಗೆ ಹುಟ್ಟಿದ ಮಕ್ಕಳೆಲ್ಲರೂ ಲಿಂಗಾಯತರೇ?
22. ಭಕ್ತನು ಜೀವಂತವಾಗಿ ಇರುವಾಗಲೇ ಮಾಡುವ ಕೊನೆಯ ಸಂಸ್ಕಾರ ಯಾವುದು ?
23. ಬಳ್ಳೇಶ ಮಲ್ಲಯ್ಯ ಇವರ ವಚನಾಂಕಿತವೇನು ?
24. ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗ ಇದು ಯಾರ ವಚನಾಂಕಿತ ?
25. ಕನ್ನಡಿ ಕಾಯಕದ ರೇಚಮ್ಮ ಶರಣೆಯ ವಚನಾಂಕಿತವೇನು ?

ದಯವಿಟ್ಟು ಉತ್ತರಗಳನ್ನು 5ನೆಯ ತಾರೀಖಿನೊಳಗೆ ಕಲ್ಯಾಣ ಕಿರಣ ಕಾರ್ಯಾಲಯಕ್ಕೆ ಕಳಿಸಬೇಕು.

ವಚನ ದುಂದುಭಿ-3ರ ಸರಿ ಉತ್ತರಗಳು

1. 36 ವರ್ಷಗಳ ಕಾಲ
2. ಗುರು ಬಸವಣ್ಣನವರನ್ನು
3. ಬಸವ ಕಲ್ಯಾಣ
4. ಶರಣರ ಪಾದವೇ ತೊಂಡಿಲು ಬಾಸಿಂಗ
5. ನುಲಿಯ ಚಂದಯ್ಯ ಶರಣರಿಗೆ ಸಂಬಂಧಿಸಿದ್ದು
6. ತುರುಗಾಹಿ ರಾಮಣ್ಣ
7. ರಾಜನರ್ತಕಿ ಮಾಯಿದೇವಿ
8. ಸೃಷ್ಟಿಕರ್ತ ಲಿಂಗದೇವರು ಗುರುಬಸವಣ್ಣನವರಿಗೆ
9. ಅಲ್ಲಮ ಪ್ರಭುದೇವರು ಸಿದ್ಧರಾಮೇಶ್ವರರಿಗೆ
10. ಸದಾಶಿವ ಮೂರ್ತಿಲಿಂಗ
11. ಕೃಷ್ಣಾ ನದಿಯ ದಕ್ಷಿಣ ಭಾಗಕ್ಕೆ ಜನರು ಸೇರುತ್ತಾರೆ ಎಂದು ಅರ್ಥ
12. ಸ್ವರ ವಚನಗಳು
13. ಬಸವ ಕಲ್ಯಾಣಕ್ಕೆ ಬರುವಾಗ ದೇವವಿರಹಿಯಾಗಿ ಹಾಡಿದ್ದಾರೆ
14. ಹರಿಹರ ಮಹಾಕವಿ
15. ಪರಮ ಪೂಜ್ಯ ಮಾತಾಜಿ
16. ಧರ್ಮಗುರು ಬಸವಣ್ಣನವರು
17. ಸರ್ವಜ್ಞ
18. ಕೋಲ ತುದಿಯ ಕೋಡಗನಂತೆ ನೇಣ ತುದಿಯ ಬೊಂಬೆಯಂತೆ ಎನ್ನುವ ವಚನದಲ್ಲಿ
19. ಇಷ್ಟಲಿಂಗ ಯೋಗ ನಿರತ ಅನಿಮಿಷ ಯೋಗಿಯನ್ನು ನೋಡಿ
20. ಅ,ಉ,ಮ
21. ಮಡಿವಾಳ ಮಾಚಿದೇವರು, ಅಕ್ಕನಾಗಲಾಂಬಿಕೆ, ಚನ್ನಬಸವಣ್ಣನವರು
22. ಜಗದೇವ ಮಲ್ಲಣ್ಣ ಬೊಮ್ಮಣ್ಣನವರು
23. ಕರ್ಮಕಾಂಡ, ಭಕ್ತಿ ಕಾಂಡ, ಜ್ಞಾನ ಕಾಂಡ
24. ಜ್ಞಾನದ ಉತ್ತಮ ಮಟ್ಟಕ್ಕೆ ಏರಿದವರು
25. ಉಳವಿಯ ಮಹಾಮನೆಯ ಗವಿಯಲ್ಲಿ

ವಚನ ದುಂದುಭಿ - 3ರ ಸರಿಯುತ್ತರ ನೀಡಿದವರು

1. ಮಮತಾ ಪ್ರವೀಣ್, ಭದ್ರಾವತಿ
2. ಮಹಾದೇವ ಚನ್ನಪ್ಪ ಐಗಳಿ
3. ವಿಜಯಾ ನಂಜುಂಡಪ್ಪ, ದಾವಣಗೆರೆ
4. ಜ್ಯೋತಿ ನಾಗರಾಜು, ಚಳ್ಳಕೆರೆ
5. ಎಚ್. ಚಂದ್ರಿಕಾ, ಭದ್ರಾವತಿ
6. ಮಲ್ಲನಗೌಡ ಪಾಟೀಲ್

07. ಶಾಂತಮ್ಮ ಲಿಂಗಾಯತ್
08. ಎಸ್.ಎನ್.ನಂದರಗಿ, ಧಾರವಾಡ
09. ರತ್ನಮ್ಮ ಜಯಣ್ಣ, ಮೈಸೂರು
10. ನಿರ್ಮಲಾ ಜಯದೇವ
11. ನಾಗಮ್ಮ, ರೂಪಾ ಜಗದೀಶ್
12. ಸರ್ವಮಂಗಳಾ ಗಂಗಾಧರ್

ಶರಣ ಬಂಧುಗಳೇ, ದಯವಿಟ್ಟು ನೀವು ನಿಮ್ಮ ಮನೆಯನ್ನು ಬದಲಾಯಿಸಿದರೆ ನಿಮ್ಮ ಸರಿಯಾದ ಹೊಸ ಮತ್ತು ಹಳೆಯ ವಿಳಾಸಗಳನ್ನು ಮತ್ತು ನಿಮಗೆ ಕಲ್ಯಾಣ ಕಿರಣ ತಲುಪದೆ ಇದ್ದರೆ ಒಂದು ಪತ್ರದ ಮೂಲಕ ಕಲ್ಯಾಣ ಕಿರಣ ವಿಭಾಗಕ್ಕೆ ತಿಳಿಸಬೇಕಾಗಿ ವಿನಂತಿ.

ಸಮಸ್ಯೆ..? - ಸಮಾಧಾನ..!

ಶರಣೆ ಸರೋಜಮ್ಮ ನಾಗರಾಜು, ರಾ.ಬ.ದಳ, ಮೈಸೂರು.

?ಧರ್ಮಪಿತ ಬಸವಣ್ಣನವರ ಒಂದು ವಚನದಲ್ಲಿ, ''ಅಯ್ಯಾ ಹಿಂದೆ ಆನು ಮಾಡಿದ ಮರಹಿಂದ ಬಂದೆನು ಈ ಭವದಲ್ಲಿ'' ಎನ್ನುತ್ತಾರೆ. ಮತ್ತೆರಡು ವಚನಗಳಲ್ಲಿ, ''ನಾನೊಂದು ಕಾರಣಕ್ಕೆ ಮರ್ತ್ಯಕ್ಕೆ ಬಂದೆನು.'' ''ನಾನಾ ಭವ ದುಃಖದಲ್ಲಿ ಹುಟ್ಟಿದ ಪ್ರಾಣಿಯಲ್ಲ ತಂದೆ ನಾನು'' ಎನ್ನುತ್ತಾರೆ. ಇವೆರಡೂ ಪರಸ್ಪರ ವಿರುದ್ಧ ಅಭಿಪ್ರಾಯಗಳಲ್ಲವೆ?

★ನಿಮ್ಮ ಆಲೋಚನೆ ಸರಿಯಾಗಿದೆ. ಇನ್ನೊಂದು ವಚನದಲ್ಲಿ, 'ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ.' ಬ.ವ.ದೀ-1053 ಎಂದು ಹೇಳಿದ್ದಾರೆ. ಮತ್ತು ಅಯ್ಯಾ ಹಿಂದೆ ಆನು ಮಾಡಿದ ಮರಹಿಂದೆ ಎಂಬ ವಚನದ ಮುಂದಿನ ಸಾಲುಗಳನ್ನು ನೋಡಿದರೆ ಅವೆಲ್ಲವೂ ಬಸವಣ್ಣನವರು ಮಾಡಿದ ಉದಾತ್ತ ಸಾಧನೆ, ವಿಶೇಷ ಕಾರ್ಯ, ಪವಾಡಗಳು ಕುರಿತು ಹೇಳಿವೆ. ಆದ್ದರಿಂದ ಅಲ್ಲಿ ''ಮರಹಿಂದೆ''ಎಂಬುದರ ಬದಲಿಗೆ ''ಮೆರಹಿಂದೆ'' ಎಂದಿರಬೇಕು ಎಂದು ನನ್ನ ಎಣಿಕೆ.ಅದಕ್ಕಾಗಿ ಕೆಸೆಟ್ಟಿನಲ್ಲಿ ''ಮೆರಹಿಂದೆ'' ಎಂದೇ ಧ್ವನಿ ಮುದ್ರಿಸಿದ್ದೇವೆ. ಮೆರಹು ಎಂದರೆ ಹಿರಿಮೆ, ಪುಣ್ಯ, ಸತ್ಕಾರ್ಯ ಇತ್ಯಾದಿ ಎಂದೆಲ್ಲ ಅರ್ಥ ಮಾಡಬಹುದು. ಆಗ ಬಸವಣ್ಣನವರು ಮರೆವಿನ ಸೃಷ್ಟಿಯಲ್ಲಿ ಹುಟ್ಟಿದವರಲ್ಲ ಅರಿವಿನ ಸೃಷ್ಟಿಯಲ್ಲಿ ಹುಟ್ಟಿದವರು ಎಂದು ಮನವರಿಕೆಯಾಗುವುದು.

2.'ಅಟ್ಟಿದಡೆ' ಎಂಬ ಪದದಲ್ಲಿ ಒಂದು ರೀತಿಯಲ್ಲಿ ಹರಿಹರ ಹೇಳುವಂತೆ ಶಿವನ ಶಾಪದಿಂದ ಹುಟ್ಟಿದವರು ಎಂಬ ಭಾವ ಬರುವುದಲ್ಲವೆ? ಭೇರೆ ಪದ ಇರಬೇಕಾಗಿತ್ತೇನೋ ಅಲ್ಲವೆ ?

★ಕಾಲಕಾಲಕ್ಕೆ ಪದಗಳ ಬಳಕೆಯಲ್ಲಿ ಬದಲಾವಣೆ ಆಗುತಿರುತ್ತದೆ. 12 ಶತಮಾನದಲ್ಲಿ ಗಂಡು ಮಗುವಿಗೆ ಕುನ್ನಿ ಎಂದು, ಹೆಣ್ಣು ಮಗುವಿಗೆ ಕೂಸು ಎಂದು ಬಳಸಲಾಗುತ್ತಿತ್ತು. (ನಮ್ಮ ಕುನ್ನಿಗೆ ಕೂಸ ಕೊಡಬೇಡ.) ಕೋಲು ಎಂಬುದಕ್ಕೆ ದಡಿ ಎನ್ನಲಾಗುತಿತ್ತು. ಈಗ ಆ ರೀತಿ ಬಳಕೆಯೇ ಇಲ್ಲ. ಕುನ್ನಿ ಎಂಬುದನ್ನು ನಾಯಿ ಮರಿಗೆ ಬಳಸಲಾಗುತ್ತಿದೆ''ಕಳಿಸು''ಎಂಬುದರಲ್ಲಿ ನಿಧಾನ ಗತಿ ಇದೆ. ಅಟ್ಟು ಎಂಬುದರಲ್ಲಿ ಅವಸರದಿಂದ ಕಳಿಸು ಎಂಬ ಭಾವವಿದೆ. ಮರ್ತ್ಯ ಲೋಕದಲ್ಲಿ ಮಹಾಮನೆ ಕಟ್ಟು ಅವಸರ ಇದ್ದುದರಿಂದ ಸೃಷ್ಟಿಕರ್ತನು ಧರ್ಮಪಿತ ಬಸವಣ್ಣನವರನ್ನು ತ್ವರಿತವಾಗಿ ''ಅಟ್ಟ''ದ್ದಾನೆ. ಆದ್ದರಿಂದ ಪದದೊಳಗಣ ಅಂತರಾರ್ಥ ಅರಿಯಬೇಕು, ಬೇರೆ ಹುಡುಕುವ ಅಗತ್ಯವಿಲ್ಲ.

ಸಚ್ಚಿದಾನಂದ, ಬೆಂಗಳೂರು.

? ಬಸವಾದಿ ಪ್ರಮಥರನ್ನು ಕುರಿತು ಕೀಳು ಮಟ್ಟದ ನಿಂದನಾತ್ಮಕ ಪುಸ್ತಕಗಳು ಬರುತ್ತಲೇ ಇರುತ್ತವೆ. ಅದೇ ಇಂಥ ಪುಸ್ತಕಗಳನ್ನು ಬೇರೆ ಧರ್ಮದ ಮಹಾತ್ಮರ ಬಗ್ಗೆ ಇದೇ ಸಾಹಿತಿಗಳು ಏಕೆ ಬರೆಯುವುದಿಲ್ಲ ?

★ಕುರಿಯನ್ನು ಬಲಿ ಕೊಡುತ್ತಾರೆಯೇ ವಿನಾ ಹುಲಿಯನ್ನಲ್ಲ. ಲಿಂಗಾಯತ ಸಮಾಜವು ಕುರಿಯ ಹಿಂಡಿನಂತೆ ಇರುವುದರಿಂದ ಈ ಜನರಲ್ಲಿ ಸಂಘಟನೆ, ಪ್ರತಿಭಟನಾ ಶಕ್ತಿ ಇಲ್ಲ .ಆದ್ದರಿಂದ ಬಸವಾದಿ ಪ್ರಮಥರ ನಿಂದೆ ಮಾಡಿದರೂ ಪ್ರತಿಭಟಿಸುವ ತಾಕತ್ತಾಗಲೀ, ಕಳಕಳಿಯಾಗಲಿ ಇಲ್ಲ ಎಂಬುದು ಎಲ್ಲ ಸಾಹಿತಿಗಳಿಗೆ ಗೊತ್ತಿರುವುದರಿಂದ ಶರಣರ ನಿಂದೆ ಮಾಡುತ್ತಾರೆ. ಉಳಿದ ಸಮಾಜದವರು ತಮ್ಮ ಮಹಾತ್ಮರನ್ನು ನಿಂದಿಸಿದರೆ ಅವರನ್ನು ಸುಮ್ಮನೆ ಬಿಡುವುದಿಲ್ಲ ಎಂಬುದು ಸಾಹಿತಿಗಳಿಗೆ ಗೊತ್ತು.

ಚಂದ್ರಶೇಖರ್ ಮಲ್ಲಿಕಾರ್ಜುನ್, ರಾ.ಬ.ದಳ, ಬಳ್ಳಾರಿ.

?ಗೃಹ ಸಚಿವ ಎಂ. ಪಿ. ಪ್ರಕಾಶ ಅವರು ಬಳ್ಳಾರಿಯಲ್ಲಿ ಮಾದಿಗ ಜನಾಂಗದ ಸಭೆಯಲ್ಲಿ ಮಾತನಾಡುತ್ತ ಬಂಜಗೆರೆ ಜಯ ಪ್ರಕಾಶರ ಪುಸ್ತಕ ''ಆನು ದೇವಾ ಹೊರಗಣವನು'' ಎಂಬುದನ್ನು ಸಮರ್ಥಿಸಿಕೊಂಡಿದ್ದಾರೆ. ''ಅದನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಗತ್ಯವಿಲ್ಲ. ಬಂಜಗೆರೆಯವರ ಪುಸ್ತಕದ ಬಗ್ಗೆ ಚರ್ಚೆ ನಡೆಯಲಿ. ಬಸವಣ್ಣನವರ ವಚನಾಂಕಿತ ತಿದ್ದಿದ ಮಾತೆ ಮಹಾದೇವಿ ಅವರಿಗೆ ಬಂಜಗೆರೆ ಪುಸಕ ನಿಷೇಧಿಸಲು ಕೇಳುವ ಹಕ್ಕಿಲ್ಲ'' ಎಂದು ಭಾಷಣದಲ್ಲಿ ಹೇಳಿದರು. ಸಭೆಯಲ್ಲಿ ಭಾಗವಹಿಸಿದ್ದ ನಮಗೆಲ್ಲ ಬಹಳ ನೋವಾಯಿತು.

★ನೆಗಡಿಯಾಗಿ ಮೂಗು ಕಟ್ಟಿಕೊಂಡ ವ್ಯಕ್ತಿಗೆ ಸುವಾಸನೆಯೂ ತಿಳಿಯುವುದಿಲ್ಲ ಹಾಗೆ ನಮ್ಮ ಬಗ್ಗೆ

ಪೂರ್ವಾಗ್ರಹ ಪೀಡಿತರಾದ ಎಂ. ಪಿ. ಪ್ರಕಾಶರಿಗೆ ಬಸವ ವಚನ ದೀಪ್ತಿ, ಲಿಂಗದೇವ ವಚನಾಂಕಿತದ ಸುವಾಸನೆ (ಮಹತ್ವ)ಯಾಗಲಿ, ಸಾಹಿತಿಗಳ ಬಗ್ಗೆ ವಿಶೇಷ ಅಭಿಮಾನ ವಿರುವುದರಿಂದ, ಜೊತೆಗೆ ಶರಣರ ನಿಂದನೆಯಲ್ಲಿ ಸಂತೋಷ ಪಡುವ ಪ್ರಕಾಶ್ ಅವರಿಗೆ ಬಂಜಗೆರೆ ಪುಸಕದ ದುರ್ವಾಸನೆ ಎರಡೂ ತಿಳಿಯುತ್ತಿಲ್ಲ.

ನಮಗೆ ನೈತಿಕ ಹಕ್ಕಿಲ್ಲ ಎನ್ನುವುದು ತಪ್ಪು. ಏಕೆಂದರೆ ಅತ್ಯಂತ ಮಹತ್ವಪೂರ್ಣ ಸೈದ್ಧಾಂತಿಕ ಹಿನ್ನೆಲೆಯ ''ಲಿಂಗದೇವ'' ವಚನಾಂಕಿತ ಕುರಿತು ನಾವು ಸಂವಾದ ಮಾಡಲು ಸಿದ್ಧವಿದ್ದರೂ ಯಾವುದನ್ನೂ ಕಿವಿಗೆ ಹಾಕಿಕೊಳ್ಳದೆ ಮುಟ್ಟುಗೋಲು ಹಾಕಿಕೊಂಡರು. ಧರ್ಮಗುರು ಬಸವಣ್ಣನವರ ಸಾಧನೆ ಹಾಗೂ ಸಂದೇಶಗಳಿಗಾಗಿ ಜೀವನವನ್ನು ಮುಡುಪಿಟ್ಟ ನಮ್ಮ ಸಂಶೋಧನೆಯನ್ನು ಹಿಂದೆ ಮುಂದೆ ನೋಡದೆ ಮುಟ್ಟುಗೋಲು ಹಾಕಿಕೊಂಡುದರಿಂದ ಧರ್ಮಪಿತ ಬಸವಣ್ಣನವರ ಚರಿತ್ರೆಯನ್ನು ಕಲಂಕಿತ ಗೊಳಿಸಿರುವ ಬಂಜಗೆರೆ ಪುಸ್ತಕವನ್ನು ಮುಟ್ಟುಗೋಲು ಏಕೆ ಹಾಕುತ್ತಿಲ್ಲ ಎಂದು ಕೇಳುವ ಹಕ್ಕು ನಮಗೇ ನಿಜವಾಗಿಯೂ ಇರುವುದು.

ಎಂ. ಆರ್. ದುಬಲಗುಂಡಿ, ಚಿಮ್ಮನ ಚೋಡ, ಗುಲಬರ್ಗಾ.

?ಮನೆ ದೇವರ ಕಲ್ಪನೆ ಹೇಗೆ ಬಂದಿತು ?

★ಸಾಮಾನ್ಯವಾಗಿ ಗ್ರಾಮಗಳಲ್ಲಿ ಊರ ದೈವ ಎಂದಿರುತ್ತದೆ. ಅಲ್ಲಿಯವರು ಅದಕ್ಕೆ ನಡೆದುಕೊಳ್ಳುತ್ತಾರೆ. ಅದೇ ದೈವವನ್ನೂ ತಮ್ಮ ಮನೆ ದೇವರೆಂದು ಕರೆಯುತ್ತಾರೆ. ನಂತರ ಕಾಯಕದ ಮೇಲೆ ಬೇರೆ ಬೇರೆ ಕಡೆ ಚದುರಿದರೂ ತಮ್ಮ ಮನೆದೇವರೆಂದು ತಮ್ಮೂರ ದೈವದ ಹೆಸರೇ ಹೇಳುವರು. ಲಿಂಗಾಯತ ಸಮಾಜದಲ್ಲಿ ಶರಣರ ಗದ್ದುಗೆಗಳೇ ಮನೆ ದೇವರೆಂದು ಕರೆಯಲ್ಪಡುವುದನ್ನು ಗಮನಿಸಬಹುದು. ಉದಾ : ಉಳವಿ ಚನ್ನಬಸವೇಶ್ವರ, ಮಲೆ ಮಾದೇಶ್ವರ, ತೋಂಟದ ಸಿದ್ಧಲಿಂಗೇಶ್ವರ ಇತ್ಯಾದಿ. ಗ್ರಾಮ ದೈವದ ಪೂಜೆಗಿಂತ ಶರಣರ ಆರಾಧನೆ (ಅಜ್ಞಾನಿ ಜನ ಮನೆ ದೇವರು ಎಂದು ಕರೆದರೂ) ಶ್ರೇಷ್ಠ ಎಂಬುದನ್ನೂ ನೆನಪಿಡಬೇಕು.

ಬಸವ ಪಥಿಕರು, ಕಂಪ್ಲಿ

?ನಾವು ಇಷ್ಟಲಿಂಗ ನಿಷ್ಠೆಯಿಂದ ಸಾಗುತ್ತಿದ್ದೇವೆ. ಆದರೆ ಕೆಲವರು ಹೀಗೆ ಹೇಳುತ್ತಾರೆ, ''ನಮ್ಮ ಮನೆ ದೇವರು ವೀರಭದ್ರ. ಅವನು ತುಂಬಾ ಕೋಪಿಷ್ಠ . ಪೂಜೆ ಮಾಢದಿದ್ದರೆ ಸಿಟ್ಟಾಗುತ್ತಾನೆ.'' ಅಂದು ಶರಣರು ಅನೇಕರ ಮನೆ ದೇವರುಗಳು ಇದ್ದಿರಲೇ ಬೇಕು. ಅವುಗಳ ಪೂಜೆಯನ್ನು ಅವರು ಬಿಟ್ಟು ಏಕದೇವೋಪಾಸಕರಾದರು. ಹಾಗಾದರೆ ಅವರಿಗೆಲ್ಲ ವೀರಭದ್ರ ದೇವರ ಕೋಪ ಎರಗಲಿಲ್ಲವೆ ?

★ಮನೆ ದೇವರು, ಕುಲದೇವರು, ಗ್ರಾಮ ದೈವ ಇವೆಲ್ಲ ಸಂಕುಚಿತ ಕಲ್ಪನೆಗಳು. ಎಲ್ಲಕ್ಕೂ ಮಿಗಿಲಾದುದು ಸೃಷ್ಟಿ ಕರ್ತನಾದ ಲಿಂಗದೇವನ ಪರಿಕಲ್ಪನೆ. ಅದಕ್ಕಾಗಿಯೇ ಗುರು ಬಸವಣ್ಣನವರು ಪರಮೋನ್ನತ ಶಕ್ತಿಯಾದ ಪರಮಾತ್ಮನನ್ನು ಆರಾಧಿಸಲು ಹೇಳಿದರು. ಅಂಥ ಮಹಾನ್ ಸರ್ವಶಕ್ತನಿಗೆ ಶರಣಾದ ನಾವು ಬೇರೆ ಯಾರ ಕೋಪಕ್ಕೂ ಪಾತ್ರರಾಗುವುದಿಲ್ಲ. ಅಜ್ಞಾನ ಯುಕ್ತ ಸ್ಥಿತಿಯಲ್ಲಿ ಇದ್ದಾಗ ಏನೇ ಪೂಜಿಸಿದರೂ ಬಸವ ತತ್ತ್ವವನ್ನು ಸರಿಯಾಗಿ ತಿಳಿದುಕೊಂಡ ಬಳಿಕ ಸೃಷ್ಟಿಕರ್ತನಾದ ಲಿಂಗದೇವನಿಗೆ ನಾವು ನಿಷ್ಠೆಯನ್ನು ತೋರಬೇಕು.

ಪರನಗೌಡ ಸಿಂಧನೂರು, ಗುಲಬರ್ಗಾ.

?ದಿ. 7 ಮತ್ತು 8 ಏಪ್ರಿಲ್‌ದಂದು ಕೂಡಲ ಸಂಗಮದಲ್ಲಿ ವಚನ ವೈಭವ ಎಂಬ ದೂರದರ್ಶನ ನೇರಪ್ರಸಾರ ನಡೆಯಿತು. ಅದರ ಪ್ರಚಾರದ ನಿಮಿತ್ತ ಶ್ರೀ ಅರವಿಂದ ಜತ್ತಿಯವರು ಕೆಲವು ಹೇಳಿಕೆ ನೀಡುತ್ತಿದ್ದರು. ಅದರಲ್ಲಿ ಕೆಲವು ಸಂದೇಹ ಉಂಟಾಗಿವೆ.

1. ಬಸವಾದಿ ಶರಣರು ಯಾವುದೇ ಆದೇಶ ಅಥವಾ ಉಪದೇಶ ನೀಡಿಲ್ಲ; ಅವರದು ಕೇವಲ ಮಾನವೀಕರಣದ ದೃಷ್ಟಿ.
2. ಶರಣರ ವಿಚಾರಗಳನ್ನು ಒಂದು ಧರ್ಮಕ್ಕೆ ಸಂಬಂಧಿಸಿದರೆ ಅವನ್ನು ಸಂಕುಚಿತ ಗೊಳಿಸಿದಂತೆ.

ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

★ ಶ್ರೀ ಅರವಿಂದ ಜತ್ತಿಯವರಿಗೆ ಏನೇನೋ ಭಯ; ಏನು ಮಾತನಾಡಿದರೆ ಏನು ಎಡವಟ್ಟಾಗುವುದೋ ಎಂಬ ಆತಂಕ.

ಗುರು ಬಸವಣ್ಣನವರು ಮತ್ತು ಶರಣರು ಆತ್ಮಾವಲೋಕನ ಮಾಡಿಕೊಂಡು ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೆ ತಮ್ಮನ್ನು ತಾವು ತಿದ್ದಿಕೊಳ್ಳುತ್ತ ಪರಿಪೂರ್ಣತ್ವದೆಡೆಗೆ ಸಾಗುವಾಗ ಅಭಿವ್ಯಕ್ತಗೊಳಿಸಿದ ಭಾವನೆಗಳು ಜಗತ್ತಿಗೆ ಉಪದೇಶಗಳಾಗಿವೆ. ಅವರು ನುಡಿದ ಮಾತುಗಳೇ ಉಪದೇಶಗಳು. ಪರಿಪೂರ್ಣತ್ವ ಸಾಧಿಸಿದ ಬಳಿಕ ತಮ್ಮ ಸುತ್ತಲಿನ ಸಮಾಜವನ್ನು ತಿದ್ದಲಿಕ್ಕೆ ಅಧಿಕಾರವಾಣಿಯಿಂದ ಹೇಳುವ ಮಾತುಗಳೇ ಆದೇಶಗಳು ಅರ್ಥಾತ್ ಆಜ್ಞೆಗಳು.

ಉದಾಹರಣೆಗೆ :

ನೋಡಿ ನೋಡಿ ಮಾಡುವ ನೇಮ ಸಲ್ಲವು ಸಲ್ಲವು
ತನು ಉದ್ದೇಶವಾಗಿ ಮಾಡುವ ನೇಮ ಸಲ್ಲವು ಸಲ್ಲವು
ಮನ ಉದ್ದೇಶವಾಗಿ ಮಾಡುವ ನೇಮ ಸಲ್ಲವು ಸಲ್ಲವು
ಗುರು ಪಥವ ಮೀರಿ ಮಾಡುವ ನೇಮ ಸಲ್ಲವು ಸಲ್ಲವು
ಲಿಂಗದೇವಾ, ನಿಮ್ಮ ನಿಜದೊಳಗೆ ನಿಲ್ಲವು ನಿಲ್ಲವು.

ಗುರು ಬಸವಣ್ಣನವರು ಸ್ಪಷ್ಟವಾಗಿ ಆದೇಶವನ್ನು ಇಲ್ಲಿ ನೀಡಿದ್ದಾರೆ.

1.ಕಳ ಬೇಡ 2. ಕೊಲ ಬೇಡ 3.ಹುಸಿಯ ನುಡಿಯಲು ಬೇಡ
4.ಮುನಿಯ ಬೇಡ 5.ಅನ್ಯರಿಗೆ ಅಸಹ್ಯ ಪಡಬೇಡ 6. ತನ್ನ ಬಣ್ಣಿಸಬೇಡ
7. ಇದಿರ ಹಳಿಯಲು ಬೇಡ 8. ಇದೇ ಅಂತರಂಗ ಶುದ್ಧಿ 9.ಇದೇ ಬಹಿರಂಗ ಶುದ್ಧಿ
10.ಇದೇ ನಮ್ಮ ಲಿಂಗದೇವರ ಒಲಿಸುವ ಪರಿ

3.? ಇನ್ನೊಂದು ಹೇಳಿಕೆ ಗುರು ಬಸವಣ್ಣನವರು ಅಥವಾ ಶರಣರು ಯಾವುದೇ ಧರ್ಮವನ್ನು ಬೋಧೆ ಮಾಡಿಲ್ಲ ಎಂಬುದು. ಇದು ಹೇಗೆ ?

★ ಲಿಂಗಾಯತ ಸಮಾಜದಲ್ಲಿ ಮಾತನಾಡುವವರ ಸಂಖ್ಯೆ ಬಹಳ. ಏಕೆಂದರೆ ಎಲ್ಲರ ಬತ್ತಳಿಕೆಯಲ್ಲಿ ವಚನಗಳೆಂಬ ಅಸ್ತ್ರಗಳಿವೆ. ಆದರೆ ಯುದ್ಧದ ತರಬೇತಿ ಮೊದಲೇ ಇಲ್ಲ. ಅದರಿಂದಾಗಿ ಕೈಗೆ ಬಂದಂತೆ ವಚನಾಸ್ತ್ರಗಳನ್ನು ಪ್ರಯೋಗಿಸುತ್ತಾರೆ.

ವಚನ ಸಾಹಿತ್ಯ ಬರೀ ಅಧ್ಯಾತ್ಮಿಕ ಉಕ್ತಿಗಳ ಮೊಟೆಯಲ್ಲ. ಬದುಕಿನ ಪರಿಪೂರ್ಣತೆಗೆ ಕೊಡಲ್ಪಟ್ಟ ಶ್ರೇಷ್ಠ ಧಾರ್ಮಿಕ ಸಂವಿಧಾನ. ಹೇಗೆ ಕುರಾನ್‌ನಲ್ಲಿ ಇಸ್ಲಾಂ, ಬೈಬಲದಲ್ಲಿ ಕ್ರೈಸ್ತ ಧರ್ಮ, ಗ್ರಂಥ ಸಾಹೇಬದಲ್ಲಿ ಸಿಖ್ ಧರ್ಮ, ತ್ರಿಪೀಟಕಗಳಲ್ಲಿ ಬೌದ್ಧ ಧರ್ಮ, ವೇದ ಆಗಮಗಳಲ್ಲಿ ಹಿಂದು ಧರ್ಮ ಇದೆಯೋ ಹಾಗೆ ವಚನ ಸಾಹಿತ್ಯದಲ್ಲಿ ಲಿಂಗಾಯತ ಧರ್ಮವಿದೆ. ವೈದಿಕ ಧರ್ಮ ಸೃಷ್ಟಿಸಿದ ಎಲ್ಲ ಸಮಸ್ಯೆಗಳಿಗೆ ಜಾತೀಯತೆ, ಅಸ್ಪೃಶ್ಯತೆ, ಬಹುದೇವತೋಪಾಸನೆ, ಪುರೋಹಿತಶಾಹಿ, ಸ್ತ್ರೀ ಶೋಷಣೆ ಮುಂತಾದ ಎಲ್ಲ ಸಮಸ್ಯೆಗಳಿಗೆ ಧರ್ಮದ ಮೂಲಕವೇ ಪರಿಹಾರ ಕೊಡಬೇಕೆಂದು ಕ್ರಾಂತಿ ಪುರುಷ ಬಸವಣ್ಣನವರು ಲಿಂಗಾಯತ ಧರ್ಮವನ್ನು ಕೊಟ್ಟರು. ಇದನ್ನು ಹೇಳಲು ಸಂಕೋಚವೇಕೆ ?

⍓ ನಾಗರಾಜ, ರಾ.ಬ.ದಳ, ಬಳ್ಳಾರಿ

? ಬಂಜಗೆರೆ ಜಯಪ್ರಕಾಶರ ಕೃತಿ ಆನು ದೇವಾ ಹೊರಗಣವನು ಪುಸ್ತಕ ಅತ್ಯಂತ ಕೆಳಮಟ್ಟದ ಪುಸ್ತಕವಾದ್ದರಿಂದ ನಿಷೇಧಿಸಬೇಕು ಎಂದು ಚಿದಾನಂದ ಮೂರ್ತಿ, ವಿಶ್ವ ಬಸವ ಧರ್ಮ ಟ್ರಸ್ಟ್, ವೀರಶೈವ ಮಹಾ ಸಭೆ ಎಲ್ಲವೂ ಆಗ್ರಹಿಸಿವೆ. ಆದರೆ ಸಚಿವ ಎಂ. ಪಿ. ಪ್ರಕಾಶ ಅವರು ಯಾರನ್ನೂ ಹೆಸರಿಸದೆ ನಿಮ್ಮ ಹೆಸರು ಮಾತ್ರ ಹೇಳಿ ಆಕ್ರೋಶ ವ್ಯಕ್ತಪಡಿಸಿರುವುದು ಏಕೆ ?

★ ಮಾರಿ ಕಣ್ಣು ಕೋಣನ ಮೇಲೆ ಅನ್ನುವಂತೆ, ನಮ್ಮ ಮೇಲೆ ಪೂರ್ವಾಗ್ರಹ ಪೀಡಿತ (ಆಜನ್ಮ ವೈರತ್ವ) ಅಭಿಪ್ರಾಯ ಇರುವುದರಿಂದ, ಎಂ. ಪಿ. ಪ್ರಕಾಶ್‌ರಂಥವರು ನಮ್ಮನ್ನು ದೂಷಿಸಲು ಪ್ರತಿಯೊಂದು ಅವಕಾಶವನ್ನೂ ಬಳಸಿಕೊಳ್ಳುತ್ತಾರೆ. ಅದಕ್ಕಾಗಿ ಚಿಂತಿಸಬೇಕಾಗಿಲ್ಲ. ಅನ್ಯರು ಕೆಡುಕು ಮಾಡಬೇಕೆಂದು ಎಸೆದ ಇಟ್ಟಂಗಿಗಳನ್ನು ಮನೆಕಟ್ಟಲು ಬಳಸಿಕೊಳ್ಳುವವನೇ ಜಾಣ ಎಂಬಂತೆ ನಾವು ಇರಬೇಕು. ಶರಣರಿಗೆ, ಸಮಾಜಕ್ಕೆ ಅನ್ಯಾಯವಾದಾಗ ಪ್ರತಿಭಟಿಸುವವರಲ್ಲಿ ನಾವೇ ಮೊದಲಿಗರು ಎಂಬುದನ್ನು ಎಂ.ಪಿ.ಪ್ರಕಾಶ

ಸೂಚ್ಯವಾಗಿ ಹೇಳಿದ್ದಾರೆಂದು ಸಂತೋಷ ಪಡೋಣ.

⍓ ಶಂಕರಗೌಡ ಪಾಟೀಲ್, ಬೆಂಗಳೂರು.

? ಪ್ರಜಾವಾಣಿಯ ವಾಚಕರ ವಾಣಿಯಲ್ಲಿ ದಿನಾಂಕ : 5-6-2007 ರಂದು ಡಾ|| ಕೆ. ಮರುಳುಸಿದ್ದಪ್ಪ, ಬೆಂಗಳೂರು ಇವರ ಓಲೆ ಮುದ್ರಣಗೊಂಡಿದೆ. ಕರ್ನಾಟಕದಲ್ಲಿ ಲಿಂಗಾಯತರು ಯಾವುದೇ ಸ್ವತಂತ್ರ ಆಲೋಚನೆಗಳನ್ನು ಸಹಿಸುವುದಿಲ್ಲ ಎಂಬ (ಹುಸಿ) ನಂಬಿಕೆ ಪ್ರಚಾರದಲ್ಲಿದೆ. ಮಾಸ್ತಿಯವರ ಚನ್ನಬಸವನಾಯಕ, ಚಿಕವೀರ ರಾಜೇಂದ್ರ, ಮಹಾಚೈತ್ರ, ಧರ್ಮ ಕಾರಣ ಮುಂತಾದುವುಗಳ ವಿರುದ್ಧ ನಡೆದ ಚಳುವಳಿಗೆ ಸರ್ಕಾರಗಳು ಮಣಿದಿವೆ ಎಂದಿದ್ದಾರಲ್ಲದೆ ಬಂಜಗೆರೆಯವರಿಗೆ ಬಸವಣ್ಣನವರು, ಶರಣರ ಬಗ್ಗೆ ಅಗಾಧ ಗೌರವವಿದೆ ಎಂದಿದ್ದಾರೆ. ಇಷ್ಟು ಮಾತ್ರವಲ್ಲ ಬಂಜಗೆರೆಯ ಪುಸ್ತಕವನ್ನು ಸಮರ್ಥಿಸಿಕೊಂಡಿರುವ ಎಂ. ಪಿ. ಪ್ರಕಾಶ ಅವರನ್ನು ಅಭಿನಂದಿಸಿದ್ದಾರೆ. ಇಂಥ ಬುದ್ಧಿ ಜೀವಿಗಳಿಗೆ ಭಾವನೆಗಳೇ ಇಲ್ಲವೆ ?

★ ಭಾವನಾ ರಹಿತ ವೈಚಾರಿಕತೆ ಹೊಂದಿರುವ ಕೆಲವು ಸಾಹಿತಿಗಳು, ನಾಟಕಕಾರರಿಂದ ಬಸವಾದಿ ಪ್ರಮಥರ ತೇಜೋವಧೆ ನಿರಂತರವಾಗಿ ಆಗುತ್ತಿದೆ. ಅಂಥವರಲ್ಲಿ ಡಾ|| ಕೆ. ಮರುಳು ಸಿದ್ದಪ್ಪ ಒಬ್ಬರು. ಏಕೆಂದರೆ ಹಿಂದೆ ಮಹಾಚೈತ್ರ ವಿಷಯದಲ್ಲೂ ಅವರು ಪುಸ್ತಕದ ಪರವಾಗಿ ನಿಂತಿದ್ದರು. ಮತೀಯ ದ್ವೇಷದಿಂದಲೇ ಬರೆದ ಚನ್ನಬಸವನಾಯಕ, ಚಿಕ್ಕವೀರ ರಾಜೇಂದ್ರ ವಿರುದ್ಧ ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಹಿಂದೆಯೇ ತೀವ್ರ ಆಕ್ಷೇಪ ವ್ಯಕ್ತವಾಯಿತು ಅದೇ 'ಚಿಕವೀರ ರಾಜೇಂದ್ರವನ್ನು ಧಾರಾವಾಹಿ ಮಾಡುತ್ತೇವೆ' ಎಂದಾಗ ನಾವು ವಿರೋಧಿಸಿದೆವು. ಮಹಾಚೈತ್ರ ಅಂತೂ ಬಸವಣ್ಣನವರೇ ಆದಿಯಾಗಿ ಇನ್ನಿತರ ಶರಣರ ವ್ಯಕ್ತಿತ್ವಕ್ಕೆ ಮಸಿ ಬಳಿಯುತ್ತದೆ. ಇಂಥ ಕೃತಿಗಳನ್ನು ಸಮರ್ಥಿಸಿಕೊಳ್ಳುವವರಿಗೆ ಹೃದಯವಾದರೂ ಇದೆಯೆ ಎನ್ನಿಸುತ್ತದೆ. ಲಿಂಗಾಯತರು ಸ್ವತಂತ್ರ ಆಲೋಚನೆಗಳನ್ನು ಸಹಿಸಿಕೊಳ್ಳುವುದಿಲ್ಲ ಎಂದು ಮರುಳು ಸಿದ್ದಪ್ಪ ಹೇಳುತ್ತಾರೆ. ಉಳಿದ ಅನೇಕ ಜಾತಿ ಮತಗಳವರಿಗಿಂತಲೂ ಲಿಂಗಾಯತರು ಹೆಚ್ಚು ಹೊಂದಿಕೊಳ್ಳುತ್ತಾರೆ. ಇನ್ನಿತರ ಜಾತಿಗಳವರನ್ನು ಆದರಿಸುತ್ತಾರೆ. ಇವರಲ್ಲಿ ಹೇಡಿತನ ಎನ್ನಿಸುವಷ್ಟು ಸಹನೆ, ಸಹಿಷ್ಣುತೆ ಇದೆ ಎಂತಲೇ ಈ ಧರ್ಮದ ಶರಣರನ್ನೇ ಸಾಹಿತಿಗಳು ನಿಂದಿಸಿ ಪುಸ್ತಕಗಳನ್ನು ಬರೆಯುತ್ತಾರೆಯೇ ವಿನಾ ಅನ್ಯ ಧರ್ಮದವರನ್ನಲ್ಲ. ಲಿಂಗಾಯತರಾಗಿ ಹುಟ್ಟಿಯೂ ಲಂಕೇಶ್, ಶಿವಪ್ರಕಾಶ್ ಸಂಕ್ರಾಂತಿ ಮಹಾಚೈತ್ರದಂತಹ ಪುಸ್ತಕ ಬರೆದರು. ಲಿಂಗಾಯತೇತರರಾದ ಮಾಸ್ತಿ,ಪಿ. ವಿ. ನಾರಾಯಣ, ಬಂಜಗೆರೆಯವರು ಬರೆದರು. ಇದೇ ರೀತಿ ಕಾಲ್ಪನಿಕ ಸೃಷ್ಟಿ ಮಾಡಿ ಇನ್ನಿತರ ಧರ್ಮೀಯ ಮಹಾತ್ಮರ ಬಗ್ಗೆ ಏಕೆ ಬರೆಯುವುದಿಲ್ಲ? ಬಂಜಗೆರೆಯವರಿಗೆ ಶರಣರ ಬಗ್ಗೆ ಬಹಳ ಗೌರವ - ಅಭಿಮಾನ ಇದೆ ಎಂದು ಡಾ|| ಕೆ. ಮರುಳು ಸಿದ್ದಪ್ಪ ಅಭಿಪ್ರಾಯ ನೀಡಿದ್ದಾರೆ. ಈ ದೈತ್ಯ ಅಭಿಮಾನ ಅಫಜಲ್‌ಖಾನ್ ಶಿವಾಜಿಯನ್ನು ಪ್ರೀತಿ (?) ಯಿಂದ ಅಪ್ಪಿಕೊಂಡಂತಿದೆ. ಎಂ. ಪಿ. ಪ್ರಕಾಶರನ್ನು ಮರುಳು ಸಿದ್ದಪ್ಪ ಅಭಿನಂದಿಸಿದ್ದಾರೆ. ಶ್ರೀ ಅನಂತ ಮೂರ್ತಿಯವರು ತನ್ನ ಧರ್ಮದ ಬಗ್ಗೆ ವಿಶ್ಲೇಷಣೆ (ಅವಹೇಳನ) ಮಾಡಿ ಪುಸ್ತಕ ಬರೆದಾಗ ಹೇಗೆ ಅವರು ಕ್ರಾಂತಿಕಾರಿಗಳೋ ಅದೇ ರೀತಿ ಎಂ. ಪಿ. ಪ್ರಕಾಶ್, ಮರುಳು ಸಿದ್ದಪ್ಪ ಸಹ, ಓತಿಕಾಟಕ್ಕೆ ಬೇಲಿ ಸಾಕ್ಷಿ, ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಎಂದಂತೆ. ಒಟ್ಟಾರೆ ನಿರ್ವೀರ್ಯರಾದ ಅನುಯಾಯಿಗಳನ್ನು ಪಡೆದ ಬಸವಾದಿ ಪ್ರಮಥರದೇ ದುರಾದೃಷ್ಟ ಎನ್ನದೆ ಗತ್ಯಂತರವಿಲ್ಲ.

ಸಾಮಾನ್ಯವಾಗಿ ಒಂದು ಧರ್ಮದ ನೇತಾರರನ್ನು ಕುರಿತು ಅವಮಾನ ಮಾಡಿದಾಗ ಬೇರೆ ಧರ್ಮಗಳವರು ತಮ್ಮ ಒಳಭೇದಗಳನ್ನು ಮರೆತು ಪ್ರತಿಭಟಿಸುತ್ತಾರೆ. ಲಿಂಗಾಯತ ಸಮಾಜದಲ್ಲಿ ಹಾಗಲ್ಲ. ಒಳಗೇ ಇರುವ ಕೆಲವು ಬುದ್ಧಿ ಜೀವಿಗಳೆಂದು ಬೀಗುವವರು ಮತ್ತೆ ಕೆಲವು ಮಠಾಧೀಶರೇ ಪಿತೂರಿ ಮಾಡುತ್ತಾರೆ. ಮಹಾಚೈತ್ರ ಹೋರಾಟದಲ್ಲಿ ನಮಗೆ ಅನುಭವವಾಗಿದೆ. ಆಗ ಶ್ರೀ ಪಿ.ಜಿ.ಆರ್ ಸಿಂಧ್ಯ ಗೃಹಸಚಿವರಾಗಿದ್ದರು. ಜನರ ಆಕ್ರೋಶ ನೋಡಿ, ರಾ.ಬ.ದಳದ ಪ್ರತಿನಿಧಿಗಳ ಬಳಿಗೆ ಬಂದು ಚರ್ಚಿಸಿ ಪಠ್ಯವಾಗಿದ್ದ ಮಹಾಚೈತ್ರ ರದ್ದು ಮಾಡಿಸಿದರು. ಅದೇ ಎಂ.ಪಿ. ಪ್ರಕಾಶ್ ಎಷ್ಟು ಹಠ ಸಾಧಿಸುತ್ತಿದ್ದಾರೆ. ಇವರ ಬದಲು ಲಿಂಗಾಯತೇತರರು ಗೃಹ ಸಚಿವರಾಗಿದ್ದರೆ ಇಷ್ಟು ಹೊತ್ತಿಗೆ ಬಂಜಗೆರೆ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದರು.

ಸಾಮಾನ್ಯ ವ್ಯಕ್ತಿಯಿಂದಲೇ ಪ್ರತಿಭೆಯ ಹೆಜ್ಜೆ ಇಟ್ಟು ದೊಡ್ಡ ಹುದ್ದೆಗೇರಿದರೂ ಧರ್ಮ - ಸಮಾಜಗಳನ್ನು ಕಡೆಗಣಿಸದ ತ್ರಿವಿಧ ದಾಸೋಹಿ ಡಾ|| ಸಿ. ಸೋಮಶೇಖರ, ಐ.ಎ.ಎಸ್ ಇವರಿಗೆ ನೀಡುತ್ತಿರುವ ಅಭಿನಂದನ ಪತ್ರ.

ನಮ್ಮ ಬಂಧುಗಳೇ, 1954ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಲ್ಲಿ ರೈತ ದಂಪತಿಗಳಾದ ಚಿಕ್ಕ ವೀರಪ್ಪ ಮತ್ತು ನಂಜಮ್ಮನವರ ಸುಪುತ್ರರಾಗಿ ಜನಿಸಿದ ನೀವು 1975ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಕಾಂ. ಪದವಿ ಪಡೆದಿರಿ. ಬಾಲ್ಯದಿಂದಲೇ ತೀಕ್ಷ್ಣಮತಿಯಾಗಿದ್ದ ನೀವು ಎಸ್.ಎಸ್.ಎಲ್.ಸಿ.ಯಿಂದ ಎಂ.ಕಾಂ. ವರೆಗೂ ಪ್ರಥಮ ದರ್ಜೆಯಲ್ಲೇ ತೇರ್ಗಡೆಯಾಗುತ್ತ ತಾಯಿ ತಂದೆಗಳಿಗೆ ಮಾತ್ರವಲ್ಲ ಶಿಕ್ಷಕರಿಗೂ ಅಚ್ಚುಮೆಚ್ಚಾಗಿದ್ದೀರಿ.

1975 ರಿಂದ 1978ರವರೆಗೆ ಬೆಂಗಳೂರಿನ ಕೆ.ಎಲ್.ಇ. ಕಾಲೇಜಿನಲ್ಲಿ ವಾಣಿಜ್ಯ ಅಧ್ಯಾಪಕರಾಗಿ ಕಾಯಕ ನಿರ್ವಹಿಸಿದಿರಿ. 1979 ರಿಂದ 1982ರವರೆಗೆ ರಾಜ್ಯ ಸರ್ಕಾರದ ಯುವಜನ ಸೇವಾ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯ ಮಾಡಿದಿರಿ.

ಕನ್ನಡ ಪ್ರೇಮಿಗಳೇ,

1981ರಲ್ಲಿ ಅಖಿಲ ಭಾರತ ಸೇವಾ ಪರೀಕ್ಷೆಯನ್ನು ಕನ್ನಡದಲ್ಲಿಯೇ ಉತ್ತರಿಸಿ ಎಲ್ಲರಿಗೂ ಹೆಮ್ಮೆಯನ್ನು ಉಂಟು ಮಾಡಿದಿರಿ. ಕನ್ನಡದಲ್ಲಿ ಏನಿದೆ ಎಂದು ಮೂಗೆಳೆಯುವ ಸಿರಭಿಮಾನಿಗಳಿಗೆ ಕನ್ನಡದಲ್ಲಿ ಎಲ್ಲವೂ ಇದೆ ಎಂದು ಸಾಧಿಸಿ ತೋರಿಸಿದಿರಿ. ಅಸಿಸ್ಟೆಂಟ್ ಕಲೆಕ್ಟರ್ (ಕಸ್ಟಮ್ಸ್) ಆಗಿ ಆಯ್ಕೆ ಆದರೂ ನಾಡು ನುಡಿಯ ಮೇಲಿನ ಅಭಿಮಾನದಿಂದ ಹುದ್ದೆಯನ್ನು ಸ್ವೀಕರಿಸಲಿಲ್ಲ. 1982ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಕರ್ನಾಟಕ ಆಡಳಿತ ಸೇವೆಗೆ ಅಸಿಸ್ಟೆಂಟ್ ಕಮೀಷನರ್ ಆಗಿ ಆಯ್ಕೆಯಾದಿರಿ. 1982 ರಿಂದ 84ರವರೆಗೆ ಧಾರವಾಡದಲ್ಲಿ ಅಸಿಸ್ಟೆಂಟ್ ಕಮೀಷನರ್ ತರಬೇತಿ ಪಡೆದು, 1984 ರಿಂದ 86 ರವರೆಗೆ ಧಾರವಾಡ ಜಿಲ್ಲೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಉಪ ನಿರ್ದೇಶಕರಾಗಿ ಸೇವೆ ಸಲ್ಲಿಸಿದಿರಿ. 1986 ರಿಂದ 1989ರವರೆಗೆ ಮಂಗಳೂರಿನಲ್ಲಿ ಉಪವಿಭಾಗಾಧಿಕಾರಿಗಳಾಗಿ ಮತ್ತು ಉಪವಿಭಾಗ ದಂಡಾಧಿಕಾರಿಗಳಾಗಿ ಕಾರ್ಯ ಮಾಡಿದಿರಿ. 1990 ರಿಂದ 1991ರವರೆಗೆ ಕರ್ನಾಟಕ ಗೃಹ ಮಂಡಳಿಯಲ್ಲಿ ಕಾರ್ಯದರ್ಶಿಗಳಾಗಿ, 1991 ರಿಂದ 1995ರವರೆಗೆ ಬೆಂಗಳೂರು ಜಿಲ್ಲೆಯಲ್ಲಿ ವಿಶೇಷ ಜಿಲ್ಲಾಧಿಕಾರಿಗಳಾಗಿ (ಅಭಿವೃದ್ಧಿ) ಸೇವೆ ಮಾಡಿದ್ದೀರಿ. 1995 ಜೂನ್‌ನಿಂದ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಕಾರ್ಯದರ್ಶಿಗಳಾಗಿ, 1997 ರಿಂದ 1999ರವರೆಗೆ ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಯಾಗಿ (ಕಂದಾಯ) ಮತ್ತು ಅತಿರಿಕ್ತ ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ಕಾರ್ಯ ಮಾಡಿದ್ದೀರಿ.

ಈವರೆಗೂ ನಿಮ್ಮ ಆಡಳಿತ ನಿರ್ವಹಣೆಗೆ ಸಾಕ್ಷಿಯಾಗಿ ಹುದ್ದೆಗಳು ಒದಗಿ ಬಂದರೆ ನಂತರ ನಿಮ್ಮ ಪ್ರತಿಭೆಯನ್ನು ಬೆಳಕಿಗೆ ತರುವ ಹುದ್ದೆ ಪ್ರಾಪ್ತಿಯಾದವು. 2000 ಇಸವಿಯ ಜುಲೈದಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ, 2002 ರಿಂದ 03ರವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಕಾಯಕ ಮಾಡಿದಿರಿ. 2003ರ ಮೇ ದಿಂದ 2004ರ ಮಾರ್ಚ್‌ವರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸೇವೆ ಗೈದಿದ್ದೀರಿ. 2006 ರಿಂದ ಬೆಂ.ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದೀರಿ.

ಡಾಕ್ಟರೇಟ್ ಸಾಧನೆ :

ಬಿಡುವಿಲ್ಲದ ಜವಾಬ್ದಾರಿಯ ನಡುವೆಯೂ "ವಚನಗಳಲ್ಲಿ ಸಾಮಾಜಿಕ ಚಿಂತನೆ" ಎಂಬ

ವಿಷಯದ ಬಗ್ಗೆ ಪ್ರಬಂಧ ಮಂಡಿಸಿ ಹಂಪಿ ವಿಶ್ವ ವಿದ್ಯಾಲಯದಿಂದ ಡಾಕ್ಟರೇಟ್ ಪಡೆದಿರಿ. ಚಿನ್ನದ ಹೂವಿಗೆ ಸುವಾಸನೆ ಬಂದಂತೆ ದಿನಾಂಕ : 1-2-2007ರಂದು ತಮಗೆ ಐ.ಎ.ಎಸ್‌ಗೆ ಪದೋನ್ನತಿಯಾದಾಗ ಸಂಭ್ರಮಿಸಿದ ಗುರು - ಹಿರಿಯರು, ಬಂಧು - ಮಿತ್ರರು ಅಸಂಖ್ಯಾತರು.

ಪ್ರತಿಭೆಯ ಚಿಲುಮೆ :

ದೈವೀದತ್ತ ಪ್ರತಿಭೆಯ ಆಗರವಾದ ನೀವು ಉತ್ತಮ ವಾಗ್ಮಿಗಳು, ಸಾಹಿತಿಗಳು ವಿದ್ಯಾರ್ಥಿ ದೆಸೆಯಲ್ಲಿಯೇ ನೂರಾರು ಕನ್ನಡ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ಬಹುಮಾನ ಗಿಟ್ಟಿಸುತ್ತಿದ್ದಿರಿ. ಪೂಜ್ಯ ಲಿಂಗಾನಂದ ಸ್ವಾಮಿಗಳು, ಬಿ.ಕಾಂ. ಫೈನಲ್ ವಿದ್ಯಾರ್ಥಿಯಾಗಿದ್ದಾಗ ನೀವು ಮಾಡಿದ ಭಾಷಣದಿಂದ ಹರ್ಷಗೊಂಡು ನಿಮ್ಮ ವಾಗ್ಮಿತ್ವವನ್ನು ಕೊಂಡಾಡುತ್ತಿದ್ದರು. ನೀವಾದರೂ ಅಷ್ಟೇ, ಅಂದು ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಜಯದೇವ ವಿದ್ಯಾರ್ಥಿ ನಿಲಯದಲ್ಲಿ ಮಾಡಿದ ಭಾಷಣದಿಂದ ತುಂಬಾ ಪ್ರಭಾವಿತರಾಗಿದ್ದಿರಿ ಎಂಬುದು ತಿಳಿಯಿತು. ಕಂಚಿನ ಕಂಠ, ಸ್ಪುಟವಾದ ಕನ್ನಡದ ಸೊಗಸು, ಅದರಲ್ಲಿ ವಚನ ಸಾಹಿತ್ಯ ಉಕ್ತಿಯ ಗೋಡಂಬಿ ದ್ರಾಕ್ಷಿ ; ಹೀಗಾಗಿ ನಿಮ್ಮ ಭಾಷಣ ಕೇಳುಗರಿಗೆ ಸಂತೋಷದ ಔತಣ ನೀಡುತ್ತದೆ. 1986ರಲ್ಲಿ ಚಿಂತನ ಚಿಲುಮೆ ಎಂಬ ಪ್ರಬಂಧಗಳ ಸಂಕಲನ, ಆಡಳಿತದಲ್ಲಿ ಕನ್ನಡ 1996ರಲ್ಲಿ ಚಿಂತನ ಕಿರಣ - ಹೀಗೆ ಸಾಹಿತ್ಯ ಕೃತಿಗಳನ್ನು ಹೊರ ತಂದಿದ್ದೀರಿ.

ಬಸವ ತತ್ವ ಪ್ರೇಮಿಗಳೇ,

ಬಹುಪಾಲು ಅಧಿಕಾರಿಗಳು ಧರ್ಮದ ಬಗ್ಗೆ ಉದಾಸೀನತೆ, ನಿರಭಿಮಾನ ತಾಳಿರುತ್ತಾರೆ. ನೀವಾದರೋ ಧೈರ್ಯವಾಗಿ ಉತ್ತಮ ಮೌಲ್ಯಗಳನ್ನು ಪ್ರೋತ್ಸಾಹಿಸುತ್ತೀರಿ. ಅದರಲ್ಲಿಯೂ ಗುರು ಬಸವಣ್ಣನವರ ತತ್ವಗಳು ಮಾನವ ಸಮಾಜಕ್ಕೆ ಅಮೃತ ಸಂಜೀವಿನಿ ಎಂದು ತಿಳಿದು ಉತ್ತಮ ರೀತಿಯಲ್ಲಿ ಪ್ರಚಾರ ಮಾಡಲು ಹಿಂಜರಿಯುವುದೇ ಇಲ್ಲ. ಬಸವ ವೇದಿಕೆ ಎಂಬ ಸಂಸ್ಥೆಯನ್ನು ಕಟ್ಟಿ, ಕಾರ್ಯಾಧ್ಯಕ್ಷರಾಗಿ ಪ್ರತಿವರ್ಷದ ಬಸವ ಜಯಂತಿಯಂದು ಬಸವ ತತ್ವ ಪ್ರಚಾರದಲ್ಲಿ ನಿರತರಾಗ ಅಥವಾ ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹಾನುಭಾವರಿಗೆ "ಬಸವ ಶ್ರೀ" ಪ್ರಶಸ್ತಿಯನ್ನು ಮತ್ತು "ವಚನ ಶ್ರೀ" ಪ್ರಶಸ್ತಿಯನ್ನು ನೀಡುತ್ತಿದ್ದೀರಿ. ಈ ಬಸವ ಜಯಂತಿಯಂದು "ಎದೆ ತುಂಬ ಹಾಡುವೆನು" ಎಂಬ ಕಾರ್ಯಕ್ರಮದಲ್ಲಿ ಮೊಟ್ಟ ಮೊದಲು ವಚನವನ್ನು ಹಾಡಿ ಅದರ ಅರ್ಥ ಹೇಳುವ ಶ್ರೇಷ್ಠ ಗಾಯಕ ಶ್ರೀ ಎಸ್. ಪಿ. ಬಾಲಸುಬ್ರಹ್ಮಣ್ಯಂ ಇವರಿಗೆ ಬಸವ ಶ್ರೀ ಪ್ರಶಸ್ತಿ ನೀಡಿದುದು ನಾಡಿನ ಎಲ್ಲ ಬಸವಾಭಿಮಾನಿಗಳಿಗೆ ಹರ್ಷದ ಹೊನಲನ್ನೇ ಹರಿಸಿದೆ.

ದಾನ ದಾಸೋಹ ಪ್ರೇಮಿಗಳೇ,

ನಿಮ್ಮ ವೃತ್ತಿ ಜೀವನದೊಡನೆ ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ನೀವು ತೊಡಗಿಸಿಕೊಂಡಿರುವುದು ಒಂದು ವಿಶೇಷ. "ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎಂಬ ಶರಣ ವಾಣಿಯಂತೆ ನಿಮ್ಮ ಮನೆ ತುಂಬಿದ ಮಡದಿ ಶರಣೆ ಸರ್ವಮಂಗಳಾ ಅವರು ನೀವು ಮಾಡುವ ದಾನ- ದಾಸೋಹಗಳಿಗೆ ಪ್ರೋತ್ಸಾಹಕರಾಗಿರುವುದು ಅಭಿನಂದನಾರ್ಹ ಗುರು ಬಸವಣ್ಣನವರ ಕಾಯಕ ಮತ್ತು ದಾಸೋಹ ಕಲ್ಯಾಣ ರಾಜ್ಯ ನಿರ್ಮಾಣಕ್ಕೆ ಸೂತ್ರಗಳು. ಇದನ್ನು ತಾವು ಅಳವಡಿಸಿಕೊಂಡು ಉತ್ತಮ ದಾಸೋಹಿಯಾಗಿ ಸಾಕಷ್ಟು ಸಂಘ - ಸಂಸ್ಥೆಗಳ ನೆರವಿಗೆ ಧಾವಿಸುತ್ತೀರಿ.

ಬರವಣಿಗೆ, ವಾಗ್ಮಿತ್ವ, ಸಮಾಜ ಸೇವೆ ಈ ಎಲ್ಲವನ್ನೂ ಮೇಳವಿಸಿಕೊಂಡಿರುವ ನಿಮ್ಮ ಬಹುಮುಖಿ ಕಾರ್ಯ ಸಾಧನೆಯನ್ನು ಕಂಡು ಸಹರ್ಷಗೊಂಡಿರುವ ನಾವು ಬಸವ ಧರ್ಮಪೀಠ, ರಾಷ್ಟ್ರೀಯ ಬಸವ ದಳಗಳ ಪರವಾಗಿ ಬಸವ ರಕ್ಷೆ (ಶಾಲು) ಯೊಡನೆ ಶುಭವನ್ನು ಹಾರೈಸುತ್ತಿದ್ದೇವೆ. ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರು ನಿಮಗೆ, ಶ್ರೀಮತಿ ಸರ್ವಮಂಗಳಾ ಅವರಿಗೆ, ನಿಮ್ಮ ಸಮಸ್ತ ಪರಿವಾರಕ್ಕೆ ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು

ನೀಡಲೆಂದು, ನಿಮ್ಮಿಂದ ನಮ್ಮ ರಾಜ್ಯ, ರಾಷ್ಟ್ರ, ಸಮಾಜ, ಧರ್ಮಕ್ಕೆ ಹೆಚ್ಚಿನ ಸೇವೆ ಸಲ್ಲಿಸುವ ತಕ್ತಿ ಮತ್ತು ಸ್ಫೂರ್ತಿಯನ್ನು ನೀಡಲೆಂದು ಹಾರೈಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಕೋಶಾಧ್ಯಕ್ಷರು, ಬಸವ ಧರ್ಮಪೀಠ
ಕೂಡಲ ಸಂಗಮ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮಪೀಠ
ಕೂಡಲ ಸಂಗಮ

ಬಸವ ಮಂಟಪ, ಬೆಂಗಳೂರು, 22-04-2007

ಸಚ್ಚಿದಾನಂದನ ಮುಡಿಯ ಹೂವುಗಳು

ಹೇಗೆ ಬಣ್ಣಿಸಲಿ ನಾನು ನನ್ನ ಮಾತೆಯ
ಹೇಗೆ ಬಣ್ಣಿಸಲಿ ನನ್ನ ಮಾತಾದ್ವಯರ ॥ ಪ ॥

ನನ್ನ ಮಾತೆಯರೆಂದು ಮಾತನಾಡಲು ಹೋದೆ
ಲೌಕಿಕಕೆ ಮೊಗ ಮಾಡಿ ನಿಂತಿತವರಲ್ಲ
ನನ್ನವರು ಅನ್ಯರು ಎಂದೆಂಬ ಭೇದವನು
ಭೇದಿಸಿ, ಚೇತನವ ಜಗಕೆ ತೋರುತ್ತಿಹರಿವರು ॥ ಅ.ಪ. ॥

ಭಾನು ಬೆಳಗಿನ ತೆರದಿ ದಿನಚರಿಯ ಪ್ರವಚನದಿ
ಎಲ್ಲೆಲ್ಲೂ ಪಸರಿಸುತ ಬಸವ ತತ್ವದ ಘನವ
ಮನೆ ಮಾಡಿ ನಿಂದಿಹರು ತತ್ವ ನಿಷ್ಠೆರ ಮನದಿ
ಮುದಗೊಳಿಪರೆಂದೆಂದೂ ಮರೆವೆ ದೂಡುತಲಿ ॥ 1 ॥

ಗಿರಿ ಬೆಟ್ಟ ಶಿಖರಗಳು ಹೋಲಿಕೆಗೆ ಸಮವಲ್ಲ
ಹರಿವ ನದಿ ತೆರೆಗಳವು ಕೂಗಿ ಹೇಳುತಿಹವಲ್ಲ
ಸೃಷ್ಟಿಗೊಡೆಯನು ಅಟ್ಟಿ ಕಳುಹಿದ ಇವರನ್ನು
ನೆಟ್ಟನೆ ನೋಡಿದೆ ಕಾಣಲಾರದಿವರ ನಿಲುವನ್ನು ॥ 2 ॥

ಮರುಗ- ಮಲ್ಲಿಗೆಗಳಿಗೆ ಹೋಲಿಸಲು ನಾನೋದೆ
ಪ್ರತಿ ಸಂಜೆ ಬಾಡಿದವೆ ನಿತ್ಯ ಅರಳಿದ ಹೂವು
ಬಾಡಲಾರದ ಜೋಡಿ ಹೂವುಗಳಿವು ಕೇಳು
ಸಚ್ಚಿದಾನಂದನ ಮುಡಿಗೆ ಮೀಸಲಿವು ನೋಡು ॥ 3 ॥

(ಪೂಜ್ಯ ಮಾತಾಜಿ ಮತ್ತು ಪೂಜ್ಯ ಗಂಗಾ ಮಾತಾಜಿ ಅವರದು ಕುರಿತು ಬರೆದ ಅನಿಸಿಕೆಗಳು)

- ವೀರೇಶ್ ಕುಮಾರ್,
ಬಸವ ಗಂಗೋತ್ರಿ, ದಿ: 16-10-2006

ಮನವು ಲಿಂಗದೇವಂಗೆ ಆವಾಸಸ್ಥಾನವಾಗಲಿ
ಸತ್ ಚಿಂತನೆಯು ದೇವಗೆ ಪ್ರಾರ್ಥನೆಯಾಗಲಿ
ಸದಾಚಾರವು ದೇವಗೆ ಅರ್ಚನೆಯಾಗಲಿ
ಸತ್ಯ ಶುದ್ಧ ಕಾಯಕದ ಫಲವು ನೈವೇದ್ಯವಾಗಲಿ
ಹೃದಯ ತುಂಬಿ ಅರ್ಪಿಸುವ ದಾಸೋಹವೇ ಪ್ರಸಾದವಾಗಲಿ
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವೆ
ಬಸವ ಪಥದಿ ನಡೆವುದೇ ಆತ್ಮ ಸಮರ್ಪಣೆಯಾಗಲಿ
ಬಸವ ಗುರುವಿನ ಕಾರುಣ್ಯದಿಂದ ಜನ್ಮ ಸಾರ್ಥಕವಾಗಲಿ

- ಬಸವ ಕಂದ, ಮೈಸೂರು

ಮಾರ್ಚ್ 18, 19,20ರಂದು ಮಹಾರಾಷ್ಟದ ಅಲ್ಲಮ ಪ್ರಭು ಗಿರಿಯಲ್ಲಿ ನಡೆದ 2ನೆಯ ಲಿಂಗಾಯತ ಗಣ ಮೇಳದ ಚಿತ್ರಗಳು



ಶರಣ ಅಶೋಕ ಸ್ವಾಮಿಯವರಿಂದ ಪ್ರಸ್ತಾವನೆ, ಉದ್ಘಾಟನಾ ಸಮಾವೇಶದಲ್ಲಿ.



ದಿ.19-3-2007 ರಂದು ನಡೆದ ಪೀಠಾರೋಹಣ ಕಾರ್ಯಕ್ರಮದಲ್ಲಿ ಶರಣೆ. ಮಾಲೂತಾಯಿ ಅವರಿಂದ ಪ್ರಾಸ್ತಾವಿಕ ಭಾಷಣ.




ಅಲ್ಲಮ ಪ್ರಭು ಗಿರಿಯಲ್ಲಿ ನೆಲಸಿರುವ ಪೂಜ್ಯ ಬಸವಲಿಂಗ ಸ್ವಾಮಿಗಳಿಂದ ಭಾಷಣ



ಸ್ಥಿರ ಜಂಗಮರಾಗಿ ಕಾರ್ಯ ಮಾಡುತ್ತಿರುವ ಪೂಜ್ಯ ಬಸವಲಿಂಗ ಸ್ವಾಮಿಗಳಿಗೆ ಮಾತಾಜಿಯವರಿಂದ ಆಶೀರ್ವಾದ



ದಿ.19-3-2007ರ ಪೀಠಾರೋಹಣ ಸಮಾರಂಭದ ಉದ್ಘಾಟನೆ ತೋಟಗಾರಿಕೆ ಸಚಿವ ಶಶಿಕಾಂತ ನಾಯಕರಿಂದ




ಪೀಠಾರೋಹಣ ಗೈದ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಗೆ ಸಚಿವ ಶಶಿಕಾಂತ ನಾಯಕ ಅವರಿಂದ ಗೌರವಾರ್ಪಣೆ




ಜಗದ್ಗುರು ಅಲ್ಲಮ ಪ್ರಭು ಯೋಗ ಪೀಠಾರೋಹಣಕ್ಕೆ ಮೊದಲು ಡೋಂಗರದ ಮೇಲಿನ ದಿವ್ಯಾಲಯದ ನಂದಾದೀಪದಿಂದ ಜ್ಯೋತಿಯನ್ನು ಹಚ್ಚಿಕೊಂಡು ಜಂಗಮ ಮೂರ್ತಿಗಳು ಆಗಮಿಸುತ್ತಿದ್ದಾರೆ.



ಪೀಠಾರೋಹಣಕ್ಕೆ ಮೊದಲು ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳಿಗೆ ಪೂಜ್ಯ ಮಾತಾಜಿಯವರಿಂದ ಭಸ್ಮಧಾರಣೆ ಮತ್ತು ಆಶೀರ್ವಾದ.




ಪೀಠಾರೋಹಣದ ಬಳಿಕ ರುದ್ರಾಕ್ಷಿ ಮುಕುಟ ಧಾರಣೆ




ಪೂಜ್ಯ ಮಾತಾಜಿಯವರಿಂದ ಆಶೀರ್ವಾದ ಪೂರ್ವಕವಾಗಿ ಪುಷ್ಪವೃಷ್ಟಿ



ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಗೆ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳಿಂದ ಮಾಲಾರ್ಪಣೆ



ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳಿಂದ ಮಾಲಾರ್ಪಣೆ



ಶರಣೆಯರ ಸಮೂಹದಿಂದ ಆರತಿ



ಶರಣರ ಸಮೂಹದಿಂದ ಮಾಲಾರ್ಪಣೆ



ದಿ.20-3-2007 ಸಮಾರೋಪ ಸಮಾರಂಭದ ಉದ್ಘಾಟನೆ ಕರ್ನಾಟಕ ರಾಜ್ಯ
ರಾ.ಬ.ದಳ ಅಧ್ಯಕ್ಷ ವೀರಣ್ಣ ಲಿಂಗಾಯತ್ ಅವರಿಂದ



ಶರಣೆ. ಮಾಲೂತಾಯಿಯವರ ಮೊಮ್ಮಕ್ಕಳಾದ ವಿಶ್ವಕಲ್ಯಾಣಿ, ಬಸವ ಜ್ಯೋತಿಯವರಿಂದ ನೃತ್ಯಾಭಿನಯ



ಶರಣ ಶೈಲದ ಮೇಲೆ ಶರಣ ಒಕ್ಕಲಿಗ ಮುದ್ದಣ್ಣ ಪತ್ನಿ ಸಹಿತವಾಗಿ
ಬೀಜ ಬಿತ್ತುತ್ತಿರುವ ಮೂರ್ತಿಗಳು



ಬಸವ ಧ್ಯಾನ ಮಂಟಪ,ಬಸವ ಕಲ್ಯಾಣದ ಬಸವ ಮಹಾಮನೆಯ ಆವರಣದಲ್ಲಿರುವ
ಶರಣ ಶೈಲದಲ್ಲಿ ಕೆತ್ತಲ್ಪಟ್ಟಿರುವ ಗವಿ - ಬಸವ ಧ್ಯಾನಮಂಟಪ ಒಂದು ಭಾಗ

CPMG/KA/BGW-50/2006-2008 WPP (W)-17 R.No.19980/70



108 ಅಡಿ ಪುತ್ಥಳಿಯ ಕೆಳಗಿನ ಆಸನ ಪೀಠ ಎರಡು ಅಂತಸ್ತಿನಲ್ಲಿ



ಅಕ್ಕಮಹಾದೇವಿ ಗವಿ– ಲ್ಯಾಟರೈಟ್ ಕಲ್ಲಿನಲ್ಲಿ ಕೆತ್ತಲಾಗುತ್ತಿದೆ.